i-FURNITO ELECTRONIC FURNITURE LOCKS
EUROPA ANTI-THEFT ENGINEERING
Lock with Confidence
Unlock With Convenience

Available At All Leading Hardware Shops
For Free Demo Call : 9448044430
(Within Mysore City Limits)

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


47 ಮೈಸೂರು ಮಿತ್ರ ಸ್ಥಾಪನೆ: 1980 ಅತ್ಯುತ್ತಮ ಪತ್ರಿಕೋದ್ಯಮ

ಜೂನ್ 7 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 52 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಯಶಸ್ವಿ ಕಂಚಿ ಸೊಸೈಟಿ

D. D. Urs Road, MYSORE
Ph: 0821-2431830 / 4262458

ರಾಮಲಿಂಗಾರೆಡ್ಡಿ ರಾಜೀನಾಮೆ ವಾಪಸ್

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪಕ್ಷದ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸಂಧಾನ ಯಶಸ್ವಿ

ಬೆಂಗಳೂರು, ಜೂ.6(ಕೆಎಂಶಿ)– ತಾವು ಬಯಸಿದ ಖಾತೆ ನೀಡಲಿಲ್ಲ ಎಂದು ಅಸಮಾಧಾನಗೊಂಡು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಹಿರಿಯ ನಾಯಕ ರಾಮಲಿಂಗಾರೆಡ್ಡಿ ಹೈಕಮಾಂಡ್ ಸೇರಿ ದಂತೆ ಹಲವು ನಾಯಕರ ಸಂಧಾನಕ್ಕೆ ಮಣಿದು ತಮ್ಮ ರಾಜೀನಾಮೆ ವಾಪಸ್ ಪಡೆದಿದ್ದಾರೆ.

ಸಂಪುಟ ರಚನೆಗೂ ಮುನ್ನ ತಮಗೆ ನೀಡಿದ ಭರವಸೆಯಂತೆ ಬೆಂಗಳೂರು ನಗರಾಭಿವೃದ್ಧಿ ಇಲಾಖೆ ಜವಾಬ್ದಾರಿ ನೀಡಲಿಲ್ಲ ಎಂದು ಬೇಸರಗೊಂಡು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ, ಸಂಧಾನಕ್ಕೂ ಮಣಿಯದೆ ತಮಿಳುನಾಡಿನ



ರಾಮಲಿಂಗಾರೆಡ್ಡಿ

ಕೃಷ್ಣಗಿರಿಗೆ ತೆರಳಿದ್ದ ರಾಮಲಿಂಗಾರೆಡ್ಡಿ ಬೆಳಿಗ್ಗೆ ಬೆಂಗಳೂರಿಗೆ ವಾಪಸ್ಸಾದರು.

ಆನಂತರ ಹಲವು ನಾಟಕೀಯ ವಿದ್ಯಮಾನಗಳು ನಡೆದವು. ಮೊದಲಿಗೆ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಖಾಸಗಿ ಹೋಟೆಲ್‌ನಲ್ಲಿ ರಾಮಲಿಂಗಾರೆಡ್ಡಿ ಅವರ ಜೊತೆಗೆ ಸುದೀರ್ಘ ಮಾತುಕತೆ ನಡೆಸಿ ಮನವೊಲಿಸುವ ಪ್ರಯತ್ನ ನಡೆಸಿದರು. ಇದಾದ ಬಳಿಕ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಮಲಿಂಗಾರೆಡ್ಡಿ ಅವರಿಗೆ ಕರೆ ಮಾಡಿ ಮಾತುಕತೆ ನಡೆಸಿದರು.

ಬಳಿಕ ಶಾಸಕರ ಭವನಕ್ಕೆ ಆಗಮಿಸಿದ ರಾಮಲಿಂಗಾರೆಡ್ಡಿ ಅವರ ಜೊತೆ ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ್ ಸಂಧಾನ ಮಾತುಕತೆ ನಡೆಸಿದರು. ಈ ವೇಳೆ ಸದ್ಯದಲ್ಲೇ ನಡೆಯಲಿರುವ ಸಂಪುಟ ವಿಸ್ತರಣೆ ಸಮಯದಲ್ಲಿ ತಮ್ಮ ಅನುಭವಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಜವಾಬ್ದಾರಿ ನೀಡಲಾಗುವುದು ಅಷ್ಟೇ ಅಲ್ಲ ■ 6ನೇ ಪುಟಕ್ಕೆ

ರಾಮಲಿಂಗಾರೆಡ್ಡಿ ರಾಜೀನಾಮೆ ಹಿಂಪಡೆದಿದ್ದಾರೆ



ಬೆಂಗಳೂರು: ಸಚಿವ ಸ್ಥಾನಕ್ಕೆ ನೀಡಿದ್ದ ರಾಜೀನಾಮೆಯನ್ನು ರಾಮ ಲಿಂಗಾರೆಡ್ಡಿ ಹಿಂಪಡೆದಿದ್ದಾರೆ ಎಂದು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಶನಿವಾರ ಹೇಳಿದ್ದಾರೆ. ಖಾತೆ ಹಂಚಿಕೆ ಅಸಮಾಧಾನದಿಂದ ಬೇಸರಗೊಂಡು ಅವರು ರಾಜೀನಾಮೆ ನೀಡಿದ್ದರು. ತಪ್ಪು ಗ್ರಹಿಕೆಯಿಂದ ಹೀಗಾ ಗಿದ್ದು, ಅವರು ಸಂಪುಟದಲ್ಲಿ ಮುಂದುವರಿಯಲಿದ್ದಾರೆ. ಬಿಜೆಪಿ ಸುಮ್ಮನೆ ಇದನ್ನು ವಿವಾದ ಮಾಡಿತು. ■ 6ನೇ ಪುಟಕ್ಕೆ

22 ಕ್ಯಾರೆಟ್ ಚಿನ್ನದ ದರ @ ತೊಳಸಿ
ತೊಳಸಿ ಜ್ಯುಯೆಲ್ಸ್
THOLASI JEWELS
₹ 14,000/-
ಅಶೋಕ ರಸ್ತೆ, ಮೈಸೂರು. ಫೋ: 0821–2521926,
ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು. ಫೋ: 0821–2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು, ನಂಜನಗೂಡು. ಫೋ: 08221–200926

SITE FOR SALE
30x40
SITE FOR SALE
at Srinagar 'B' Block
For more details call :
95358 61633

ಸಿಇಟಿ ಫಲಿತಾಂಶ ಪ್ರಕಟ: ಬಾಲಕಿಯರೇ ಮೇಲುಗೈ

ಇಂಜಿನಿಯರಿಂಗ್‌ನಲ್ಲಿ ಬೆಂಗಳೂರಿನ ತನಿಷಾ ಕಾರ್ತಿಕ್; ಪಶು ವೈದ್ಯಕೀಯ, ನರ್ಸಿಂಗ್, ಯೋಗ, ನ್ಯಾಚುರೋಪತಿ, ಬಿ–ಫಾರ್ಮಾ, ಫಾರ್ಮಾ–ಡಿಯಲ್ಲಿ ಬೆಂಗಳೂರು ನಯನಾ ಗೋಪಿ; ರೇಷ್ಮೆ, ಕೃಷಿ, ಅರಣ್ಯದಲ್ಲಿ ಬೆಂಗಳೂರು ನಿನಾದ್ ವಸಿಷ್ಠ್ ಟಾಪರ್ಸ್



ತನಿಷಾ ಕಾರ್ತಿಕ್



ನಿನಾದ್ ವಸಿಷ್ಠ್



ನಯನಾ ಗೋಪಿ

ಬೆಂಗಳೂರು, ಜೂ.6(ಕೆಎಂಶಿ)– ಇಂಜಿನಿಯರಿಂಗ್, ಆಯುರ್ವೇದ ಸೇರಿದಂತೆ ವಿವಿಧ ವೃತ್ತಿಪರ ಶಿಕ್ಷಣ ಪ್ರವೇಶಕ್ಕೆ ನಡೆಸಲಾದ 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಯ (ಯುಜಿ–ಸಿಇಟಿ) ಫಲಿತಾಂಶ ಹೊರಬಿದ್ದಿದೆ.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಪತ್ರಿಕಾಗೋಷ್ಠಿಯಲ್ಲಿ ಫಲಿತಾಂಶದ ವಿವರಗಳನ್ನು ಪ್ರಕಟಿಸಿದರು.

ರಾಜ್ಯಾದ್ಯಂತ 745 ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಇಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿ ಪರೀಕ್ಷೆಯಲ್ಲಿ ಈ ಬಾರಿ ಒಟ್ಟು 3.30 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ನೋಂದಾಯಿಸಿಕೊಂಡು ಪರೀಕ್ಷೆ ಬರೆದಿದ್ದರು. ಏಪ್ರಿಲ್ 23, 24ರಂದು ರಾಜ್ಯದ 745 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು.

ಸಿಇಟಿ ಪರೀಕ್ಷೆ ಮೂಲಕ ವೃತ್ತಿಪರ ಶಿಕ್ಷಣಕ್ಕೆ ಅರ್ಹತೆ ಪಡೆದಿರುವ 2,92,782 ವಿದ್ಯಾರ್ಥಿಗಳಲ್ಲಿ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ.

ಯುಜಿ ಸಿಇಟಿ ಫಲಿತಾಂಶದಲ್ಲಿ ಜಯನಗರದ ಆರ್.ವಿ ಪಿಯು ಕಾಲೇಜಿನ ವಿದ್ಯಾರ್ಥಿನಿ ತನಿಷಾ ಕಾರ್ತಿಕ್ ಅವರು ಇಂಜಿನಿಯರಿಂಗ್ ವಿಭಾಗದಲ್ಲಿ ಇಡೀ ರಾಜ್ಯಕ್ಕೆ ಪ್ರಥಮ ಸ್ಥಾನ ಅಲಂಕರಿಸಿದ್ದಾರೆ ಎಂದು ಹೇಳಿದರು. ಇದೇ ವಿಭಾಗದಲ್ಲಿ ಮಹಾಲಕ್ಷ್ಮಿಪುರದ ■ 6ನೇ ಪುಟಕ್ಕೆ

ವಿವಾದಗಳ ನಡುವೆ ಫಲಿತಾಂಶ

ಈ ಬಾರಿಯ ಸಿಇಟಿ ಪರೀಕ್ಷೆ ವೇಳೆ ಕೆಲವು ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಘಟನೆ ರಾಜ್ಯಾದ್ಯಂತ ಭಾರೀ ಚರ್ಚೆಗೆ ಕಾರಣವಾಗಿತ್ತು. ಈ ಪ್ರಕರಣ ರಾಜಕೀಯ ಆರೋಪ–ಪ್ರತ್ಯಾರೋಪಕ್ಕೂ ಕಾರಣವಾಗಿದ್ದು, ನಿರ್ದೇಶನದ ಮೇರೆಗೆ ಮೂವರು ಅಧಿಕಾರಿ ಗಳನ್ನು ಅಮಾನತುಗೊಳಿಸಲಾಗಿತ್ತು. ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದ ಕೆಲ ವಿದ್ಯಾರ್ಥಿಗಳಿಗೆ ಮರುಪರೀಕ್ಷೆಯನ್ನೂ ನಡೆಸಲಾಗಿತ್ತು.

ಮೇ ತಿಂಗಳ ಕೊನೆಯ ವಾರದಲ್ಲೇ ಫಲಿತಾಂಶ ಪ್ರಕಟವಾಗಬೇಕಿದ್ದರೂ, ಆಡಳಿತಾತ್ಮಕ ಬೆಳವಣಿಗೆಗಳು ಹಾಗೂ ಸರ್ಕಾರದ ಮಟ್ಟದ ಬದಲಾವಣೆಗಳ ಹಿನ್ನೆಲೆಯಲ್ಲಿ ಫಲಿತಾಂಶ ಪ್ರಕಟಣೆ ವಿಳಂಬವಾಗಿತ್ತು. ಪಾರದರ್ಶಕ ಪರೀಕ್ಷಾ ವ್ಯವಸ್ಥೆ, ತಂತ್ರಜ್ಞಾನ ಬಳಕೆ ಹಾಗೂ ವಿವಾದಗಳ ನಡುವೆಯೂ ಸಿಇಟಿ–2026 ಫಲಿತಾಂಶ ಪ್ರಕಟವಾಗಿದ್ದು, ಈಗ ವಿದ್ಯಾರ್ಥಿಗಳ ಗಮನ ಕೌನ್ಸೆಲಿಂಗ್ ಹಾಗೂ ಸೀಟು ಹಂಚಿಕೆ ಪ್ರಕ್ರಿಯೆಯತ್ತ ನೆಟ್ಟಿದೆ.

ಸಂಪುಟ ಖಾತೆ ಕ್ಯಾತೆ ನಡುವೆಯೇ ಸಚಿವರ 2ನೇ ಪಟ್ಟಿ ತಯಾರಿ

ಬೆಂಗಳೂರು: ಡಿಕೆ ಶಿವಕುಮಾರ್ ಸರ್ಕಾರದಲ್ಲಿ ಮೊದಲ ಹಂತದ ಸಂಪುಟ ಖಾತೆ ಕ್ಯಾತೆ ಸರ್ಕಸ್ ನಡುವೆಯೇ ಎರಡನೇ ಹಂತದ ಕ್ಯಾಬಿನೆಟ್ ರಚನೆಗೆ ಸಿದ್ಧತೆ ಶುರುವಾಗಿದೆ. ಎರಡನೇ ಹಂತಕ್ಕೆ ಸಚಿವರ ಪಟ್ಟಿ ತಯಾರಾಗುತ್ತಿದ್ದು, ಸಿದ್ದು ಟೀಂನಲ್ಲೆಷ್ಟು, ಡಿಕೆಶಿ ಟೀಂ ಎಷ್ಟು ಹೈಕಮಾಂಡ್ ಕೋಟಾ ಎಷ್ಟು ಎಂಬ ಚರ್ಚೆ ಶುರುವಾಗಿದೆ.

ಸಿಎಂ ಡಿಕೆ ಶಿವಕುಮಾರ್ ಸರ್ಕಾರದ ಎರಡನೇ ಹಂತದ ಕ್ಯಾಬಿನೆಟ್ ರಚನೆಗೆ ಸಿದ್ಧತೆಗಳು ಶುರುವಾಗಿದೆ. 20 ಸಚಿವ ಸ್ಥಾನಗಳು ಬಾಕಿ ಇದ್ದು, ಯಾರಿಗೆ ಅದೃಷ್ಟ ಒಲಿಯುತ್ತೆ ಎಂಬ ಲೆಕ್ಕಾಚಾರ ಜೋರಾಗಿದೆ. ಮೊದಲ ಹಂತದಲ್ಲಿ ಹಿರಿತನ, ಜಾತಿ ಲೆಕ್ಕಾಚಾರದಲ್ಲಿ ಬ್ಯಾಲೆನ್ಸ್ ಸಂಪುಟ ಮಾಡಿದ್ದ ಹೈಕಮಾಂಡ್ ಎರಡನೇ ಹಂತದಲ್ಲಿ ಏನು ಮಾಡುತ್ತೆ ಎಂಬ ಕುತೂಹಲ ದಟ್ಟವಾಗಿದೆ. ಇನ್ನು ಮೊದಲ ಪಟ್ಟಿಯಲ್ಲಿ ಸಿದ್ದರಾಮಯ್ಯ ತಂಡ ಮೇಲುಗೈ ಸಾಧಿಸಿದ್ದರು. ಎರಡನೇ ಪಟ್ಟಿಯಲ್ಲಿ ಡಿಕೆಶಿ ಪಟ್ಟಿ ಮೇಲುಗೈ ಸಾಧಿಸುತ್ತಾ ಎಂಬ ಚರ್ಚೆ ಜೋರಾಗಿದೆ. ದಾವಣಗೆರೆ ಉಪ ಚುನಾವಣೆಯಲ್ಲಿ ಪಕ್ಷ ವಿರೋಧ ಹಣೆಪಟ್ಟಿ ಕಟ್ಟಿಕೊಂಡಿರೋ ಜಮೀರ್‌ಗೆ ಸ್ಥಾನ ಸಿಗುತ್ತಾ ಎಂಬ ಚರ್ಚೆಯೂ ಶುರುವಾಗಿದೆ. ■ 6ನೇ ಪುಟಕ್ಕೆ

WANTED
COOK/CHEF
for a Farm House
in H.D.Kote Taluk.
Contact:- 98804 94646

ಮನೆ ಖರೀದಿಗೆ ಬೇಕಾಗಿದೆ
ಮೈಸೂರಿನಲ್ಲಿ ಮನೆ ಖರೀದಿಗೆ ಬೇಕಾಗಿದೆ.
30x40 ಅಥವಾ 20x30
ಡುಪ್ಲೆಕ್ಸ್(ಬ್ರೋಕರೇಜ್ ಇಲ್ಲ)
9343748715

PREMIUM SITES FOR SALE
• 30x40, S/F, KBL Gardenia, Vijaya Nagar 4th Stage.
• 40x50 & 40x60 Vijaya Nagar 2nd Stage
• 40x60, W/F, Wipro Layout, KRS Road
• 30x40, N/F, VIVID Layout, Yelwala
Contact :
94833 15583 / 98324 07342

ಬೇಕಾಗಿದ್ದಾರೆ
ನಮ್ಮ 12 ಚಕ್ರಗಳ ಲಾರಿಗೆ ಚಾಲಕರು ಬೇಕಾಗಿದ್ದಾರೆ
Please Contact
8971253183

REQUIRED IMMEDIATELY
* OPERATIONS MANAGER
* SALES AND MARKETING
Hotel Industry experience required
For RED LOTUS Serviced apartment, J.P.Nagar, Mysuru
Contact:- 94483 97462
theredlotussuites@gmail.com

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ **ಶ್ರೀ ಎಸ್.ಕೆ. ಶ್ರೀನಿವಾಸ್, ಬಿನ್ ಲೇಟ್ ಕೆಂಪಯ್ಯ,** ವಯಸ್ಸು ಸುಮಾರು 53 ವರ್ಷ, ವಾಸ: 1388, ಜೆ.ಎಸ್.ಎಸ್. ಪಿ.ಯು ಕಾಲೇಜ್ ಎದುರು. 2ನೇ ಹಂತ, ವಿಜಯನಗರ, ಮೈಸೂರು, ಮೊಬೈಲ್ ಸಂಖ್ಯೆ: 99450 66288, ರವರ ಇರಾದೆಯ ಮೇರೆಗೆ ಈ ಪತ್ರಿಕಾ ಪ್ರಕಟಣೆಯನ್ನು ಪ್ರಚುರಪಡಿಸುತ್ತಿದ್ದಾರೆ.

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮದ ಸ.ನಂ.17/ಪಿ4, ಈಗಿನ ನಂ.152 ರ ವಿಸ್ತೀರ್ಣ 1 ಎಕರೆ 20 ಗುಂಟೆ ಜಮೀನನ್ನು ನಮ್ಮ ಕಕ್ಷಿದಾರರು ಅದರ ಹಿಂದಿನ ಮಾಲೀಕರಿಂದ ದಿನಾಂಕ: 29/05/2006 ರ ನೋಂದಾಯಿತ ಕ್ರಯಪತ್ರದ ಮೂಲಕ ಕೊಂಡುಕೊಂಡಿದ್ದು, ಎಲ್ಲಾ ಕಂದಾಯ ದಾಖಲಾತಿಗಳು ಸದರಿ ಎಸ್.ಕೆ.ಶ್ರೀನಿವಾಸ ರವರ ಹೆಸರಿನಲ್ಲಿ ವರ್ಗಾವಣೆಯಾಗಿ ನೋಂದಾವಣೆಯಾಗಿರುತ್ತವೆ.

ಹೀಗಿರುವಾಗ್ಗೆ ಬೆಂಗಳೂರಿನ **ರಾಜೇಂದ್ರ ಗುಪ್ತ** ಎನ್ನುವವರು ನಮ್ಮ ಕಕ್ಷಿದಾರರ ಸ್ವತ್ತಿಗೆ ವಿನಾಕಾರಣ ತೊಂದರೆ ಕೊಟ್ಟು, ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸುತ್ತಿದ್ದ ಬಗ್ಗೆ ಮೈಸೂರಿನ ಮಾನ್ಯ 13ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಇಲ್ಲಿ ಅಸಲು ದಾವಾ ಸಂಖ್ಯೆ:2140/2024 ರಂತೆ ವ್ಯಾಜ್ಯ ಹೂಡಿ, ಸದರಿ ವ್ಯಾಜ್ಯದಲ್ಲಿ ಪ್ರತಿವಾದಿ ರಾಜೇಂದ್ರ ಗುಪ್ತ, ಆತನ ಬೆಂಬಲಿಗರು, ಕುಟುಂಬಸ್ಥರು, ಪ್ರತಿನಿಧಿಗಳು, ಸಹಾಯಕರು, ಇತ್ಯಾದಿಗಳು ನಮ್ಮ ಕಕ್ಷಿದಾರರ ಸ್ವಾಧೀನಕ್ಕೆ ತೊಂದರೆ ಕೊಡಬಾರದು. ಸದರಿ ಜಮೀನನ್ನು ವರ್ಗಾವಣೆ ಮಾಡಬಾರದು, ಅನ್ಯಕಾಂತ ಮಾಡಬಾರದು ಎಂದು ದಿನಾಂಕ:22/01/2026 ರಂದು ಆದೇಶಿಸಿರುತ್ತದೆ.

ನ್ಯಾಯಾಲಯದ ಆದೇಶ ಚಾಲ್ತಿಯಲ್ಲಿದ್ದರೂ ಸಹ ಸದರಿ **ರಾಜೇಂದ್ರ ಗುಪ್ತ ರವರಿಂದ** ಕ್ರಯಕ್ಕೆ ಕೊಂಡುಕೊಂಡಿದ್ದೇನೆ ಎಂದು **ಮೇ|| ಎನ್‌ಎಸ್‌ಆರ್ ಕೋರ್ಟ್ ಯಾರ್ಡ್, ಪ್ರತಿನಿಧಿಸುವವರು ಪಾಲುದಾರ ಶ್ರೀ ಎ.ವಿ. ನಿತಿನ್ ರಾಜ್** ಮತ್ತು ಆತನಿಂದ ಅಧಿಕಾರ ಪಡೆದ ಕೆಲವು ವ್ಯಕ್ತಿಗಳು ಸದರಿ ಆಸ್ತಿಯನ್ನು ಲಪಟಾಯಿಸುವ ದುರುದ್ದೇಶದಿಂದ ಸರ್ವೆ ನಂ.17/ಪಿ4, ಹೊಸ ಸರ್ವೆ ನಂ.152 ಎಂದು ಸೇರಿಸಿಕೊಂಡು, ಅನಧಿಕೃತವಾಗಿ ಅನ್ಯಕ್ರಾಂತ ಮಾಡಿ, ಸುಮಾರು 30 ನಿವೇಶನಗಳನ್ನು ನಿರ್ಮಿಸಿ ಪರಭಾರೆ ಅಂದರೆ ಮಾರಾಟ ಮಾಡಲು ಪ್ರಯತ್ನಿಸುತ್ತಿರುತ್ತಾರೆ. ಈ ಸಂಬಂಧ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ಅನಧಿಕೃತ ನಿವೇಶನಗಳನ್ನು ಮಾಡಿ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ನಮ್ಮ ಕಕ್ಷಿದಾರರು ಮಾನ್ಯ ಉಚ್ಚನ್ಯಾಯಾಲಯ, ಬೆಂಗಳೂರು, ರಿಟ್ ಅರ್ಜಿ ಸಂಖ್ಯೆ: 7997/2026 (ಜಿಎಂ–ಎಸ್‌ಟಿ/ಆರ್‌ಎನ್) ಅನ್ನು ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯಲ್ಲಿ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ: 13/03/2026 ರಂದು ಆದೇಶಿಸಿ, ಸರ್ವೆ ನಂ. ನಂ.17/ಪಿ4, ಸಂಬಂಧಿಸಿದ ಹೊಸ ನಂ.152 ರಲ್ಲಿ ನಿರ್ಮಿಸಿರುವ ಅಥವಾ ನಿರ್ಮಿಸಬಹುದಾದ ಯಾವುದೇ ಸ್ವತ್ತು ಅಥವಾ ನಿವೇಶನಗಳನ್ನು ನೋಂದಾವಣೆಗೆ ಸ್ವೀಕರಿಸಬಾರದೆಂದು ಸಂಬಂದ ಉಪನೋಂದಾವಣಾಧಿಕಾರಿಗಳಿಗೆ ಆದೇಶಿಸಿರುತ್ತದೆ. ಹಾಗಿದ್ದಾಗ್ಯೂ ಸದರಿ ರಾಜೇಂದ್ರ ಗುಪ್ತ ರವರಿಂದ ಕ್ರಯಕ್ಕೆ ಕೊಂಡುಕೊಂಡಿದ್ದೇವೆ ಎಂದು ಅವರಿಂದ ಸಾಮಾನ್ಯ ಅಧಿಕಾರ ಪತ್ರ ಪಡೆದುಕೊಂಡಿದ್ದೇವೆ ಎಂದು ಹೇಳಿಕೊಂಡು, **ಸದರಿ ಸರ್ವೆ ನಂ.17/ಪಿ4, ಹೊಸ ನಂ.152 ರಲ್ಲಿ ಈ ಕೆಳಕಂಡಂತೆ ನಿವೇಶನಗಳನ್ನು ನಿರ್ಮಿಸಿ, ಬೋಗಾದಿ ಪಟ್ಟಣ ಪಂಚಾಯಿತಿಯಿಂದ ಪಿ.ಐ.ಡಿ. ನಂಬರುಗಳನ್ನೂ ಸಹ ಪಡೆದುಕೊಂಡಿರುತ್ತಾರೆ**. ಅವುಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ನಮೂನೆ 3, ನಿಯಮ 20 ರ ಪ್ರಕಾರ ಪಟ್ಟಣ ಟ್ಟಣ ಪಂಚಾಯಿತಿ, ಬೋಗಾದಿಯವರು ನೀಡಿರುವ ನಿವೇಶನಗಳ ಪಿಐಡಿ ಸಂಖ್ಯೆ: (1) 5023386451 (2)9282528395 (3) 5372145033 (4) 5874349949 (5) 8119263489 (6)4938459912 (7)5121055871 (8)7901293105 (9)4902645192 (10)10791707764 (11)6592551245 (12) 5742045341 (13)2427782437 (14)7240544182 (15)6356836579 (16)7721231657 (17)5247724357 (18)2246817876 (19)5405873734 (20)4402979422 (21)4905851861 (22)9525821546 (23) 9184082420 (24) 4315830814 (25) 9770934248 ಆಗಿರುತ್ತವೆ.

ಮುಂದುವರೆದು ಈ ಹಿಂದೆ ಸದರಿ **ರಾಜೇಂದ್ರ ಗುಪ್ತ ರವರು ಶ್ರೀನಿವಾಸ್** ರವರ ವಿರುದ್ಧ ಸರ್ವೆ ನಂ.17/ಪಿ3, ವಿಸ್ತೀರ್ಣ 2 ಎಕರೆ 0.5 ಗುಂಟೆ ಬಾಬು ಅಸಲು ದಾವಾ ಸಂಖ್ಯೆ:1247/2023 ರಂತೆ ಮೈಸೂರಿನ ಮಾನ್ಯ 4ನೇ ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ತಾನು ಮಾಲೀಕನೆಂದು, ಸ್ವಾಧೀನದಲ್ಲಿದ್ದೇನೆಂದು, ಸದರಿ ಶ್ರೀನಿವಾಸ್ ರವರು ಈ ಹಿಂದೆಯೇ ನಿರ್ಮಿಸಿರುವ ಕಾಂಪೌಂಡ್ ಗೋಡೆಯನ್ನು ತೆಗೆದುಹಾಕುವಂತೆ ವ್ಯಾಜ್ಯ ಹೂಡಿದ್ದರು. ಸದರಿ ಘೋಷಣಾತ್ಮಕ ವ್ಯಾಜ್ಯವನ್ನು ವಿಚಾರಣೆ ಮಾಡಿಕೊಳ್ಳದೇ ದಿನಾಂಕ:13/06/2024 ರಂದು ವ್ಯಾಜ್ಯವನ್ನು ನಡೆಸುವುದಿಲ್ಲ ಎಂದು ಅರ್ಜಿ ಸಲ್ಲಿಸಿ, ವಜಾ ಮಾಡಿಸಿಕೊಂಡಿರುತ್ತಾರೆ. ಇದರಿಂದ ಸ್ಪಷ್ಟವಾಗಿ ಕಂಡುಬರುವುದೇನೆಂದರೆ, ಸದರಿ ರಾಜೇಂದ್ರ ಗುಪ್ತ ರವರಿಗೆ ಮಾದಗಳ್ಳಿ ಗ್ರಾಮದ ಸರ್ವೆ ನಂ.17/ಪಿ4 ರಲ್ಲಾಗಲೀ, ಹೊಸ ಸರ್ವೆ ನಂ.152 ರಲ್ಲಾಗಲೀ ಅಥವಾ ಸರ್ವೆ ನಂ.17/ಪಿ3 ರಲ್ಲಾಗಲೀ ಯಾವುದೇ ಹಕ್ಕು, ಹಿತಾಸಕ್ತಿ, ಸ್ವಾಧೀನ, ಮಾಲೀಕತ್ವ ಎಳ್ಳಷ್ಟೂ ಇರುವುದಿಲ್ಲ. ಆದ್ದರಿಂದ ಆ ರೀತಿಯಾದ ಸ್ವತ್ತನ್ನು ಅವರು ಬೇರೆಯವರಿಗೆ ವರ್ಗಾವಣೆ ಮಾಡಲು, ಮಾರಾಟ ಮಾಡಲು, ಕಾನೂನು ಪ್ರಕಾರ ಹಕ್ಕು, ವಗೈರೆಗಳು ಇರುವುದಿಲ್ಲ.

ಆದ್ದರಿಂದ ಸರ್ವೆ ನಂ.17/ಪಿ4, ಹೊಸ ಸರ್ವೆ ನಂ.152 ರಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಮೇಲ್ಕಂಡ 30 ನಿವೇಶನಗಳನ್ನು ಯಾರೂ ಕೊಂಡುಕೊಳ್ಳಬಾರದು, ಯಾರೂ ಮಾರಾಟ ಮಾಡಬಾರದು ಹಾಗೂ ಮಾನ್ಯ ಉಚ್ಚನ್ಯಾಯಾಲಯದನ್ವಯ ಸಂಬಂಧಿಸಿದ ಉಪನೋಂದಾವಣಾಧಿಕಾರಿಗಳು ನೋಂದಾವಣೆಗೆ ಸ್ವೀಕರಿಸಬಾರದು ಎಂದು ಆದೇಶ ಈ ಮೂಲಕ ಇರುವುದರಿಂದ. ಸದರಿ ಸರ್ವೆ ನಂಬರಿನಲ್ಲಿ ನಿರ್ಮಿಸಿರುವ 30 ನಿವೇಶನಗಳನ್ನು ಮೇಲಿನ ವ್ಯಾಜ್ಯವು ಅಂತಿಮವಾಗಿ ಇತ್ಯರ್ಥವಾಗುವವರೆಗೆ ಬೇರೆ ಯಾರಿಗೂ ಮಾರಾಟ, ವರ್ಗಾವಣೆ, ಅನ್ಯಕ್ರಾಂತ, ಇತ್ಯಾದಿಗಳನ್ನು ಮಾಡಬಾರದೆಂದು ಆದೇಶವಾಗಿದ್ದು, ಸಾರ್ವಜನಿಕವಾಗಿ ತಿಳಿಸಲಾಗಿದೆ. ಒಂದು ವೇಳೆ ವ್ಯವಹರಿಸಿದಲ್ಲಿ, ಅದು ಕಾನೂನಿಗೆ ವಿರುದ್ಧವಾಗಿರುತ್ತದೆ ಮತ್ತು ನಮ್ಮ ಕಕ್ಷಿದಾರರ ಸ್ವತ್ತನ್ನು ಅದು ಬದ್ಧಪಡಿಸುವುದಿಲ್ಲ ಹಾಗೂ ಅಂತಹವುಗಳಿಗೆ ಖುದ್ದು ನೀವೇ ಜವಾಬ್ದಾರರಾಗುತ್ತೀರಿ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/– ಎಂ. ಎನ್. ನಿಂಗೇಗೌಡ, ಬಿಕಾಂ, ಎಲ್‌ಎಲ್.ಬಿ
ವಕೀಲರು, ಎನ್‌ರೋಲ್ ನಂ. ಕೆಎಆರ್ 95/83,
ನಂ.47, ಸಿಹೆಚ್–4, 47/1, ಸಿಹೆಚ್–4/1, 5ನೇ ಕ್ರಾಸ್, 3ನೇ ಮುಖ್ಯ ರಸ್ತೆ, ಶ್ರೀನಿವಾಸ ದೇವಸ್ಥಾನದ ಎದುರು,
ಜಯನಗರ, ಮೈಸೂರು -570014 **ಮೊ.ನಂ.: 98800 00679**

ಮೈಸೂರು ಟ್ರಾವೆಲ್ ಮಾರ್ಟ್ 'ಪ್ರವಾಸೋದ್ಯಮ ಮತ್ತು ಪತ್ರಿಕೋದ್ಯಮ' ಕುರಿತ ಅಧಿವೇಶನ

ದುಬಾರೆ ದುರಂತ ಪ್ರವಾಸೋದ್ಯಮಕ್ಕೆ ಭಾರೀ ಪೆಟ್ಟು

ಸಂಬಂಧಿಸಿದ ಅಧಿಕಾರಿ ವರ್ಗಕ್ಕೆ ಇಚ್ಛಾಸಕ್ತಿ ಇದ್ದರೆ ಮಾತ್ರ ಪ್ರವಾಸೋದ್ಯಮದ ಅಭಿವೃದ್ಧಿ ಸಾಧ್ಯ: ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಅಭಿಪ್ರಾಯ

- ಮೈಸೂರಿಗೆ ಪ್ರತಿ ವರ್ಷ 28 ಸಾವಿರ ಯೋಗಾಸಕ್ತರು ಬರುತ್ತಾರೆ
- ಯಾವುದೇ ದುರ್ಘಟನೆ ನಡೆಯದಂತೆ ಎಚ್ಚರ ವಹಿಸಬೇಕು
- ನಕಾರಾತ್ಮಕ ಪ್ರಚಾರವಾದರೆ ಪ್ರವಾಸೋದ್ಯಮದ ಚೇತರಿಕೆ ಕಷ್ಟ
- ಮೈಸೂರು ಏರ್ ಪೋರ್ಟ್‌ನಲ್ಲಿ ಕನಿಷ್ಠ ಟ್ರಾವೆಲ್ ಡೆಸ್ಕ್ ಇಲ್ಲ



ಮೈಸೂರಿನ ವಿಜಯನಗರದ ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ ಸಭಾಂಗಣದಲ್ಲಿ ಶನಿವಾರ ಮೈಸೂರು ಟ್ರಾವೆಲ್ ಮಾರ್ಟ್‌ನ 5ನೇ ಆವೃತ್ತಿಯ 2ನೇ ದಿನದ ಕಾರ್ಯಕ್ರಮದಲ್ಲಿ 'ಪ್ರವಾಸೋದ್ಯಮ ಮತ್ತು ಪತ್ರಿಕೋದ್ಯಮ' ಕುರಿತ ಅಧಿವೇಶನವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಅವರು ಉದ್ಘಾಟಿಸಿದರು.

ಮೈಸೂರು, ಜೂ.6(ಬಿಎಲ್‌ಯು)– ಸಣ್ಣ ಲೋಪದಿಂದ ದುಬಾರೆಯಲ್ಲಿ ಸಂಭವಿಸಿದ ದುರಂತದಿಂದಾಗಿ ಅಲ್ಲಿನ ಪ್ರವಾಸೋದ್ಯಮಕ್ಕೆ ಭಾರೀ ಹೊಡೆತ ಬಿದ್ದಿತು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಹೇಳಿದರು.

ಮೈಸೂರಿನ ವಿಜಯನಗರ ಎರಡನೇ ಹಂತದ ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ ಸಭಾಂಗಣದಲ್ಲಿ ಇಂದು ಮೈಸೂರು ಟ್ರಾವೆಲ್ ಮಾರ್ಟ್‌ನ 5ನೇ ಆವೃತ್ತಿಯ 2ನೇ ದಿನದ ಕಾರ್ಯಕ್ರಮದಲ್ಲಿ 'ಪ್ರವಾಸೋದ್ಯಮ ಮತ್ತು ಪತ್ರಿಕೋದ್ಯಮ' ಕುರಿತ ಅಧಿವೇಶನ ಉದ್ಘಾಟಿಸಿ ಅವರು ಮಾತನಾಡಿದರು. ಪ್ರವಾಸಿತಾಣದಲ್ಲಿನ ಒಂದೇ ಒಂದು ಲೋಪ ಅಲ್ಲಿನ ಪ್ರವಾಸೋದ್ಯಮದ ಅಭಿವೃದ್ಧಿಗೆ ಧಕ್ಕೆ ತರುತ್ತದೆ. ಉದಾಹರಣೆಗೆ ದುಬಾರೆಯಲ್ಲಿ ಅಲ್ಲಿನ ಜಿಲ್ಲಾಡಳಿತದ ಬೇಜವಾಬ್ದಾರಿಯಿಂದ ಆನೆ ಬಳಿ ಹೋದ ಮಹಿಳೆಯೊಬ್ಬರು ಪ್ರಾಣ ಕಳೆದುಕೊಂಡರು. ಇಂತಹ ಒಂದೇ ಒಂದು ದುರ್ಘಟನೆ ಅಲ್ಲಿನ ಪ್ರವಾಸೋದ್ಯಮದ ಬೆಳವಣಿಗೆಗೆ ಭಾರೀ ಹೊಡೆತ ನೀಡಿತು ಎಂದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರ ಕೃತ್ಯದಿಂದ ಅಲ್ಲಿನ ಪ್ರವಾಸೋದ್ಯಮ ಮತ್ತೆ ಸುಧಾರಿಸಲು ಪಡೆಯಲು ಬಹಳಷ್ಟು ಸಮಯ ತೆಗೆದುಕೊಂಡಿತು. ಆದ ಕಾರಣ ಇಂತಹ ಯಾವುದಾದರೊಂದು ದುರ್ಘಟನೆ ಪ್ರವಾಸೋದ್ಯಮದ ■ 6ನೇ ಪುಟಕ್ಕೆ

ಲಲಿತ ಮಹಲ್ ಪ್ಯಾಲೆಸ್ ಮತ್ತೊಂದು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಆಗಲಿದೆ!

ಮೈಸೂರು: ಮೈಸೂರಿನ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ನವೀಕರಣಕ್ಕೆ ನಿರ್ಧಾರ ತೆಗೆದುಕೊಳ್ಳುವ ಹೊತ್ತಿಗೆ ಅದು ಮತ್ತೊಂದು ಲ್ಯಾನ್ಸ್ ಡೌನ್ ಬಿಲ್ಡಿಂಗ್‌ನಂತೆ ಪಾಳು ಬೀಳುತ್ತದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆತಂಕ ವ್ಯಕ್ತಪಡಿಸಿದರು.



ನವೀಕರಣ ಮಾಡುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡುತ್ತಿದೆಯೇ ಹೊರತು, ಈ ತನಕ ಇದರ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ. ನವೀಕರಣಕ್ಕೆ ಮೀನಾ–ಮೇಷ ಎಣಿಸಿದರೆ, ಮೈಸೂರಿನಲ್ಲಿ ಪಾಳು ಬಿದ್ದಿರುವ ಇತರೆ ಪಾರಂಪರಿಕ ತಾಣಗಳಲ್ಲಿ ಇದೂ ಒಂದಾಗುತ್ತದೆ ಎಂದು ಹೇಳಿದರು.

ಮೈಸೂರಿನ ರಾಜಕಾರಣಿಗಳು ಹಾಗೂ ಉದ್ಯಮಿಗಳಿಗೆ ಇಚ್ಛಾಸಕ್ತಿ ಇಲ್ಲ. ಸ್ವಾರ್ಥ ಇವರಲ್ಲಿದ್ದು, ತಮ್ಮ ಅಭಿವೃದ್ಧಿ ಬಿಟ್ಟು ಉಳಿದೆಲ್ಲವೂ ಗೌಣವಾಗಿದೆ. ಇನ್ನು ಕೆಲವರು ಹಸಿರು ಶಾಲು ಹಾಕಿಕೊಂಡು ಮರ ಕಡಿಯದಂತೆ ಹೋರಾಟದ ಹೆಸರಿನಲ್ಲಿ ಪ್ರಚಾರ ಪಡೆಯುತ್ತಾರೆ. ಮೂರು ದಿನದ ನಂತರ ಮಾಯವಾಗುತ್ತಾರೆ ಎಂದು ಟೀಕಿಸಿದರು.

ಈ ಹಿನ್ನೆಲೆಯಲ್ಲಿ ಮೈಸೂರಿಗೆ ಆಗುತ್ತಿರುವ ಅನ್ಯಾಯ ತಡೆಯಲು ಇಲ್ಲಿನ ಜನರು ಬೀದಿಗಿಳಿದು ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು.

ವೆಂಕಟಾಚಲಧಾಮದ ವಾರ್ಷಿಕೋತ್ಸವ

ಶ್ರೀ ವಿದ್ಯೇಶ ತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ವಿವಿಧ ಪೂಜಾ ಕೈಂಕರ್ಯ



ಶ್ರೀ ವೆಂಕಟಾಚಲಧಾಮದ 15ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ವೆಂಕಟೇಶ ದೇವರ ಮೂರ್ತಿಗೆ ಚಿನ್ನದ ಕಿರೀಟ ಸಮರ್ಪಿಸಿ, ಶ್ರೀ ವಿದ್ಯೇಶ ತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮಹಾ ಮಂಗಳಾರತಿ ಮಾಡಲಾಯಿತು.

ಮೈಸೂರು, ಜೂ.6–ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಶ್ರೀ ವೆಂಕಟಾಚಲಧಾಮದ 15ನೇ ವಾರ್ಷಿಕೋತ್ಸವ ಸಮಾರಂಭ ನೆರವೇರಿತು.

ಉಡುಪಿ ಭಂಡಾರಕೇರಿ ಮಠದ ಪೀಠಾಧಿಪತಿ ಶ್ರೀ ವಿದ್ಯೇಶ ತೀರ್ಥ ಸ್ವಾಮೀಜಿ ನೇತೃತ್ವದಲ್ಲಿ ವಿವಿಧ ಧಾರ್ಮಿಕ ವಿಧಿ, ವಿಧಾನಗಳು ಜರುಗಿದವು. ಶ್ರೀ ವೆಂಕಟೇಶ ದೇವರಿಗೆ ಚಿನ್ನದ ಕಿರೀಟ ಸಮರ್ಪಿಸಿ ಅನುಗ್ರಹ ಸಂದೇಶ ನೀಡಿದ ಸ್ವಾಮೀಜಿ, ಎಲ್ಲರ ಮನೆ ಮತ್ತು ಮನದಲ್ಲಿ ವೆಂಕಟೇಶನು ನೆಲೆಗೊಳ್ಳಲಿ ಎಂದು ಆಶೀರ್ವದಿಸಿದರು.

ಭಾಗವತ ಶ್ರವಣದಿಂದ ಬದುಕು ಪಾವನವಾಗಬೇಕು. ಪ್ರತಿಯೊಂದು ಮಗುವಿಗೂ ಭಾಗವತದ ಕಥೆ ಪರಿಚಿತವಾಗಬೇಕು. ಪ್ರಹ್ಲಾದ, ನಚಿಕೇತ ಮತ್ತು ಧ್ರುವನ ಆದರ್ಶಗಳನ್ನು ಮಕ್ಕಳು ರೂಢಿಸಿಕೊಳ್ಳುವಂತಾಗಬೇಕು. ಮನೆಯಲ್ಲಿ ಅಸ್ತು ದೇವತೆಗಳು ನೆಲೆಸಿರುತ್ತಾರೆ. ಹಿರಿಯರು ಯಾವ ಮಾತನ್ನು ಆಡುತ್ತಾರೋ ಅವೆಲ್ಲವೂ ದೇವರ ಕೃಪೆಯಿಂದ ಸತ್ಯವಾಗುತ್ತವೆ. ಆದ ಕಾರಣ ಒಳ್ಳೆಯ ಮಾತುಗಳನ್ನೇ ಆಡಬೇಕು. ಮಾತು ಶುದ್ಧವಾಗಿರಬೇಕು ಎಂದರೆ ಭಾಗವತ, ರಾಮಾಯಣ, ಮಹಾ ಭಾರತಗಳ ಪಾರಾಯಣ ನಡೆಯಬೇಕು ಎಂದರು.

ಇದಕ್ಕಾಗಿ ತಾವು ಮನೆ ಮನೆ ಸಂದರ್ಶನ ಎಂಬ ಅಭಿಯಾನ ರೂಪಿಸಿದ್ದು, ಭಕ್ತರ ಮನೆಯಲ್ಲಿ 30 ನಿಮಿಷವಾದರೂ ಭಾಗವತ ಪ್ರವಚನ ನಡೆಸುತ್ತಿದ್ದೇವೆ. ಇದಕ್ಕೆ ಅಭೂತಪೂರ್ವ ಪ್ರತಿಕ್ರಿಯೆ ದೊರಕುತ್ತಿದೆ. ಪ್ರತಿಯೊಂದು ಮನೆಯೂ ಭಾರತೀಯ ಸಂಸ್ಕೃತಿಯ ಪ್ರತೀಕವಾಗಬೇಕು ಎಂದು ಶ್ರೀಗಳು ಆಶಿಸಿದರು. ವಾರ್ಷಿಕೋತ್ಸವ ಅಂಗವಾಗಿ ಬೆಳಗ್ಗೆ 7ರಿಂದಲೇ ಪಂಚಾಶತ್ ಕಲಶಾರಾಧನೆ, ವೆಂಕಟೇಶ ದೇವರ ಮೂಲ ಮೂರ್ತಿಗೆ ಶ್ರೀ ವಿದ್ಯೇಶತೀರ್ಥ ಸ್ವಾಮೀಜಿಯವರಿಂದ ಬ್ರಹ್ಮ ಕಲಶಾಭಿಷೇಕ, ಪಂಚಾಮೃತ ಅಭಿಷೇಕ, ರಾಯರ ವೃಂದಾವನಕ್ಕೆ ವಿಶೇಷ ಅಲಂಕಾರ, ವೆಂಕಟೇಶ ದೇವರಿಗೆ ಚಿನ್ನದ ಕಿರೀಟ ಸಹಿತ ಅಲಂಕಾರ, ಸಂಸ್ಥಾನ ಪೂಜೆ, ಮಹಾ ಮಂಗಳಾರತಿ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿದವು.

ಮತಾಂತರ ನಿಷೇಧ ಕಾಯ್ದೆ ರದ್ದುಪಡಿಸಲು ಆಗ್ರಹ

ಮೈಸೂರು,ಜೂ.6(ಜಿಎ)–ಮತಾಂತರ ನಿಷೇಧ ಕಾಯ್ದೆ ದುರುಪಯೋಗ ಮಾಡಿಕೊಂಡು ಹಲವರಿಗೆ ಕಿರುಕುಳ ನೀಡುತ್ತಿರುವ ಪ್ರಕರಣ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ಕಾಯ್ದೆ ರದ್ದುಗೊಳಿಸಬೇಕೆಂದು ಇಂಡಿಯಾ ಬೈಬಲ್ ಲಿಟರೇಚರ್ ಅಪೊಸ್ಟೊಲೇಟ್ ಸಂಸ್ಥಾಪಕ ನಿರ್ದೇಶಕ ರೆ.ಫಾ. ಬೆಂಜಮಿನ್ ವಾಸ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮತಾಂತರ ನಿಷೇಧ ಕಾಯ್ದೆ ದುರುಪಯೋಗ ಮಾಡಿಕೊಂಡು ಪ್ರಕರಣ ದಾಖಲಿಸುವುದು, ಬೆದರಿಕೆ ಹಾಕುವುದು ನಡೆದಿರುವುದು ಅಲ್ಪಸಂಖ್ಯಾತರಿಗೆ ಸಂಕಷ್ಟವಾಗಿ ಪರಿಣಮಿಸಿದೆ. ಒಮ್ಮೆ ದುರುಪಯೋಗ ಪಡಿಸಿಕೊಂಡು ಪ್ರಕರಣ ದಾಖಲಿಸಿದಲ್ಲಿ ನ್ಯಾಯಾಲಯಕ್ಕೆ ಅಲೆತ, ಪೊಲೀಸ್ ಠಾಣೆಗೆ ತಿರುಗಾಡುವುದು ಆರಂಭವಾಗುತ್ತದೆ. ಜೊತೆಗೆ ಆರ್ಥಿಕ ಹೊರೆಯೂ ಬೀಳಲಿದೆ. ಹೀಗಾಗಿ ನೂತನ ಸಿಎಂ ಡಿ.ಕೆ. ಶಿವಕುಮಾರ್ ಈ ಕಾಯ್ದೆ ರದ್ದುಪಡಿಸಬೇಕು. ಜೊತೆಗೆ, ಈಗಾಗಲೇ ಈ ಕುರಿತ ಪ್ರಕರಣದ ವಿಚಾರಣೆ ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿದ್ದು, ಏಕೆ ರದ್ದು ಪಡಿಸಬಾರದೆಂದು ಕೇಳಿ ರಾಜ್ಯಗಳಿಗೆ ನೋಟಿಸ್ ನೀಡಲಾಗಿದೆ. ಹೀಗಾಗಿ ಕಾಯ್ದೆ ರದ್ದಾಗಬಹುದೆಂಬ ಆಶಾಭಾವನೆಯಲ್ಲಿದ್ದೇವೆ ಎಂದರು. ಗೋಷ್ಠಿಯಲ್ಲಿ ಆನಂದ್ ಉಪಸ್ಥಿತರಿದ್ದರು.



ಸರೀನಾಗೆ ಪಿಹೆಚ್.ಡಿ ಪದವಿ

ಮೈಸೂರು: ಡಾ.ಪಿ.ಜಯಶ್ರೀ ಅವರ ಮಾರ್ಗದರ್ಶನದಲ್ಲಿ ಸರೀನಾ.ಪಿ.ಕೆ ಅವರು ಭೂಗೋಳಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಬಡವರು, ದೀನ ದಲಿತರಿಗೆ ದೇವರಾಜ ಅರಸು 'ದೇವಾದಿದೇವ ದೇವರಾಜ ಅರಸು'

• ಎಂಎಲ್ಸಿ ಡಾ.ತಿಮ್ಮಯ್ಯ ಬಣ್ಣನೆ • 'ಧ್ವನಿ ಕೊಟ್ಟ ಧಣಿ' ಪ್ರಶಸ್ತಿ ಪ್ರದಾನ

ಮೈಸೂರು,ಜೂ.6(ಎಂಟಿವೈ)–ಬಡವರು, ಶೋಷಿತರು ಹಾಗೂ ದೀನದಲಿತರಿಗೆ ಆಶಾಕಿರಣವಾಗಿದ್ದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಹಲವು ಯೋಜನೆಗಳನ್ನು ಜಾರಿಗೊಳಿಸುವ ಮೂಲಕ 'ದೇವಾದಿ ದೇವ ದೇವರಾಜ ಅರಸ್' ಎನಿಸಿಕೊಂಡಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ಆಯೋಜಿಸಿದ್ದ 'ಧ್ವನಿಕೊಟ್ಟ ಧಣಿ' ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯಕಂಡ ಮುಖ್ಯಮಂತ್ರಿ ಗಳಲ್ಲಿ ದಿವಂಗತ ಡಿ.ದೇವರಾಜ ಅರಸ್ ಅಪರೂಪದ ಮುಖ್ಯಮಂತ್ರಿಯಾಗಿದ್ದಾರೆ. ತನ್ನ ಆಡಳಿತಾವಧಿಯಲ್ಲಿ ಜೀತಪದ್ಧತಿ ನಿಷೇಧಿಸಿ, ಉಳುವವನೇ ಭೂಮಿ ಒಡೆಯ ಯೋಜನೆಯನ್ನು ಜಾರಿಗೊಳಿಸುವ ಮೂಲಕ ಸಾವಿರಾರು ಮಂದಿಗೆ ನೆರವಾದರು ಎಂದರು.

ಈ ಹಿಂದೆ ಜೀತ ಪದ್ಧತಿ ಗಟ್ಟಿಯಾಗಿ ನೆಲೆಯೂರಿತ್ತು. ನೂರು, ಸಾವಿರ ರೂ. ಸಾಲ ಕೊಟ್ಟು ಇಡಿ ಕುಟುಂಬವನ್ನ ಜೀತ ಪದ್ಧತಿಯಡಿ ದುಡಿಸಿಕೊಳ್ಳಲಾಗುತ್ತಿತ್ತು. ಅದನ್ನು ನಿರ್ಮೂಲನೆ ಮಾಡಿ, ಜೀತ ಮಾಡುತ್ತಿದ್ದ ಸಾವಿರಾರು ಮಂದಿಗೆ ಪುನರ್ ವಸತಿ ಕಲ್ಪಿಸಿದರು. ಅಲ್ಲದೆ, ಕಾನೂನು ಜಾರಿಗೊಳಿಸಿ, ಜೀತ ಇಟ್ಟುಕೊಂಡವರ ವಿರುದ್ಧ ಕ್ರಮ ಕೈಗೊಳ್ಳಲಾಯಿತು ಎಂದರು.

ಅರಸು ಅವರೊಂದಿಗೆ ಒಡನಾಟ: ಡಿ.ದೇವರಾಜ ಅರಸ್ ಅವರೊಂದಿಗೆ ತಮ್ಮ ತಂದೆಗೆ ಉತ್ತಮ ಒಡನಾಟವಿತ್ತು. 1964ರಲ್ಲಿ ಮೆಡಿಕಲ್ ಕಾಲೇಜಿಗೆ ಸೇರಿದೆ. ಮರುವರ್ಷ ನನ್ನ ನೋಡಲು ತಂದೆ ಬರುತ್ತಿದ್ದಾಗ ಸಾರಿಗೆ ಬಸ್ ಮತ್ತು ಕಾರು ನಡುವೆ ನಡೆದ ಅಪಘಾತದಲ್ಲಿ ನಮ್ಮ ತಂದೆ ಸೇರಿ ನಾಲ್ವರು ಮೃತಪಟ್ಟರು. ಆಗ ಸಾರಿಗೆ ಮಂತ್ರಿಯಾಗಿದ್ದ ದೇವರಾಜ ಅರಸ್ ಅಪಘಾತದ ಸ್ಥಳಕ್ಕೆ ಬಂದು ನಮಗೆ ಸಾಂತ್ವನ ಹೇಳಿದರಲ್ಲದೆ, ವೈದ್ಯಕೀಯ ಶಿಕ್ಷಣ ಮುಂದುವರೆಸುವಂತೆ ಸಲಹೆ ನೀಡಿದ್ದರು. 1974ರಲ್ಲಿ ಅವರು ಸಿಎಂ ಆಗಿದ್ದಾಗ ನಾನು ವೈದ್ಯಕೀಯ ಶಿಕ್ಷಣ ಮುಗಿಸಿ ಬೆಂಗಳೂರಿಗೆ ತೆರಳಿ ದೇವರಾಜ ಅರಸ್ ಅವರನ್ನು ಭೇಟಿಯಾದೆ. ಅವರು ನನ್ನನ್ನು ತಮ್ಮದೆ ಕಾರಿನಲ್ಲಿ ವಿಧಾನಸೌಧಕ್ಕೆ ಕರೆದುಕೊಂಡು ಹೋಗಿ, ಸಿಎಂ ಕಚೇರಿಯಲ್ಲಿ ಕೂರಿಸಿದ್ದರು ಎಂದು ಸ್ಮರಿಸಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ಆಯೋಜಿಸಿದ್ದ 'ಧ್ವನಿಕೊಟ್ಟ ಧಣಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

> **"ಉಳುವವನೇ ಭೂಮಿ ಒಡೆಯ ಯೋಜನೆಯಡಿ, ಎಸಿ, ತಹಶೀಲ್ದಾರ್, ಗ್ರಾಮ ಲೆಕ್ಕಾಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ ಉಳುಮೆ ಮಾಡುವುದನ್ನು ದೃಢೀಕರಿಸಿ, ಅವನಿಗೆ ಭೂಮಿ ನೀಡುವ ಆದೇಶ ಮಾಡಿದರು. ಇದರಿಂದ ಸಾವಿರಾರು ಬಡವರು, ಶೋಷಿತರು, ಹಿಂದುಳಿದ ವರ್ಗಗಳ ಕುಟುಂಬಗಳಿಗೆ ನೆರವಾಗಿರುವುದರಿಂದ ದೇವರಾಜ ಅರಸ್ ಅವರು ದೇವಾದಿ ದೇವರು ಎನಿಸಿದ್ದಾರೆ. –ಡಾ.ಡಿ.ತಿಮ್ಮಯ್ಯ**


ಅಲ್ಲದೆ, ಸಿಎಂ ಕಚೇರಿಯಲ್ಲಿಯೇ ವೈದ್ಯಾಧಿಕಾರಿಯಾಗಿ ನೇಮಕ ಮಾಡಿ ಆದೇಶ ಕೊಟ್ಟರು. ನನ್ನಂತೆ ಅನೇಕರಿಗೆ ವೈದ್ಯಾಧಿಕಾರಿಯಾಗಿ ನೇರ ನೇಮಕಾತಿ ಮಾಡಿದರು ಎಂದು ತಿಳಿಸಿದರು.

ಮಾಜಿ ಸಚಿವ ಎಂ.ಶಿವಣ್ಣ ಮಾತನಾಡಿ, ಒಕ್ಕಲಿಗ, ಕುರುಬ ಸಮುದಾಯ ಪ್ರಾಬಲ್ಯ ಇರುವ ಹುಣಸೂರು ಕ್ಷೇತ್ರದಲ್ಲಿ ದೇವರಾಜ ಅರಸ್ ಗೆಲ್ಲುವ ಮೂಲಕ ತಾನು ಎಲ್ಲಾ ಜಾತಿ, ಧರ್ಮದ ಜನರ ಪ್ರೀತಿ ವಿಶ್ವಾಸ ಗಳಿಸಿರುವುದನ್ನು ಸಾಬೀತು ಮಾಡಿದರು. ಆಡಳಿತಾವಧಿಯಲ್ಲಿ ಮಾಡಿರುವ ಕೆಲಸದಿಂದ ಅವರು ಸೂರ್ಯ ಚಂದ್ರ ಇರುವವರೆಗೂ ಸ್ಮರಣೀಯರಾಗಿದ್ದಾರೆ. ನಾನು 1978ರಲ್ಲಿ ತಾಲೂಕು ಬೋರ್ಡ್ ಸದಸ್ಯನಾಗಿದ್ದಾಗ ಅರಸು ಅವರನ್ನು ಭೇಟಿ ಮಾಡಿದ್ದೆ ಎಂದು ಸ್ಮರಿಸಿದರು.

ಪ್ರಶಸ್ತಿ ಪ್ರದಾನ: ಇದೇ ವೇಳೆ ಬೆಂಗಳೂರಿನ ರಮಣಶ್ರೀ ಪ್ರತಿಷ್ಠಾನದ ಸಂಸ್ಥಾಪಕ ನಾಡೋಜ ಎಸ್.ಷಡಕ್ಷರಿ, ಸಾಹಿತಿ ಡಾ.ಗಂಗಾಧರ ಕೊಡ್ಲಿ,ಡಿವೈಎಸ್ಪಿ ಎಸ್.ಎನ್. ಸಂದೇಶ್‌ಕುಮಾರ್, ಕ್ರೈಸ್ಟ್ ಪಬ್ಲಿಕ್ ಶಾಲೆಯ ಉಪ ಪ್ರಾಚಾರ್ಯರಾದ ಮರ್ಲಿನ್ ಕ್ರಿಸ್ಟಬೆಲ್, ವಿಶ್ರಾಂತ ರಿಜಿಸ್ಟ್ರಾರ್ ಡಾ.ಸುಂದರರಾಜೇ ಅರಸ್, ರೋಟರಿ ಕ್ಲಬ್ ಸಹಾಯಕ ಗವರ್ನರ್ ರೋ.ತಿರುಮಲಾಪುರ ರಾಜೇಗೌಡ ಅವರಿಗೆ 'ಧ್ವನಿಕೊಟ್ಟ ಧಣಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಅರಸು ಜಾಗೃತಿ ಅಕಾಡೆಮಿ ಟ್ರಸ್ಟ್ ಕಾರ್ಯದರ್ಶಿ ಎಂ.ಜಿ.ಆರ್.ಅರಸ್, ಅನ್ವೇಷಣಾ ಸೇವಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಅಮರನಾಥ್‌ರಾಜೇ ಅರಸ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ವಿಶ್ರಾಂತ ಜಂಟಿ ನಿರ್ದೇಶಕ ಶ್ರೀನಿವಾಸ ಬಹದ್ದೂರ್ ಉಪಸ್ಥಿತರಿದ್ದರು.

> **"ರಾಜ್ಯದಲ್ಲಿ ಪ್ರತಿಯೊಬ್ಬ ಮುಖ್ಯಮಂತ್ರಿ ತನ್ನದೇ ಆದ ಧಾಟಿಯಲ್ಲಿ ಸಾಧನೆ ಮಾಡಿದ್ದಾರೆ. ಆದರೆ, ಡಿ.ದೇವರಾಜ ಅರಸ್ ಅವರು ಎಲ್ಲರಿಗಿಂತ ವಿಭಿನ್ನ. ಹಾವನೂರು ವರದಿಯನ್ನು ಜಾರಿಗೆ ತಂದು ಹಿಂದುಳಿದ ವರ್ಗಗಳಿಗೆ ನೆರವಾಗಿದ್ದಾರೆ. ಪ್ರಧಾನಿಯಾಗಿದ್ದ ಇಂದಿರಾಗಾಂಧಿ ಗರೀಬಿ ಹಠಾವೋ ಕಾರ್ಯಕ್ರಮ ಜಾರಿಗೊಳಿಸಿದರೆ, ಅದನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ ಕೀರ್ತಿ ದೇವರಾಜ ಅರಸ್ ಅವರಿಗೆ ಸಲ್ಲುತ್ತದೆ. ತನ್ನ ಅಧಿಕಾರಾವಧಿಯಲ್ಲಿ ಮಲ ಹೊರುವ ಪದ್ಧತಿ ನಿಷೇಧಿಸಿದರು. –ಎಂ.ಶಿವಣ್ಣ.**

ವೆಂಕಟೇಶ್ವರನ ದರ್ಶನಕ್ಕಿದ್ದ ಎನ್‌ಆರ್‌ಐಗಳ ಅವಧಿ ವಿಸ್ತರಣೆ



ತಿರುಮಲ: ಸುಪಥಂ ಮಾರ್ಗದ ಮೂಲಕ ಅನಿವಾಸಿ ಭಾರತೀಯರು (ಎನ್‌ಆರ್‌ಐ)ಗಳು ಶ್ರೀ ವೆಂಕಟೇಶ್ವರ ಸ್ವಾಮಿ ದರ್ಶನ ಪಡೆಯಲು ಇದ್ದ ದಿನಗಳನ್ನು ಟಿಟಿಡಿ ವಿಸ್ತರಣೆ ಮಾಡಿದೆ. ಇದಕ್ಕೂ ಮೊದಲು ಅನಿವಾಸಿ ಭಾರತೀಯರು ಭಾರತಕ್ಕೆ ಬಂದ ಬಳಿಕ ವೆಂಕಟೇಶ್ವರ ಸ್ವಾಮಿ ದರ್ಶನಕ್ಕೆ ಸುಪಥಂ ಪ್ರವೇಶ ದ್ವಾರದ ಮೂಲಕ 30 ದಿನಗಳೊಳಗೆ ದರ್ಶನ ಪಡೆಯುವ ಅವಕಾಶ ನೀಡಲಾಗಿತ್ತು. ಇದೀಗ ಈ ಅವಧಿಯನ್ನು 90 ದಿನಗಳಿಗೆ ವಿಸ್ತರಿಸಲಾಗಿದೆ.

ಅವರು ತಮ್ಮ ಮೂಲ ಪಾಸ್‌ಪೋರ್ಟ್ ಮತ್ತು ನಕಲು ಪ್ರತಿಗಳನ್ನು ಹಾಜರುಪಡಿಸಿ, ಪರಿಶೀಲನೆಗೆ ಒಳಗಾದ ಬಳಿಕ 300 ರೂ. ವಿಶೇಷ ದರ್ಶನದ ಟಿಕೆಟ್ ಪಡೆಯಬಹುದಾಗಿತ್ತು. ಸದ್ಯ ಈ ಅವಧಿಯನ್ನು ಮನವಿ ಮೇರೆಗೆ ವಿಸ್ತರಿಸಿ ಟಿಟಿಡಿ ಆದೇಶ ಹೊರಡಿಸಿದೆ.

'ಶ್ರೀ ವೆಂಕಟೇಶ್ವರ ಆಪನ್ನ ಹೃದಯ' ಯೋಜನೆಗೆ ಭಕ್ತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಇದಕ್ಕಾಗಿ ಡೋನರ್ ಸೆಲ್‌ನಲ್ಲಿ ಮೀಸಲಾದ ಕೌಂಟರ್ ಸ್ಥಾಪಿಸಲಾಗಿದೆ. ಶ್ರೀವಾಣಿ ಟ್ರಸ್ಟ್‌ಗೆ ಕೊಡುಗೆ ನೀಡಿದ ಭಕ್ತರಿಗೆ ಮೀಸಲಾದ ದೈನಂದಿನ ಕೋಟಾವನ್ನು ಪರಿಚಯಿಸಿದ್ದು, ಈ ವ್ಯವಸ್ಥೆ ಜೂನ್ 10ರಿಂದ ಜಾರಿಗೆ ಬರಲಿದೆ.

ಸಾಲ ಮೇಳ ಯೋಜನೆ ಪ್ರಚಾರಕ್ಕೆ ಚಾಲನೆ...



ಮೈಸೂರು ಗಾಂಧಿ ವೃತ್ತದಲ್ಲಿರುವ ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ವತಿಯಿಂದ ಹಮ್ಮಿಕೊಂಡ ಸಾಲ ಮೇಳ ಯೋಜನೆಯ ಮಾಹಿತಿ ಫಲಕವನ್ನು ಆಟೋಗಳಿಗೆ ಅಂಟಿಸಿ ಪ್ರಚಾರಕ್ಕೆ ಚಾಲನೆ ನೀಡಲಾಯಿತು. ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ರಾಜಕೀಯ ರವಿಕುಮಾರ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ಪಿ.ರಾಜೇಶ್ವರಿ, ಜಿ.ನಿರಂಜನ್, ಸಿ.ಚಂದ್ರಶೇಖರ್, ಹೆಚ್.ಹರೀಶ್ ಕುಮಾರ್, ಕಾರ್ಯದರ್ಶಿ ಕೆ.ಹರ್ಷಿತ್ ಇನ್ನಿತರರಿದ್ದರು.

ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜೂ.6(ಜಿಎ)–ದಿಗಂಬರ ಜೈನ್ ಸಮಾಜ, ಮಹಾವೀರ ಭವನ, ಪದ್ಮಶ್ರೀ ಮಹಿಳಾ ಸಮಾಜ, ಕೇವಲಿನ್ ಚಾರಿಟಬಲ್ ಟ್ರಸ್ಟ್ ಸಹಯೋಗದೊಂದಿಗೆ ಶಾಂತಿ ಚಕ್ರ ಯುವ ಬ್ರಿಗೇಡ್‌ನಿಂದ ಜೂ.7ರಂದು ಬೆಳಗ್ಗೆ 10 ಗಂಟೆಗೆ ಶ್ರೀರಾಂಪುರದ ಮಹಾವೀರ ಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶಾಂತಿಚಕ್ರ ಯುವ ಬ್ರಿಗೇಡ್‌ನ ಸೃಜನ್ ಎಸ್.ಇಜಾನೀ ಈ ವಿಷಯ ತಿಳಿಸಿ, ಹಿರಿಯ ನಾಗರಿಕರಾದ ಎಸ್.ಶ್ರೀಧರ್ ಮೂರ್ತಿ ಶಿಬಿರ ಉದ್ಘಾಟಿಸುವರು. ಶಾಂತಿ ಚಕ್ರ ಯುವ ಬ್ರಿಗೇಡ್‌ನ ಅನನ್ಯ ಜೈನ್ ಅಧ್ಯಕ್ಷತೆ ವಹಿಸುವರು. ಶಿಬಿರದಲ್ಲಿ ಸಕ್ಕರೆ ಕಾಯಿಲೆ, ಕೊಲೆಸ್ಟರಾಲ್, ಹೃದಯ ದೊತ್ತಡ, ಕಣ್ಣು, ದಂತ ಹಾಗೂ ಕಿವಿ ಆರೋಗ್ಯ ತಪಾಸಣೆ ನಡೆಸಲಾಗುವುದು. ಗೋಷ್ಠಿಯಲ್ಲಿ ಚಿರಂತ್ ಜೈನ್, ಪ್ರಖ್ಯಾತ್ ಜೈನ್, ಅಮೋಘ್‌ಜೈನ್, ಸುಮಾ ಜೈನ್, ಅಶ್ವತ್‌ಕುಮಾರ್, ಸೀಮಂತಿನಿ ಇದ್ದರು.



ಅಪ್ಪ-ಅಮ್ಮನಿಗೆ 50ರ ಸಂಭ್ರಮ



ರಾಜೇಶ್ವರಿ ಎನ್ & ಬಸವರಾಜ್ .ಸಿ

ಪರಸ್ಪರ ಪ್ರೀತಿ, ವಿಶ್ವಾಸ ಮತ್ತು ತ್ಯಾಗದ ಮೂಲಕ 50 ವರ್ಷಗಳ ದಾಂಪತ್ಯ ಜೀವನವನ್ನು ಯಶಸ್ವಿಯಾಗಿ ಪೂರೈಸಿ ನಮಗೆಲ್ಲರಿಗೂ ಆದರ್ಶ ಪ್ರಾಯರಾಗಿರುವ ಪ್ರೀತಿಯ ಅಪ್ಪ ಅಮ್ಮನಿಗೆ 50ನೇ ವಿವಾಹ ವಾರ್ಷಿಕೋತ್ಸವದ ಪ್ರೀತಿ ಪೂರ್ವಕ ಶುಭಾಶಯಗಳು ಭಗವಂತನು ನಿಮಗೆ ಆಯುಷ್ಯ ಆರೋಗ್ಯ ಮತ್ತು ಸುಖ ಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ

ಶುಭಕೋರುವವರು
ಶ್ರೀಮತಿ ಸೌಮ್ಯ ಮತ್ತು ಶ್ರೀ ಸೋಮಸುಂದರ್ ಎಸ್
ಶ್ರೀಮತಿ ಡಾ. ಸಪ್ನ ಮತ್ತು ಶ್ರೀ ರವಿಶಂಕರ್ ಎಸ್
ಶ್ರೀ ಚಂದ್ರಶೇಖರ್ ಮತ್ತು ಶ್ರೀಮತಿ ಜಾಹ್ನವಿ
ಮೊಮ್ಮಕ್ಕಳಾದ ಕುಮಾರಿ, ಕವನ ಎಸ್, ಹೇಮಶ್ರೀ .ಆರ್ ಮತ್ತು ಇಶಾನಿ .ಸಿ, ಚಿಕ್ಕ ವೀರಯ್ಯ ಮತ್ತು ನನ್ನಯ್ಯ ಕುಟುಂಬಸ್ಥರು ಮತ್ತು ಸ್ನೇಹಿತರು

TEACHERS REQUIRED

KANGAROO KIDS PRE SCHOOL

invites applications from passionate and dedicated educators for
- PRESCHOOL TEACHER
- ASSISTANT TEACHER

ELIGIBILITY:
- Graduate with relevant qualifications (NTT / Montessori preferred)
- Good communication skills in English
- Passion for working with young children
- Freshers and experienced candidates may apply

Location: Siddhartha Layout, Mysore

Call: 72049 69555

SITES FOR SALE

Near Vajmangala, T.Narasipura Road & Near KSRTC Bus Depot, Hunsur

8123387555
7259348777

FLAT FOR SALE

Well-Maintained 2 BHK Semi-Furnished East Facing Apartment near NIE College on Mysore - Mananthawadi Main Road, Clear Title, 24/7 Water, Power Backup, 100% Vaastu Complaint

Amenities: Swimming Pool, Gym, Party Hall, Security, Covered Parking. Prime Residential Location with Excellent Rental Potential.

Contact Owner
9611833242

ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರ ಕಾರ್ಯಾಲಯ, ಮೈಸೂರು
ನಗರ ಕೇಂದ್ರ ಗ್ರಂಥಾಲಯ, ಮಲೆ ಮಹದೇಶ್ವರ ರಸ್ತೆ,
ಪೀಪಲ್ಸ್ ಪಾರ್ಕ್, ನಜರ್‌ಬಾದ್, ಮೈಸೂರು–570010.
ದೂ: 2423678, 2430343. ಇ–ಮೇಲ್: ddccimys@gmail.com

ಸಂ: ನಕೇಗ್ರಂ.ಮೈ/ತಾ.ವಿ–1/ಕು.ಸಂ.ಗ್ರಂ.ವಾ.ಕ./02/2026–27 ದಿನಾಂಕ: 05.06.2026

ದ್ವಿ–ಲಕೋಟೆ ಅಲ್ಪಾವಧಿ ಮ್ಯಾನುಯಲ್ ಟೆಂಡರ್

ಉಪನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ, ಮಲೆ ಮಹದೇಶ್ವರ ರಸ್ತೆ, ಮೈಸೂರು–570010, ರವರು 2026–27ನೇ ಸಾಲಿಗೆ **ಕುವೆಂಪು ಸಂಚಾರಿ ಗ್ರಂಥಾಲಯ ವಾಹನಕ್ಕೆ ವಾಹನ ಚಾಲಕರ ಸೇವೆಯನ್ನು ಪಡೆಯಲು** ದ್ವಿ–ಲಕೋಟೆಯಲ್ಲಿ ಅಲ್ಪಾವಧಿ ಮ್ಯಾನುಯಲ್ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **19.06.2026 ರಂದು ಸಂಜೆ 5.00 ಗಂಟೆ ಆಗಿರುತ್ತದೆ.** ಅರ್ಹ ನೋಂದಾಯಿತ ಆಸಕ್ತಿವುಳ್ಳವರು ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ವಿವರ: 1) ಮೈಸೂರು ನಗರ ಕೇಂದ್ರ ಗ್ರಂಥಾಲಯದ ಕುವೆಂಪು ಸಂಚಾರಿ ಗ್ರಂಥಾಲಯ ವಾಹನಕ್ಕೆ ವಾಹನ ಚಾಲಕರನ್ನು ಒದಗಿಸುವುದು. ಅಂದಾಜಿಸಲಾದ ಮೊತ್ತ: **3,75,000.00.** ಇ.ಎಂ.ಡಿ ಮೊತ್ತ : **4,690.00.** ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 20.06.2026 ರಂದು ಬೆಳಿಗ್ಗೆ 11.00 ಗಂಟೆಗೆ. **ಆರ್ಥಿಕ ಲಕೋಟೆ ತೆರೆಯುವ ದಿನಾಂಕ: 20.06.2026 ರಂದು ಮಧ್ಯಾಹ್ನ 2.30 ಗಂಟೆಗೆ.**

ಸಹಿ/– ಉಪನಿರ್ದೇಶಕರು
ನಗರ ಕೇಂದ್ರ ಗ್ರಂಥಾಲಯ, ಮೈಸೂರು.

DIPR/MYS/269/SA/2026-27

NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

PUBLIC NOTICE

This is to inform the general public that my client proposes to purchase of the immovable property (more fully described in the Schedule given below and hereinafter referred as the **"Schedule Property"),** with its owner namely, **Mr. Doreswamy,** son of Mr. Papegowda, residing at Huyilalu Village, Elavala Hobli, Nagavala Post, Mysuru Taluk, Mysuru District - 570001.

All persons having or claiming any right, title, estate or interest by waiver, inheritance, share, sale, mortgage, transfer, lease, tenancy, lien, charge, trust, maintenance, easement, gift, devise bequest, exchange, pre-emption, possession or encumbrance or otherwise howsoever into or upon the Schedule Property described herein below are called upon to intimate the same in writing to the undersigned at the below given address along with all the documents relating to such claim within 15 days from the date of publication of this notice, failing which, any such claim of any party shall be deemed to have been waived for all legal practical purposes and shall not be entertained after such period and my client will proceed with the proposed purchase of the Scheduled Property on the basis that there are no claims whatsoever with respect thereto.

Sd/- Nagendra Prasad DG
B.A.L, LL.B. Advocate
Roll No. KAR/1609/05
#405, Sardar Vallabh Bhai Patel Nagar, T.N. Para Road,
Lalithadripuram Post, Mysuru-570035
Mob: 9916139244

ಕೊನೆಯ 2 ದಿನ

THAILAND INTERNATIONAL SHOPPING FESTIVAL



4 ರಿಂದ 8ನೇ ಜೂನ್, 2026
(ಬೆಳಿಗ್ಗೆ 10.30 ರಿಂದ ರಾತ್ರಿ 8.30 ರವರೆಗೆ)

ಸಾ ರಾ ಕನ್ವೆನ್ಷನ್ ಹಾಲ್,
ದಟ್ಟಗಳ್ಳಿ ರಿಂಗ್ ರಸ್ತೆ, ಕೆಇಬಿ ಗ್ರಿಡ್ ಹತ್ತಿರ,
ಕನಕದಾಸ ನಗರ, ಮೈಸೂರು



THAILAND AFGHANISTAN SINGAPORE VIETNAM IRAN DUBAI INDONESIA EGYPT KOREA TIBET UGANDA

• ಥೈಲ್ಯಾಂಡ್ ಹೂವುಗಳು. • ಥೈಲ್ಯಾಂಡ್ ಗೃಹಾಲಂಕಾರ ಉತ್ಪನ್ನಗಳು. • ಥೈಲ್ಯಾಂಡ್ ಮುತ್ತಿನ ಅಭರಣಗಳು. • ಥೈಲ್ಯಾಂಡ್ ಮಹಿಳಾ ಪರಿಕರಗಳು. • ಥೈಲ್ಯಾಂಡ್ ಪಾದರಕ್ಷೆಗಳು. • ಸಿಂಗಾಪುರ ಕೈಚೀಲಗಳು ಮತ್ತು ಮಹಿಳಾ ಪರಿಕರಗಳು. • ಕೊರಿಯಾ ಮಹಿಳಾ ಪರಿಕರಗಳು. • ದುಬೈ ಆಭರಣಗಳು, ಬಕ್ಲವಾ, ಸುಗಂಧ ದ್ರವ್ಯಗಳು ಮತ್ತು ಚಾಕೊಲೇಟ್‌ಗಳು. • ಇರಾನಿನ ಪುರುಷರು ಮತ್ತು ಮಹಿಳೆಯರ ಅಭರಣಗಳು, ಕೇಸರಿ, ಖರ್ಜೂರ ಮತ್ತು ಚಾಕೊಲೇಟ್‌ಗಳು. • ಅಫ್ಘಾನಿಸ್ತಾನದ ಒಣ ಹಣ್ಣುಗಳು, ಕೇಸರಿ ಮತ್ತು ಜೇನುತುಪ್ಪ. • ಮಲೇಷ್ಯಾ ಮಹಿಳಾ ಅಭರಣಗಳು ಮತ್ತು ಪರಿಕರಗಳು. • ಉಗಾಂಡಾ ಕಲಾಕೃತಿಗಳು ಮತ್ತು ಕೃತಕ ಆಭರಣಗಳು. • ಟಿಬೆಟ್ ಸೆರಾಮಿಕ್ ಕ್ರೋಕರಿ ಮತ್ತು ಗೃಹಾಲಂಕಾರ ಉತ್ಪನ್ನಗಳು. • ಬಾಂಗ್ಲಾದೇಶ ಸೀರೆಗಳು. • ಥಾಯ್ ಛತ್ರಿ ಮತ್ತು ಕೊರಡಿ ಫ್ರೆಷ್ನರ್. • ಇಂಡೋನೇಷಿಯಾ ಟೀಕ್ ವುಡ್ ಪೀಠೋಪಕರಣಗಳು. • ವಿಯೆಟ್ನಾಂ ಹೊರಾಂಗಣ ಪೀಠೋಪಕರಣಗಳು. • ಟರ್ಕಿ ರಗ್‌ಗಳು ಮತ್ತು ಕಾರ್ಪೆಟ್‌ಗಳು ಮತ್ತು ಇನ್ನೂ ಹೆಚ್ಚಿನವು..

www.iadsandevents.com exhibitions_iadsnevents iadsnevents
+91 8884688894 / 6363160413
AN EVENT BY iads & events

PROPERTIES FOR SALE IN PRIME LOCATION

1) 43x100 East Facing (for Go Down - Rent / Sale) Pampapathi Road, Kuvempunagar 2nd stage, Mysore
2) Ramakrishna Nagar, 'H' Block, East Facing 40x60
3) Dattagalli 44x42 East Facing
4) NIE College Road Property 43x100 North Facing
5) 40x60 New House for Sale in Police Layout
6) MMG Temple Bell, Srirampura 40x55 - East Facing Site

Call - 9008111454

25ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀಮತಿ ಆಶಾ ಮತ್ತು ಹೆಚ್.ಆರ್ ಗಣೇಶ್‌ಮೂರ್ತಿ
ಕೃಷ್ಣರಾಜಸಾಗರ, ಮಂಡ್ಯ
ಶುಭಕೋರುವವರು: ವಿಶ್ವಾಸ್ .ಜಿ ಮತ್ತು ವಿಕಾಸ್ .ಜಿ
ಸ್ನೇಹಿತರು ಹಾಗೂ ಕುಟುಂಬವರ್ಗದವರು

REQUIRED

B.Sc., B.Ed (Mathamatics Teacher for high School)
B.A, B.Ed (English Teacher)
B.Sc or Any Degree
MONTESSORI TRAINER
B.PED / M.PED
9535333467
9611987171
kalabharathi1991@gmail.com

ಹಸಿರು ನಮ್ಮ ಉಸಿರು

ಮೈಸೂರು ತಾಲೂಕು ಜಯಪುರ ಹೋಬಳಿ ಮತ್ತು ಕೋಟೆ ತಾಲೂಕು ಹಂಪಾಪುರ ಹೋಬಳಿಯಲ್ಲಿ ಫಾರಂಹೌಸ್ ಮಾಡಲು 10 ಗುಂಟೆ ಹಾಗೂ 25 ಗುಂಟೆ 1 ಎಕರೆ 28 ಗುಂಟೆ ಹಾಗೂ 1 ಎಕರೆ 30 ಗುಂಟೆ ಜಮೀನು ಮಾರಾಟಕ್ಕಿದೆ
9945661696

ಬೇಕಾಗಿದ್ದಾರೆ

ಗುಂಡ್ಲುಪೇಟೆಯ ಗಾರ್ಮೆಂಟ್ ಘಟಕಕ್ಕೆ "ಟೈಲರ್ ಮಾಸ್ಟರ್" ಬೇಕಾಗಿದ್ದಾರೆ
ಸಂಪರ್ಕಿಸಿ: 9071165556

|| ಓಂ ಶ್ರೀ ಗುರುಬಸವಲಿಂಗಾಯ ನಮಃ ||



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ರಿ.)
ಮೈಸೂರು ಜಿಲ್ಲಾ ಘಟಕ



ಅಭಿನಂದನೆಗಳು





ಕರ್ನಾಟಕ ಸರ್ಕಾರದ ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಶ್ರೀ ಈಶ್ವರ ಖಂಡ್ರೆ, ಶ್ರೀ ಎಂ.ಬಿ. ಪಾಟೀಲ್, ಶ್ರೀ ಶರಣ ಪ್ರಕಾಶ್ ಪಾಟೀಲ್ ಹಾಗೂ ಎಲ್ಲಾ ಸಚಿವರುಗಳಿಗೆ ಅಭಿನಂದನೆಗಳು



ಹೆಚ್.ವಿ. ಬಸವರಾಜು (ಹಿನಕಲ್)
ಜಿಲ್ಲಾಧ್ಯಕ್ಷರು, ಮೈಸೂರು ಜಿಲ್ಲಾ ಘಟಕ



ರಾಜ್ಯ ಕಾರ್ಯ ನಿರ್ವಾಹಕ ಸಮಿತಿ ಸದಸ್ಯರು


ರಾಜ್ಯ ಕಾರ್ಯ ನಿರ್ವಾಹಕ ಸಮಿತಿ ಸದಸ್ಯರು-ಮಹಾದಾನಿಗಳು



ಜಿಲ್ಲಾ ಕಾರ್ಯ ನಿರ್ವಾಹಕ ಸಮಿತಿ ಸದಸ್ಯರು-ದಾನಿಗಳು

ಜಿಲ್ಲಾ ಕಾರ್ಯ ನಿರ್ವಾಹಕ ಸಮಿತಿ ಸದಸ್ಯರು





ನಕ್ಕರೆ ಅದೇ ಸ್ವರ್ಗ

ಅಪ್ಪ : ಯಾಕೋ ಶಾಲೆಗೆ ಹೋಗಿಲ್ಲ??

ಪುಟ್ಟ : ನಿನ್ನೆ ನಮ್ಮನ್ನೆಲ್ಲಾ ತೂಕ ಮಾಡಿದ್ದಾರೆ? ಇವತ್ತು ಮಾರಿ ಬಿಡ್ತಾರೇನೋ ಅಂತ ಹೋಗಿಲ್ಲ!

ಮೈಸೂರು ಮಿತ್ರ

ಭಾನುವಾರ, ಜೂನ್ 7, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ವೈರಸ್ಸು ಮತ್ತು ವೈ ಮನಸ್ಸು ಇವೆರಡರಿಂದ ದೂರ ಇರಬೇಕು. ವೈರಸ್‌ನಿಂದ ಆರೋಗ್ಯ ಹಾಳು, ವೈ ಮನಸ್ಸಿನಿಂದ ನೆಮ್ಮದಿ ಹಾಳಾಗುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಅಂಬಲಿ ಕುಡಿಯುವವನಿಗೆ ಮೀಸೆ ತಿಕ್ಕುವನೊಬ್ಬ...!

ನಿಮ್ಮ ಪತ್ರಗಳು

ಕೇರಳ ಆನ್‌ಲೈನ್ ಲಾಟರಿ ವಂಚನೆ ತಡೆಗಟ್ಟಿ...

ಮಾನ್ಯರೆ,

ನಮ್ಮ ರಾಜ್ಯದಲ್ಲಿ ಲಾಟರಿ ನಿಷೇಧವಿದ್ದರೂ ಕೇರಳ ಆನ್‌ಲೈನ್ ಲಾಟರಿ ಹೆಸರಿನಲ್ಲಿ ಜನರನ್ನು ವಂಚಿಸುತ್ತಿರುವ ಸೈಬರ್ ಕ್ರಿಮಿನಲ್‌ಗಳ ಅಟ್ಟಹಾಸ ಮಿತಿಮೀರಿದೆ. ಇತ್ತೀಚೆಗಷ್ಟೇ ರಾಜ್ಯದ ಮುಗ್ಧರು ಬರೋಬ್ಬರಿ 50 ಲಕ್ಷ ರೂ. ಕಳೆದುಕೊಂಡಿರುವುದು ತೀವ್ರ ಆತಂಕಕಾರಿ ಸಂಗತಿ. ಈ ಜಾಲವು ನಕಲಿ ವೆಬ್‌ಸೈಟ್ ಮತ್ತು ಆರ್‌ಬಿಐ ಹೆಸರಿನ ಖೋಟಾ ಪತ್ರಗಳನ್ನು ಬಳಸಿ ಜಿಎಸ್‌ಟಿ ಹಾಗೂ ಟಿಡಿಎಸ್ ನೆಪದಲ್ಲಿ ಹಂತ ಹಂತವಾಗಿ ಹಣ ಲೂಟಿ ಮಾಡುತ್ತಿದೆ. ಕೇರಳ ಸರ್ಕಾರವು ತನ್ನ ಅಧಿಕೃತ ಲಾಟರಿಯನ್ನು ಕಾಗದದ ರೂಪದಲ್ಲೇ ಮಾರಾಟ ಮಾಡುತ್ತದೆ. ಎಂದಿಗೂ ಆನ್‌ಲೈನ್‌ನಲ್ಲಿ ಮಾರುವುದಿಲ್ಲ ಎಂಬ ಕನಿಷ್ಠ ಜ್ಞಾನವೂ ಜನರಿಗಿಲ್ಲದಿರುವುದು ದುರಂತ. ವಾಟ್ಸಾಪ್ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಇಂತಹ ನಕಲಿ ಲಾಟರಿ ಲಿಂಕ್‌ಗಳನ್ನು ಸೈಬರ್ ಕ್ರೈಮ್ ವಿಭಾಗವು ತಕ್ಷಣವೇ ಪತ್ತೆಹಚ್ಚಿ ನಿರ್ಬಂಧಿಸಬೇಕು.

ಅನುಮಾನಾಸ್ಪದ ಖಾತೆಗಳಿಗೆ ದೊಡ್ಡ ಮೊತ್ತದ ವರ್ಗಾವಣೆಯಾಗುವಾಗ ಬ್ಯಾಂಕುಗಳು ಎಚ್ಚರಿಕೆ ಸಂದೇಶ ನೀಡಬೇಕು. ಸರ್ಕಾರವು ಆನ್‌ಲೈನ್ ಕೇರಳ ಲಾಟರಿ ಸಂಪೂರ್ಣ ನಕಲಿ ಎಂದು ಮಾಧ್ಯಮಗಳಲ್ಲಿ ವ್ಯಾಪಕ ಜಾಗೃತಿ ಮೂಡಿಸಬೇಕು. ಸಾರ್ವಜನಿಕರು ಆಮಿಷಗಳಿಗೆ ಬಲಿಯಾಗುವುದನ್ನು ನಿಲ್ಲಿಸದಿದ್ದರೆ ಈ ಡಿಜಿಟಲ್ ದರೋಡೆಗೆ ಕೊನೆ ಇರಲ್ಲ. **–ಡಾ.ವಿಜಯಕುಮಾರ್ ಎಚ್.ಕೆ., ಮೈಸೂರು.**

ಹಿರಿಯ ಸಚಿವರ ರಾಜೀನಾಮೆ ಪ್ರಹಸನ ಸಲ್ಲ

ಮಾನ್ಯರೆ,

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾದ ಬಳಿಕ ಸಂಪುಟದಲ್ಲಿ ಸ್ಥಾನ ಪಡೆದ ಹಿರಿಯ ಸಚಿವರಾದ ರಾಮಲಿಂಗಾರೆಡ್ಡಿ ಮತ್ತು ಕೆ.ಹೆಚ್.ಮುನಿಯಪ್ಪ ನಮಗೆ ಇಂತಹದ್ದೇ ಖಾತೆ ಬೇಕು ಎಂದು ಹಕ್ಕು ಚಲಾಯಿಸುವುದು ಸರಿಯಲ್ಲ. ಹಿರಿತನಕ್ಕೆ ಗೌರವ ನೀಡಿ ಸಂಪುಟದಲ್ಲಿ ಸ್ಥಾನ ಕಲ್ಪಿಸಿದ್ದರು ಇವರು ತೃಪ್ತಿಯಾಗಿಲ್ಲ ಎಂದರೆ ಸಾಕಷ್ಟು ಅಧಿಕಾರ ಅನುಭವಿಸಿರುವ ಇವರ ಅಧಿಕಾರ ದಾಹ ಎಷ್ಟಿದೆ ಎಂದು ತಿಳಿಯುತ್ತದೆ. 3–4 ಬಾರಿ ಗೆದ್ದು ಶಾಸಕರಾಗಿರುವ ಅನೇಕರು ಇನ್ನೂ ಸಚಿವ ಸ್ಥಾನಕ್ಕೆ ಕಾಯುತ್ತಿದ್ದಾರೆ. ಇಂತಹವರಿಗೆ ಹಿರಿಯರು ಮುಂದೆ ನಿಂತು ಅವಕಾಶ ಕಲ್ಪಿಸಬೇಕು. ಅಂತಹದ್ದರಲ್ಲಿ ಇವರಿಗೆ ಸಚಿವ ಸ್ಥಾನ ದೊರೆತರು ಇವರಿಗೆ ಸಮಾಧಾನ ಇಲ್ಲ. ಖಾತೆಗಾಗಿ ರಾಜೀನಾಮೆ ನೀಡುತ್ತಿರುವುದು ಅಸಮಂಜಸ. ಕಾಂಗ್ರೆಸ್ ಹೈಕಮಾಂಡ್ ಇಂತಹ ಹೈಜಾಕ್ ಮಾಡುವ ನಾಯಕರ ರಾಜೀನಾಮೆ ಪಡೆದು ಅವಕಾಶ ಸಿಗದ ಹಿರಿಯ ಶಾಸಕರಿಗೆ ಅವಕಾಶ ಕಲ್ಪಿಸಬೇಕು. ಅ ಮೂಲಕ ಹೈ ಕಮಾಂಡ್ ಕಾಂಗ್ರೆಸ್ ಆಡಳಿತಕ್ಕೆ ಬಲ ತುಂಬಬೇಕು. ಪಕ್ಷದ ನಿಷ್ಠಾವಂತ ಡಿ.ಕೆ.ಶಿವಕುಮಾರ್ ಬೆಂಬಲಕ್ಕೆ ನಿಲ್ಲಬೇಕು. **–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ.**

ಸಾಧಕರಿಗಷ್ಟೇ ಸನ್ಮಾನಗಳು ಸಿಗಲಿ...

ಮಾನ್ಯರೇ,

ಇತ್ತೀಚಿನ ದಿನಗಳಲ್ಲಿ ಸನ್ಮಾನಗಳು ಅದರ ಮೌಲ್ಯಗಳನ್ನೇ ಕಳೆದುಕೊಳ್ಳುತ್ತಿವೆ. ಸನ್ಮಾನಗಳು ನಾನಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ದೊರೆಯುವಂತಾಗಬೇಕು. ಸಾಧಕರು ಸಮಾಜಕ್ಕೆ ನೀಡಿದ ಕೊಡುಗೆಗಳು ಅವರ ಗುಣಗಳು ಮಾದರಿಯಾಗಬೇಕು. ಅವರ ಅಧಿಕಾರ ಅವಧಿಯಲ್ಲಿ ಜನಪರ ಕೆಲಸಗಳು ಪ್ರಾಮಾಣಿಕತೆಯು ಮಾನದಂಡವಾಗಬೇಕು. ಇನ್ನು ಕಲೆ, ಭಾಷೆ, ಸಾಹಿತ್ಯ, ವಿಜ್ಞಾನ ಮುಂತಾದ ಕ್ಷೇತ್ರದಲ್ಲಿ ಅವರು ಮಾಡಿದಂತಹ ಸಾಧನೆಯೆ ಸನ್ಮಾನಕ್ಕೆ ಅರ್ಹವಾಗಬೇಕು. ಜನಪರ ಹಾಗೂ ಶ್ರಮಿಕರು ಮತ್ತು ರೈತರ, ಕಾರ್ಮಿಕರ ಪರವಾಗಿ ಸಮಾನ ವೇತನಕ್ಕಾಗಿ ಹಾಗೂ ರಾಜ್ಯ ರಾಷ್ಟ್ರದ ಪರವಾಗಿ ಹೋರಾಟ ಮಾಡಿದ ಅರ್ಹ ವ್ಯಕ್ತಿಗಳಿಗೆ ಸನ್ಮಾನ ಗೌರವಗಳು ಸಿಗುವಂತಾಗಬೇಕು. ಆಗ ಸನ್ಮಾನಕ್ಕೂ ಗೌರವಕ್ಕೂ ಒಂದು ಅರ್ಥ ಬರುತ್ತದೆ. **–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.**

ಖಾತೆಗಾಗಿ ಏಕೆ ಅಷ್ಟೊಂದು ಕ್ಯಾತೆ?

ಮಾನ್ಯರೆ,

ರಾಜ್ಯದ ನೂತನ ಸಚಿವರಿಗೆ ಖಾತೆ ಹಂಚಿಕೆ ಬೆನ್ನಲ್ಲೇ, ತಮಗೆ ಹಂಚಿಕೆ ಮಾಡಿದ ಖಾತೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಕೆಲವು ಸಚಿವರು ರಾಜೀನಾಮೆಗೆ ಮುಂದಾಗಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಜಲ ಸಂಪನ್ಮೂಲ ಖಾತೆ ಸಚಿವರಾಗಿರುವ ರಾಮಲಿಂಗಾರೆಡ್ಡಿ ಈಗಾಗಲೇ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವ ಕೆ.ಎಚ್.ಮುನಿಯಪ್ಪ ಸೇರಿದಂತೆ ಇನ್ನೂ ಒಂದೆರಡು ಸಚಿವರು ರಾಜೀನಾಮೆ ನೀಡಲು ಚಿಂತನೆ ನಡೆಸಿದ್ದಾರೆ ಎಂದು ಹೇಳಲಾಗಿದೆ. ಆದರೆ, ಸಿಎಂ ಡಿ.ಕೆ.ಶಿವಕುಮಾರ್ ಇವರನ್ನೆಲ್ಲಾ ಸಮಾಧಾನಪಡಿಸುವುದಾಗಿ ಹೇಳಿದ್ದಾರೆ. ಮತ್ತೊಂದು ಬೆಳವಣಿಗೆಯಲ್ಲಿ, ಕಾಂಗ್ರೆಸ್ ಮುಖಂಡ ಮತ್ತು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ರಾಹುಲ್ ಗಾಂಧಿ, ರಾಜೀನಾಮೆ ನೀಡಿರುವ ಮಂತ್ರಿಗಳ ರಾಜೀನಾಮೆ ಅಂಗೀಕರಿಸುವಂತೆ ಮುಖ್ಯಮಂತ್ರಿಗಳಿಗೆ ಸೂಚನೆ ನೀಡಿದ್ದಾರೆ ಎನ್ನಲಾಗುತ್ತಿದೆ.

ಖಾತೆಗಳ ಹಂಚಿಕೆ ಮುಖ್ಯಮಂತ್ರಿಗಳ ಪರಮಾಧಿಕಾರವಾದರೂ, ತಮಗೆ ಇಂತಹುದೇ ಖಾತೆ ಬೇಕೆಂದು ಪಟ್ಟು ಹಿಡಿಯುತ್ತಾ ಬಂದಿರುವ ಶಾಸಕರ ಸಾಕಷ್ಟು ಉದಾಹರಣೆಗಳನ್ನು ಇತಿಹಾಸದಿಂದ ಹೆಕ್ಕಿ ತೆಗೆಯಬಹುದು. ತಮಗೆ ಇಂತಹುದೇ ಖಾತೆ ಬೇಕೆಂದು ಹಟ ಹಿಡಿಯುವುದು ಖಂಡಿತಾ ಸರಿಯಲ್ಲ. ಒಂದು ವೇಳೆ ಅಂತಹ ಬೇಡಿಕೆ ಇಟ್ಟರೆ, ಅಂಥವರಿಗೆ ತಾವು ಅಪೇಕ್ಷಿಸುತ್ತಿರುವ ಖಾತೆಯಲ್ಲಿ ಪಟ್ಟಭದ್ರ ಹಿತಾಸಕ್ತಿ ಇದೆಯೆಂದು ಭಾವಿಸಬಹುದು. ಅನೇಕ ಶಾಸಕರು ಪ್ರಬಲ ಖಾತೆಗಳಿಗೆ ಬೇಡಿಕೆ ಇಡುವುದರ ಹಿಂದಿರುವ ಕಾರಣವನ್ನು ಶ್ರೀಸಾಮಾನ್ಯರು ಅರಿಯದೇ ಇಲ್ಲ.

ದಿವಂಗತ ರಾಮಕೃಷ್ಣ ಹೆಗಡೆಯವರ ಸಂಪುಟದಲ್ಲಿ ಅಷ್ಟೇನೂ ಪ್ರಾಮುಖ್ಯವಲ್ಲದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಖಾತೆಯ ಸಚಿವರಾಗಿದ್ದ ಹಾಗೂ ನೀರ್‌ಸಾಬ್ ಎಂದೇ ಇಡೀ ರಾಜ್ಯಾದ್ಯಂತ ಹೆಸರುವಾಸಿಯಾಗಿದ್ದ ಅಬ್ದುಲ್ ನಜೀರ್‌ಸಾಬ್, ರಾಜ್ಯದ ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರು ಕಲ್ಪಿಸಿ 'ಆಧುನಿಕ ಭಗೀರಥ' ಎನ್ನಿಸಿಕೊಂಡಿದ್ದರು. ಅವರೆಂದೂ ತಮಗೆ ಇಂತಹದೇ ಖಾತೆ ಬೇಕೆಂದು ಬೇಡಿಕೆ ಇಟ್ಟಿರಲಿಲ್ಲ. ಓರ್ವ ಮಾದರಿ ಸಚಿವರಾಗಿಯೂ ಗುರ್ತಿಸಲ್ಪಟ್ಟಿದ್ದರು. ಕಾಂಗ್ರೆಸ್ ಹೈಕಮಾಂಡ್ ಇಂತಹ ಅತೃಪ್ತ ಸಚಿವರ ಬೇಡಿಕೆಗೆ ಯಾವುದೇ ಕಾರಣಕ್ಕೂ ಮಣಿಯಬಾರದು. ರಾಜೀನಾಮೆ ನೀಡಲು ಮುಂದಾಗಿರುವ ಸಚಿವರ ರಾಜೀನಾಮೆಯನ್ನು ಅಂಗೀಕರಿಸಿ ಇತರ ಅರ್ಹ ಸಚಿವಾಕಾಂಕ್ಷಿಗಳಿಗೆ ಅವಕಾಶ ನೀಡುವುದು ಪಕ್ಷದ ಹಿತದೃಷ್ಟಿಯಿಂದ ಒಳ್ಳೆಯದೆಂದು ಹೇಳಬಹುದು.

–ಕೆ.ವಿ.ವಾಸು, ವಕೀಲರು–ನೋಟರಿ, ಮೈಸೂರು.


ನಮ್ಮೂರ ಆದರ್ಶಪ್ರಾಯರು...



ಕಳೆದ ವರ್ಷ 'ಮೈಸೂರು ಮಿತ್ರ'ದಲ್ಲಿ ನಾನು ಬರೆದ ಮೈಸೂರಿನ 50 ಗಣ್ಯಾತಿಗಣ್ಯರ ಅಂಕಣ, 'ನಮ್ಮ ಮೈಸೂರಿನ ಅಸಾಮಾನ್ಯರು' ಪ್ರಕಟವಾಗಿ, ಆ ಲೇಖನಗಳನ್ನು ಓದುಗರು ಮೆಚ್ಚಿ ನಿರೀಕ್ಷೆಗೂ ಮೀರಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಮರೆತುಹೋಗಿದ್ದ ಈ ಐವತ್ತು ಗಣ್ಯರ ಪರಿಚಯ ಮಾಡಿ ನಾನು ನಿಲ್ಲಿಸಿದ್ದೆ. ಆದರೆ ಈ ಅಂಕಣವನ್ನು ಮುಂದುವರಿಸುವಂತೆ ಬಹಳಷ್ಟು ಓದುಗರು ಒತ್ತಾಯಿಸುತ್ತಾ ಬರುತ್ತಿದ್ದಾರೆ. ಓದುಗರ ವಿಶ್ವಾಸಕ್ಕೆ ಮಣಿದು ನಾನು ಎರಡನೇ ಕಂತಿನ ಈ ಲೇಖನ ಮಾಲೆಯನ್ನು 'ನಮ್ಮೂರ ಆದರ್ಶಪ್ರಾಯರು' ಹೆಸರಿನಲ್ಲಿ ಮುಂದುವರಿಸುತ್ತಿದ್ದೇನೆ. ಈಗ ಪ್ರಕಟವಾಗುವ ಗಣ್ಯರ ತ್ಯಾಗಮಯ ಸೇವೆಯೂ ಅದೇ ರೀತಿ ದಾಖಲಾಗಿ ಉಳಿಯಲಿ ಎಂದು ನಾನಾದರೋ ಬಯಸುತ್ತೇನೆ. ಓದುಗರ ಪ್ರತಿಕ್ರಿಯೆಯೂ ಅಷ್ಟೇ ಮುಕ್ತವಾಗಿ ದೊರೆಯಲಿ ಎಂದು ಆಶಿಸುತ್ತೇನೆ. ಈ ಲೇಖನ ಮಾಲೆಯನ್ನು ಬರೆಯುವಾಗ ಈ ಮಹಾನುಭಾವರ ಚಿತ್ರಗಳು ಸಿಗದೆ ಹೋಗಬಹುದು. ಆ ಸಾಧ್ಯತೆಗಳೇ ಹೆಚ್ಚು. ದೊರೆತವರ ಚಿತ್ರಗಳು ಲೇಖನದ ಜೊತೆಗೆ ಪ್ರಕಟವಾಗುತ್ತವೆ. ಇಲ್ಲವೇ ಸಂದರ್ಭಕ್ಕೆ ಸರಿಹೊಂದುವ ಚಿತ್ರಗಳನ್ನು ಬಳಸಿಕೊಳ್ಳಲಾಗುವುದು. ಅವೂ ಲಭ್ಯವಾಗದೆ ಹೋದಲ್ಲಿ ಚಿತ್ರವಿಲ್ಲದೆಯೂ ಪ್ರಕಟಿಸಬೇಕಾಗಿ ಬರಬಹುದು ಎಂಬ ಮಾತನ್ನು ತಿಳಿಸಬಯಸುತ್ತೇನೆ. ಈ ಮಾಲಿಕೆಯ ಮೊದಲ ಲೇಖನ 'ಮೈಸೂರು ಮಿತ್ರ' ವಾರ್ಷಿಕ ಸಂಚಿಕೆಯಲ್ಲಿ ಪ್ರಕಟವಾಗುವ ಮೂಲಕ ಪ್ರಾರಂಭವಾಗಿರುವುದು ಶುಭಾರಂಭವೇ ಹೌದು.

8. 'ಧರ್ಮಪ್ರವರ್ತಕ' ಸಾಹುಕಾರ್ ಡಿ.ಬನುಮಯ್ಯ





ಗೌರಿ ಸತ್ಯ

ಹಿರಿಯ ಪತ್ರಕರ್ತರು

ಮೊ.87627 88685

(ಮೇ 31ರ ಸಂಚಿಕೆಯಿಂದ)

ಪ್ರಾಮಾಣಿಕತೆಯಿಂದ ವ್ಯಾಪಾರ ಮಾಡುತ್ತಾ ಶ್ರೀಮಂತಿಕೆಯನ್ನು ವೃದ್ಧಿಸಿಕೊಂಡರು. ಊರಿಗೆ ಗಣ್ಯರಾದರು. ಸನ್ಮಾನ–ಪ್ರಶಸ್ತಿಗಳು ಲಭಿಸಿದವು. 15 ವರ್ಷಗಳ ದಾಂಪತ್ಯದಲ್ಲಿ ನಾಲ್ಕು ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳನ್ನು ಪಡೆದರು.

1909ರಲ್ಲಿ ಪತ್ನಿ ಕಾಲವಾದರು. ಆ ವೇಳೆಗಾಗಲೇ ಆಧ್ಯಾತ್ಮಿಕ ಪ್ರಭಾವಕ್ಕೆ ಒಳಗಾಗಿದ್ದ ಬನುಮಯ್ಯನವರು ಜನಹಿತಕ್ಕಾಗಿ ಖರ್ಚು ಮಾಡಲಾರಂಭಿಸಿದರು. ಸಮಾಜದಿಂದ ಬಂದದ್ದು ಸಮಾಜಕ್ಕೆ ಸಲ್ಲಬೇಕು ಎನ್ನುವ ಅವರ ಧ್ಯೇಯ ಅನೇಕ ದಾನಗಳನ್ನು ಮಾಡುವಂತೆ ಪ್ರೇರೇಪಿಸಿತು. ಮೈಸೂರು ಮಾತ್ರವಲ್ಲದೆ, ಬೆಂಗಳೂರು, ಮದ್ರಾಸ್, ಕೋಲಾರ, ನಂಜನಗೂಡು ಮುಂತಾದ ಕಡೆಗಳಿಗೂ ಅವರ ದಾನಗಳು ವಿಸ್ತರಿಸಿದವು.

ಮೈಸೂರಿನ ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂನಲ್ಲಿ ತಮ್ಮ ಮತ್ತು ಪತ್ನಿಯ ಹೆಸರಿನಲ್ಲಿ ವಾರ್ಡುಗಳ ನಿರ್ಮಾಣ, ಚಾಮುಂಡಿಬೆಟ್ಟದ ಪಾದದ ಬಳಿ ಗುಪ್ತಗಂಗಾ ಸರೋವರದ ಧರ್ಮ ಮತ್ತು ಅದಕ್ಕೆ ಸೇರಿದ ಕಟ್ಟಡ ಹಾಗೂ ತಾವರೆಕಟ್ಟೆ ಕೊಳ, ಶ್ರೀಮನ್ಮಹಾರಾಜ ಸಂಸ್ಕೃತ ಪಾಠಶಾಲೆಗೆ ಹೆಗ್ಗಡದೇವನಕೋಟೆ ಹಂಪಾಪುರದ ಹೋಬಳಿ ಕರಿಗಳ ಗ್ರಾಮದಲ್ಲಿದ್ದ 17 ಎಕರೆ ಜಮೀನು ದಾನ, ಆಸ್ಥಾನ ವಿದ್ವಾನ್ ಮೈಸೂರು ಕೆ.ವಾಸುದೇವಾಚಾರ್ಯರಿಗೆ ಸಂತೇಪೇಟೆ ವರ್ತಕರ ಸಹಕಾರದಿಂದ ಹಣ ಸಂಗ್ರಹಿಸಿ ಮನೆ ಕಟ್ಟಿಕೊಟ್ಟದ್ದು, ಒಂಟಿಕೊಪ್ಪಲು ಶ್ರೀರಾಮಕೃಷ್ಣಾಶ್ರಮದ ಗರ್ಭಾಂಕಣಕ್ಕೆ ದಾನ ಇತ್ಯಾದಿ ದಾನ ಕಾರ್ಯಗಳನ್ನು ಮಾಡಿದರು.

ಜೊತೆಗೆ ಕಿವುಡು ಮೂಗರ ಶಾಲೆ, ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ರಜತ ಮಹೋತ್ಸವ ನಿಧಿ, ಮೈಸೂರು ಕುಂಚಿಟಿಗರ ಸಂಘದ ದೊಡ್ಡಯ್ಯ ಹಾಸ್ಟೆಲ್ ನಿಧಿ, ಆಯುರ್ವೇದ ಮತ್ತು ಯುನಾನಿ ಕಾಲೇಜು ಕಟ್ಟಡ, ನಗರಸಭೆಯ ಆದಿಕರ್ನಾಟಕಪುರದಲ್ಲಿ ನಿಮ್ನ ವರ್ಗದ ಮಕ್ಕಳಿಗೆ ಹಾಲು ಹಂಚಲು ಶ್ರೀಮಲ್ಲಮ್ಮ ಹಾಲು ಕೇಂದ್ರ, ನಗರ ಸಭೆಯ ಜಟಕಾ ಸ್ಟಾಂಡುಗಳು, ದನಗಳಿಗೆ ನೀರಿನ ತೊಟ್ಟಿಗಳ ನಿರ್ಮಾಣ, ಸಂತೇಪೇಟೆಯಲ್ಲಿನ ವಾಸದ ಮನೆ ಮುಂದೆ ಬೇಸಿಗೆಯಲ್ಲಿ ನೀರು ಮಜ್ಜಿಗೆ ಕೊಡಲು ಅರವಟ್ಟಿಗೆ ಗಳು, ಮೈಸೂರಿನ ಎಂಟು ಟೋಲ್‌ಗೇಟುಗಳಲ್ಲಿ 25 ತೊಟ್ಟಿ ಮತ್ತು ನಲ್ಲಿಗಳನ್ನು ಜೋಡಿಸಿ ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ಮೈಸೂರಿನಲ್ಲಿ ಪಶುವೈದ್ಯ ಶಾಲೆಗಳ ನಿರ್ಮಾಣ, ಮೈಸೂರು ಪಿಂಜ್ರಾಪೋಲ್ ಸ್ಥಾಪನೆ ಇವುಗಳಿಗೆ ಬನುಮಯ್ಯನವರು ಧನಸಹಾಯ ಮಾಡಿದರು.

ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಹಿಂದೆ ಕಟ್ಟಿಸಿರುವ ಛತ್ರದ ಕಟ್ಟಡ ನಿಧಿ, ನಂದಿಬೆಟ್ಟದ ತಪ್ಪಲಿನಲ್ಲಿ ಆಯುರ್ವೇದ ಆಸ್ಪತ್ರೆ, ಮರಹಳ್ಳಿ ಸಂತೆಯಲ್ಲಿ ನೀರಿನ ಟ್ಯಾಂಕ್, ವಿದುರಾಶ್ವತ್ಥದ ದತ್ತಾತ್ರೇಯ ಆಶ್ರಮದ ಕೈಸಾಲೆಗೆ, ತುಮಕೂರು ಕೆರೆಯ ಬಳಿ ಕಲ್ಲು ಬೆಂಚುಗಳು, ಬೆಂಗಳೂರು ವಿಶ್ವೇಶ್ವರಪುರದಲ್ಲಿನ ಆರ್ಯ ಸಮಾಜ ಹಾಗೂ ಅಶಕ್ತ ಪೋಷಕರ ಸಭೆ, ಒಕ್ಕಲಿಗರ ಸಂಘ, ತಾಯಿನಾಡು ಪತ್ರಿಕೆ, ಮದ್ರಾಸ್ ಸ್ವರಾಜ್ಯ ಮುದ್ರಣಾಲಯ, ಕೋಲಾರ ಜಿಲ್ಲೆ ಶ್ರೀನಿವಾಸಪುರದ ಶಂಕರ ಮಠದ ಪೂಜೆಗಾಗಿ ಮುಜರಾಯಿ ನಿಧಿ ಇವುಗಳಿಗೂ ಧನ ಸಹಾಯ ಮಾಡಿದರು. 1916ರಲ್ಲಿ ಮಹಾರಾಜರು ಬನುಮಯ್ಯನವರಿಗೆ 'ಧರ್ಮಪ್ರಕಾಶ' ಬಿರುದನ್ನಿತ್ತು ಗೌರವಿಸಿದರು. 1932ರಲ್ಲಿ ಭಾರತ ಸರ್ಕಾರ ಇವರಿಗೆ 'ರಾವ್ ಬಹದ್ದೂರು' ಪ್ರಶಸ್ತಿ ನೀಡಿ ಸನ್ಮಾನಿಸಿತು.

ಗಾಂಧೀಜಿ ಅವರಿಂದ ಪ್ರಭಾವಿತರಾಗಿದ್ದ ಬನುಮಯ್ಯನವರು ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದರು. 1927ರಲ್ಲಿ ಗಾಂಧೀಜಿ ಖಾದಿ ಪ್ರಚಾರಕ್ಕೆ ಮೈಸೂರಿಗೆ ಬಂದಾಗ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಅವರ ಚಳವಳಿಗೆ ಬೆಂಬಲ, ಧನಸಹಾಯ ಮಾಡಿದರು. ತಗಡೂರು ಖಾದಿ ಸಂಸ್ಥೆ, ಮಹಾತ್ಮ ಗಾಂಧಿ ಅವರ ದತ್ತಿ, ಕಾಂಗ್ರೆಸ್ ನಿಧಿಗಳಿಗೆ ಕಾಣಿಕೆ ಕೊಟ್ಟರು.

ಗಾಂಧೀಜಿ ಬನುಮಯ್ಯ ಶಾಲೆಗೂ ಭೇಟಿ ನೀಡಿ ಭಾಷಣ ಮಾಡಿದರು. ಇದರ ಸಂಕೇತವಾಗಿ ಖಾದಿಧಾರಿಗಳಾಗಿದ್ದ ಬನುಮಯ್ಯನವರು ಶಾಲೆಯ ಪಕ್ಕದ ಜಾಗದಲ್ಲಿ ಚರಕಾ ಸಂಘ ಸ್ಥಾಪಿಸಿ ನೂತ ನೂಲನ್ನು ಉಚಿತವಾಗಿ ಕೊಡುತ್ತಿದ್ದರು. ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯದ ಪರವಾಗಿದ್ದರು. ಇದಕ್ಕಾಗಿ ನಾಲ್ವಡಿ ಕೃಷ್ಣರಾಜ ಒಡೆಯರು ರಚಿಸಿದ ಮಿಲ್ಲರ್ ಸಮಿತಿಯ ಸದಸ್ಯರಾಗಿದ್ದರು. 1932ರಲ್ಲಿ ಬನುಮಯ್ಯನವರು ಕಾಲವಾದ ನಂತರ ಅವರ ಪುತ್ರ ಡಿ.ಬಿ.ವಿಶ್ವಂಭರಯ್ಯನವರು ಬನುಮಯ್ಯ ಶಾಲೆಯ ಕಾರ್ಯದರ್ಶಿ, ಅಧ್ಯಕ್ಷರಾಗಿದ್ದರು. ಅವರ ಮೊಮ್ಮಗ ಡಿ.ಬಿ.ವಿಶ್ವಂಭರಯ್ಯನವರ ಪುತ್ರ ಬಿ.ವಿ.ಬನುಮಯ್ಯನವರು ಕಾಮರ್ಸ್ ಮತ್ತು ಆರ್ಟ್ಸ್ ಕಾಲೇಜು ಪ್ರಾರಂಭಿಸಿ 25 ವರ್ಷಗಳು ಅದರ ಪ್ರಿನ್ಸಿಪಾಲ್ ಆಗಿದ್ದರು. ಅರಮನೆಗೆ ಸೇರಿದ್ದ ಮೋತೀಖಾನೆ ಕಟ್ಟಡವನ್ನು ಕೊಂಡು ಸಂಸ್ಥೆಯನ್ನು ಇನ್ನಷ್ಟು ಬೆಳೆಸಿ ಕೀರ್ತಿ ಗಳಿಸಿದರು. **(ಮುಗಿಯಿತು)**

ಸ್ವಾಮಿ ವಿವೇಕಾನಂದರ ಪಥದಲ್ಲಿ...



ನಾದಲಹರಿ

ಡಾ.ರಮಾ ವಿ. ಬೆಣ್ಣೂರ್

ಸಂಗೀತ ವಿಮರ್ಶಕರು

ಮೊ: 99452 82346

ಕೆಲವೇ ಪದಗಳಲ್ಲಿ ನನ್ನ ಗುರಿಯನ್ನು ಹೇಳುವುದಾದರೆ, ಇಡೀ ಮಾನವಕುಲಕ್ಕೆ, ತಮ್ಮಲ್ಲಿಯೇ ಅಡಗಿರುವ ದೈವತ್ವ ಅಥವಾ ದಿವ್ಯತೆಯ ಇರುವನ್ನು ಬದುಕಿನ ಪ್ರತೀ ಆಗುಹೋಗುಗಳಲ್ಲಿ ಸ್ಪಷ್ಟವಾಗಿ ಗೋಚರಿಸುವಂತೆ ಮಾಡುವುದು.


ನನ್ನ ಉದಾತ್ತ ರಾಜಕುಮಾರರೇ, ಈ ಜಗತ್ತಿನ ಒಣ ಪ್ರತಿಷ್ಠೆಗಳೆಲ್ಲವೂ ನಶ್ವರ. ಇತರರಿಗಾಗಿ ಬದುಕುವವರು ಮಾತ್ರ ಉಳಿಯುತ್ತಾರೆ. ಉಳಿದವರೆಲ್ಲ ಬದುಕಿಯೂ ಸತ್ತಂತೆ ಇರುತ್ತಾರೆ.

ಶಿಕ್ಷಣ ಎನ್ನುವುದು ನಿಮ್ಮ ತಲೆಯಲ್ಲಿ ಸಾಧ್ಯವಾದಷ್ಟು ಮಾಹಿತಿಗಳನ್ನು ತುಂಬಿ, ಅದು ನಿಮ್ಮ ತಲೆಯಲ್ಲಿ ಗೊಂದಲವೆಬ್ಬಿಸಿ, ಬದುಕಿನುದ್ದಕ್ಕೂ ಜೀರ್ಣವಾಗದೆ ಉಳಿಯುವುದು ಅಲ್ಲ. ಬದುಕನ್ನು ಕಟ್ಟಿಕೊಡುವಂತಹ, ಮಾನವ ನಿರ್ಮಾಣ ಮಾಡಬಲ್ಲಂತಹ, ವ್ಯಕ್ತಿತ್ವವನ್ನು ವಿಕಸನಗೊಳಿಸಬಲ್ಲಂತಹ ವಿಚಾರಗಳು ನಿಮ್ಮಲ್ಲಿ ಅಂತರ್ಗತವಾಗುವ ಹಾಗೆ, ರಕ್ತಗತವಾಗುವಂತೆ ಮಾಡಬೇಕು ಶಿಕ್ಷಣ. ಪ್ರತಿಯೊಂದು ಆತ್ಮನೂ ಸಾಮರ್ಥ್ಯವುಳ್ಳ ಪರಿಶುದ್ಧನೇ. ಈ ಪರಿಶುದ್ಧತೆಯನ್ನು, ಪಾವಿತ್ರ್ಯತೆಯನ್ನು ಒಳ–ಹೊರಗಿನ ಪ್ರಕೃತಿಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದರ ಮೂಲಕ ಅದನ್ನು ಸ್ಪಷ್ಟವಾಗಿಸುವುದೇ ಗುರಿ. ಇದನ್ನು ಕಾರ್ಯದಿಂದ, ಪೂಜೆಯಿಂದ, ಮಾನಸಿಕ ಶಿಸ್ತಿನಿಂದ ಅಥವಾ ಆಧ್ಯಾತ್ಮದಿಂದ ಇವುಗಳಲ್ಲಿ ಒಂದು ಅಥವಾ ಹೆಚ್ಚು ಅಥವಾ ಎಲ್ಲದರಿಂದಲೂ ಸಾಧಿಸಿ ಬಿಡುಗಡೆಯನ್ನು ಹೊಂದಿ ಎಂದು ಜಗತ್ತಿಗೆ ಸಾರಿದವರು ವಿಶ್ವದ ಏಕೈಕ ಸ್ವಾಮಿ ವಿವೇಕಾನಂದರು.

ದೇಶದ ಯುವಕರು ಜಾಗ್ರತರಾದರೆ, ದೇಶವೇ ಜಾಗ್ರತಗೊಂಡಂತೆ. ಇಂದು ನಮ್ಮ ಭಾರತದ ಶಿಕ್ಷಣ ಕ್ಷೇತ್ರವನ್ನು ಅವಲೋಕಿಸಿದಾಗ, ನಾವು, ನಮ್ಮ ಯುವಶಕ್ತಿಯನ್ನು ಯಾವ ದಿಕ್ಕಿಗೆ ಕರೆದೊಯ್ಯುತ್ತಿದ್ದೇವೆ ಎಂದು ಗಾಬರಿ ಆಗದಿರದು. ಅವರ ವ್ಯಕ್ತಿತ್ವವನ್ನು ಬೆಳೆಸುವಂತಹ, ವಿಚಾರ ಶಕ್ತಿಯನ್ನು ಹೆಚ್ಚಿಸುವಂತಹ, ಭಾರತೀಯ ಮೌಲ್ಯಗಳನ್ನು ಪರಿಚಯಿಸುವಂತಹ ಶಿಕ್ಷಣವನ್ನು ನಾವು ನೀಡುತ್ತಿದ್ದೇವೆಯೇ? ಹಣ ಗಳಿಸುವ ಮೆಷಿನ್ನುಗಳನ್ನು ತಯಾರಿಸುತ್ತಿದ್ದೇವೆಯೇ? ಶಾಲಾ ಕಾಲೇಜುಗಳ ಸಿಲಬಸ್ಸಿನಲ್ಲಿ ಇರುವ ಪಠ್ಯಗಳು ನಿಜಕ್ಕೂ ಅವರ ಬದುಕನ್ನು ಕಟ್ಟಿಕೊಳ್ಳಲು, ದೇಶಕ್ಕೆ ಹೆಮ್ಮೆ ಎನ್ನಿಸುವಂತಹ ಯುವ ಜನಾಂಗವನ್ನು ತಯಾರು ಮಾಡುವಂತಹುದು ಆಗಿದೆಯೇ? ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಕೇಳಲು ಬಲು ಸುಂದರ.

1892ರ ನವಂಬರ್ ತಿಂಗಳಲ್ಲಿ ಕೇವಲ ಒಂದು ದಂಡ–ಕಮಂಡಲವನ್ನು ಹಿಡಿದ ಸನ್ಯಾಸಿ ಒಬ್ಬರು ಸಾವಿರಾರು ಪರಿವ್ರಾಜಕರಲ್ಲಿ ಒಬ್ಬರಾಗಿ ದೇಶದ ಉದ್ದಗಲಕ್ಕೂ ಸಂಚರಿಸುತ್ತಾ ಮೈಸೂರಿಗೂ ಬಂದರು. ಇಡೀ ವಿಶ್ವವೇ ನಿಬ್ಬೆರಗಾಗಿ ನೋಡಲಿದ್ದ ಮಹಾನ್ ಸನ್ಯಾಸಿ ಸ್ವಾಮಿ ವಿವೇಕಾನಂದರೇ ಅವರು ಎಂಬುದು ಇನ್ನೂ ಪ್ರಕಟವಾಗಿರಲಿಲ್ಲ. ಭಾರತವು ಹಸಿವಿನಿಂದ, ಅಜ್ಞಾನದಿಂದ ಬಳಲುತ್ತಿದ್ದಾಗ, ವಿದೇಶೀಯರ ಆಕ್ರಮಣಗಳಿಂದ ನಲುಗಿ, ನಮ್ಮ ಅಂತಃಸತ್ವವನ್ನು ಮರೆತೇಬಿಟ್ಟಿದ್ದಾಗ, ಅಂಧಕಾರವನ್ನು ಹೊಡೆದೋಡಿಸುವ ಪ್ರಖರವಾದ ಸೂರ್ಯನಂತೆ ಸ್ವಾಮಿ ವಿವೇಕಾನಂದರ ಆಗಮನ ಆಯಿತು. ಭಾರತದ ಉದ್ದಗಲಕ್ಕೂ ಸಂಚರಿಸಿದ ಅವರ ಮನ ತಮ್ಮ ದೇಶಕ್ಕಾಗಿ, ಅದರ ಜನತೆಗಾಗಿ ಮಿಡಿಯಿತು. ಭಾರತಕ್ಕೆ ಒದಗಿದ ಈ ದುರ್ದೆಸೆಯನ್ನು ಹೋಗಲಾಡಿಸುವುದು ಹೇಗೆಂದು ಹಗಲಿರುಳೂ ಚಿಂತಿಸಿದ ಅವರು, ಅದರ ಪರಿಹಾರದ ಚಿತ್ರವನ್ನು ಸ್ಪಷ್ಟವಾಗಿ ಮನಗಂಡಿದ್ದರು.

ಮೈಸೂರಿನಲ್ಲಿ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ಇದ್ದ ನಿರಂಜನ ಮಠದಲ್ಲಿ ಅವರ ವಾಸ್ತವ್ಯ. ಆ ಪವಿತ್ರ ಸ್ಥಳದಲ್ಲಿಯೇ ಇಂದು ಸ್ವಾಮಿ ವಿವೇಕಾನಂದ ಕಲ್ಚರಲ್ ಯೂಥ್ ಸೆಂಟರ್–ವಿವೇಕ ಸ್ಮಾರಕವು ತಲೆ ಎತ್ತಿದೆ. ಅವರ ಆದರ್ಶಗಳನ್ನು ಉಸಿರಾಡುತ್ತಿರುವ, ಬದುಕುತ್ತಿರುವ ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಹೊಂಗನಸು ಅದು. ಇದು ಕೇವಲ ಒಂದು ಐತಿಹಾಸಿಕ ಘಟನೆಯನ್ನು ನೆನಪಿಸಲು ನಿರ್ಮಾಣ ಆದುದ್ದಲ್ಲ. ಸ್ವಾಮಿ ವಿವೇಕಾನಂದರು ನಿರ್ಮಿಸ ಬಯಸಿದ ವ್ಯಕ್ತಿಗಳನ್ನು ದೇಶಕ್ಕೆ ನೀಡಲು, ಸನ್ನದ್ಧವಾಗಿರುವ ಕೇಂದ್ರ



ಇದು. ಉರಿಯುತ್ತಿರುವ ಜ್ವಾಲೆಯನ್ನು ತನ್ನಲ್ಲಿ ಅಡಗಿಸಿಕೊಂಡಿರುವ ಶಕ್ತಿ ಕೇಂದ್ರ.

ಸ್ವಾಮಿ ವಿವೇಕಾನಂದರಿಗೆ, ಶಿಕ್ಷಣ ವ್ಯವಸ್ಥೆ ಎಂಬುದು ಕೇವಲ ಮಾಹಿತಿಗಳ ಭಂಡಾರವಾಗಿ, ಪ್ರಮಾಣ ಪತ್ರಗಳ ನಿರ್ಮಾತೃವಾಗಿ, ಹಣ ಗಳಿಸುವ ಯಂತ್ರವಾಗಿ ಮನುಷ್ಯರನ್ನು ಪರಿವರ್ತಿಸುವುದಾಗಿರದೆ, ಮನುಷ್ಯರಲ್ಲಿ ಈಗಾಗಲೇ ಇರುವ ಅಂತಃಸತ್ವವನ್ನು ಉದ್ದೀಪಿಸಿ, ಅದನ್ನು ಸ್ಪಷ್ಟವಾಗಿ ಗೋಚರಿಸುವಂತೆ ಮಾಡುವುದೇ ಆಗಿದೆ. ವೇದಾಂತವು ಹೇಳುವಂತೆ ಪ್ರತಿಯೊಬ್ಬರಲ್ಲೂ ಪಶುತ್ವ, ಮಾನವತ್ವ ಮತ್ತು ದೈವತ್ವ ಎಂಬ ಮೂರು ಮಗ್ಗುಲುಗಳು ಇರುತ್ತವೆ ಎಂಬುದನ್ನು ಸ್ವಾಮೀಜಿಯವರು ಗಮನಿಸಿದ್ದಾರೆ. ಶಿಕ್ಷಣವು ಕೇವಲ ಪಶುವನ್ನೇ ತರಬೇತಿಗೊಳಿಸಿದರೆ, ಹೊಟ್ಟೆ ಹೊರೆಯುವುದು–ಬದುಕುವ ಚಾತುರ್ಯ–ಮತ್ತೊಬ್ಬರನ್ನು ಕೊಂದು ತಿನ್ನುವ ಉತ್ತಮ ಪ್ರಾಣಿಯನ್ನು ನಿರ್ಮಿಸಬಹುದು. ಮಾನವತ್ವವನ್ನು ಗುರಿಯಾಗಿಸಿಕೊಂಡಲ್ಲಿ, ಪ್ರಜ್ಞಾವಂತ–ಪೌರತ್ವ ಸಾಮರ್ಥ್ಯ–ವೃತ್ತಿಪರ ಕೌಶಲ್ಯವುಳ್ಳ –ಆದರೆ ಅಪೂರ್ಣ ವ್ಯಕ್ತಿಯನ್ನು ನಿರ್ಮಾಣ ಮಾಡಬಹುದು. ಯಾವ ಶಿಕ್ಷಣವು ಮನುಷ್ಯನಲ್ಲಿ ಅಂತರ್ಗತವಾಗಿರುವ ದೈವತ್ವವನ್ನು ಉದ್ದೀಪಿಸುತ್ತದೆಯೋ ಅದು–ಅವನೊಳಗಿನ ಅಸೀಮ ಸಹಜ ಧರ್ಮ–ಪರಿಣಾಮವಾಗಿ ಉಂಟಾಗುವ ಮಾನವ ಸೇವಾ ಮನೋಭಾವವುಳ್ಳ ಸಂಪೂರ್ಣ ನೈಜ ಮಾನವನನ್ನು ತಯಾರು ಮಾಡಬಲ್ಲದು. ಅವರು ಬಯಸಿದ ಮಾನವ ನಿರ್ಮಾಣ ಎಂದರೆ ಇದೇ. ಇದರಲ್ಲಿ ಲಿಂಗಭೇದವಿಲ್ಲ. ತಮ್ಮ ಕಾಲದ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ದೊಡ್ಡ ದನಿ ಎತ್ತಿದವರು ಅವರು. ಎಲ್ಲ ಮಾನವರಿಗಾಗಿ ಸಂಪೂರ್ಣ ಮನುಷ್ಯ, ಸಂಪೂರ್ಣ ಜಾಗ್ರತ, ದಿವ್ಯತೆಯನುಳ್ಳ, ಅವರು ಮೈಸೂರು ಮಹಾರಾಜರಿಗೆ ಬರೆದಂತೆ ತಮಗಾಗಿ ಅಲ್ಲ, ಇತರರಿಗಾಗಿ ಬದುಕುವ ಮನುಷ್ಯರ ನಿರ್ಮಾಣ.

ಸ್ವಾಮಿ ವಿವೇಕಾನಂದರು ಮಾನವನ ಮಾನಸಿಕ ಬೆಳವಣಿಗೆಗಾಗಿ ಭಾರತದ ಪ್ರಾಚೀನ ನಾಕು ಯೋಗ ಪದ್ಧತಿಗಳನ್ನು ಅಡಕಗೊಳಿಸಿ ಸಂಯೋಜಿಸಿದ್ದರು. ರಾಜಯೋಗ, ಜ್ಞಾನಯೋಗ, ಕರ್ಮಯೋಗ ಮತ್ತು ಭಕ್ತಿ ಯೋಗಗಳು ಒಂದೊಂದೂ ಜ್ಞಾನವನ್ನು ಪಡೆವ ಮಾರ್ಗಗಳು. ಈ ನಾಲ್ಕೂ ಒಟ್ಟಾಗಿ ಸೇರಿದಲ್ಲಿ, ಸಂಪೂರ್ಣ ಮಾನವನ ಮೂಲಭೂತ ನಾಕು ಗುಣಧರ್ಮವನ್ನು ವಿವರಿಸುತ್ತವೆ. ಇದನ್ನೇ ವಿವೇಕ ಸ್ಮಾರಕವು ಅಳವಡಿಸಿಕೊಂಡಿದೆ. ಅದರ ವ್ಯಾಸಂಗ ಪಥದಲ್ಲಿ ಮೊದಲನೆಯದಾಗಿ ರಾಜಯೋಗವನ್ನು ಅಳವಡಿಸಿಕೊಂಡಿದೆ. ರಾಜಯೋಗ– ಎಲ್ಲ ಬೆಳವಣಿಗೆಗೂ ಮೂಲವಾದ ಮನಸ್ಸನ್ನು ಗೆಲ್ಲುವುದು–ಅಂದರೆ ಚಿತ್ತಶುದ್ಧಿ– ಮೊದಲ ಹಂತದಲ್ಲಿ ಇದಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ.

ಕ್ರಮೇಣ ಭಾವನಾತ್ಮಕ ಸ್ಥಿರತೆ, ಏಕಾಗ್ರತೆ, ಮಾನಸಿಕ ದೃಢತೆ, ಒತ್ತಡದಿಂದ ಮತ್ತು ಭ್ರಮೆಗಳಿಂದ ಬಿಡುಗಡೆ, ಧೈರ್ಯ, ಸತ್ಯವನ್ನರಿವ ಕ್ಷಮತೆ, ನಿಸ್ವಾರ್ಥ ಸೇವಾ ಮನೋಭಾವ ಇತ್ಯಾದಿ ಅನೇಕ ಪರಿಣಾಮಗಳನ್ನು ಪಡೆಯಬಹುದು. ನಾಕು ಹಂತಗಳಲ್ಲಿ ನಡೆಸಲಾಗುವ ಈ ಕಾರ್ಯಕ್ರಮವು ಮೂವತ್ತು ವರುಷದ ಒಳಗಿನ ಯುವಕ ಯುವತಿಯರಿಗಾಗಿ ಸಿದ್ಧಗೊಳಿಸಲ್ಪಟ್ಟಿದೆ. ಇದರ ಪ್ರಯೋಜನ ಪಡೆದವರು ನಿಜವಾದ ಅರ್ಥದಲ್ಲಿ ಸಂಪೂರ್ಣ ಮಾನವರಾಗಿ, ಸೇವಾ ಮನೋಭಾವವನ್ನು ಒಳಗೊಂಡು, ಅತ್ಯುತ್ತಮ ಪ್ರಜೆಗಳಾಗಿ ಹೊರಹೊಮ್ಮುವುದರಲ್ಲಿ ಸಂಶಯವೇ ಇಲ್ಲ. ವಿವೇಕಾನಂದರು ಬಯಸಿದಂತಹ, ವೇದಾಂತದ ಒಳತಿರುಳಿನ ಆಧಾರದ ಮೇಲೆ ರಚಿತವಾಗಿರುವ ಈ ವಿಚಾರ–ವೇದಿಕೆಯ ಪ್ರತಿಯೊಂದು ಹಂತವೂ ಯುವ ಪೀಳಿಗೆಯನ್ನು ವಿಚಾರವಂತರನ್ನಾಗಿ ಮಾಡಲು ಪ್ರೇರೇಪಿಸುವಂತೆ ಇರುತ್ತದೆ.

ಇಂತಹ ದಿವ್ಯವಾದ ಭವ್ಯವಾದ ಉದ್ದೇಶದಿಂದ ಸ್ವಾಮಿ ವಿವೇಕಾನಂದ ಕಲ್ಚರಲ್ ಯೂಥ್ ಸೆಂಟರಿನ ವಿವೇಕ ಸ್ಮಾರಕದಲ್ಲಿ ಆರಂಭಗೊಳ್ಳಲಿರುವ ಈ ಶಿಕ್ಷಣ ಕಾರ್ಯಕ್ರಮವು ಇದೇ ಜೂನ್ ತಿಂಗಳ ಕೊನೆಯಲ್ಲಿ ಆರಂಭಗೊಳ್ಳಲಿದೆ. ಇದರ ಪ್ರಯೋಜನವನ್ನು ಸಮಸ್ತ ಯುವ ಜನತೆ ಪಡೆದದ್ದೇ ಆದರೆ, ಭಾರತವು ಊಹಿಸಿಕೊಳ್ಳಲೂ ಆಗದ ಬದಲಾವಣೆಯನ್ನು ಕಾಣುತ್ತದೆ. ಅಷ್ಟೇ ಅಲ್ಲ, ತಮ್ಮ ಮಗ\ಮಗಳು ಸರಿಯಾದ ಪಥದಲ್ಲಿ ಹೆಜ್ಜೆ ಇಡುತ್ತಿದ್ದಾರೆ ಎಂಬ ಸಂತೃಪ್ತಿಯನ್ನು ತಂದೆ ತಾಯಿಗಳೂ ಹೊಂದುತ್ತಾರೆ. ಎಲ್ಲಕ್ಕಿಂತ ಮಿಗಿಲಾಗಿ ದೇಶದ ಒಳಿತಿಗೆ, ಮಾನವ ಕುಲದ ಒಳಿತಿಗೆ ಇಂತಹ ಚಿಂತನಪರವಾದ ಹೆಜ್ಜೆಗಳ ಅವಶ್ಯಕತೆ ಎಂದಿಗಿಂತಲೂ ಇಂದು ಹೆಚ್ಚು ಇದೆ. ಬನ್ನಿ, ನಾವೆಲ್ಲರೂ ಈ ಸತ್ಕಾರ್ಯಕ್ಕೆ ಕೈಜೋಡಿಸೋಣ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಚಾಮುಂಡಿಬೆಟ್ಟದ ದೇವಸ್ಥಾನ ಪ್ರವೇಶ ಶುಲ್ಕ ಹೆಚ್ಚಳ ಪ್ರಸ್ತಾಪಕ್ಕೆ ವಿರೋಧ



ಚಾಮುಂಡಿ ಬೆಟ್ಟದಲ್ಲಿ ವಿಶೇಷ ದರ್ಶನದ ಟಿಕೆಟ್ ದರ ಹೆಚ್ಚಳ ಮಾಡದಂತೆ ಆಗ್ರಹಿಸಿ ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಜೂ.6(ಎಂಟಿವೈ)– ಚಾಮುಂಡಿಬೆಟ್ಟದಲ್ಲಿ ವಿಶೇಷ ದರ್ಶನದ ಟಿಕೆಟ್ ದರ ಏರಿಕೆ ಮಾಡದಂತೆ ಆಗ್ರಹಿಸಿ ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿ, ವಿಶೇಷ ದರ್ಶನಕ್ಕಾಗಿ ದೇವಾಲಯ ಪ್ರವೇಶಿಸಲು ಈ ಹಿಂದಿನಿಂದಲೂ ವಿತರಿಸಲಾಗುತ್ತಿರುವ ಟಿಕೆಟ್ ದರ ಹೆಚ್ಚಳ ಮಾಡಬಾರದು. ಕೆಲವರು ವಿಶೇಷ ದರ್ಶನದ ಟಿಕೆಟ್ ಅನ್ನು ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಲಭ್ಯವಾಗಿದೆ. ಈ ಹಿನ್ನೆಲೆಯಲ್ಲಿ ಟಿಕೆಟ್ ಕಾಳಸಂತೆಯಲ್ಲಿ ಮಾರಾಟವಾಗದಂತೆ ಕಟ್ಟೆಚ್ಚರ ವಹಿಸಬೇಕು. ಒಮ್ಮೆ ವಿತರಿಸಿದ ಟಿಕೆಟ್ ಮರು ಬಳಕೆಯಾಗದಂತೆ ನೋಡಿಕೊಳ್ಳಬೇಕು ಎಂದು ಆಗ್ರಹಿಸಿದರು.

ಈಗಾಗಲೇ ಚಾಮುಂಡಿಬೆಟ್ಟದಲ್ಲಿ ಪ್ರಸಾದ ವಿತರಣೆ, ವಾಹನ ನಿಲುಗಡೆ, ಪಾದರಕ್ಷೆಗಳ ಸ್ಟ್ಯಾಂಡ್ ಬಗ್ಗೆ ಹಲವು ದೂರು ಬಂದಿವೆ. ಅದರ ಬಗ್ಗೆ ಹೆಚ್ಚು ಗಮನಹರಿಸಬೇಕು. ದೇವಾಲಯಕ್ಕೆ ಭೇಟಿ ನೀಡುವ ಭಕ್ತರಿಗೆ ಏಕರೂಪದ ವ್ಯವಸ್ಥೆ ಮಾಡಬೇಕು. ಗಣ್ಯರು, ಉಳ್ಳವರು, ಬಡವರು ಎಂಬ ಭೇದ ಮಾಡದೆ ಉಚಿತ ದರ್ಶನದ ಸಾಲಿನಲ್ಲಿಯೇ ಬರುವಂತೆ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಗುರುಬಸಪ್ಪ, ಬೋಗಾದಿ ಸಿದ್ದೇಗೌಡ, ಪ್ಯಾಲೇಸ್ ಬಾಬು, ಗೋಪಿ, ಎಲ್ಐಸಿ ಸಿದ್ದಪ್ಪ, ಹೊಣಕೆರೆ ಸ್ವಾಮಿ, ಗೋವಿಂದರಾಜು, ಮನೋಹರ್, ಕಾವೇರಮ್ಮ, ಬೀಡಾ ಬಾಬು, ಚಾಮರಾಜು ಮಂಡಕಳ್ಳಿ, ಮಾದಪ್ಪ, ಸ್ವಾಮಿಗೈಡ್, ಶಿವೇಗೌಡ, ಚಿಣ್ಣಪ್ಪ, ಸುನೀಲ್, ನಟರಾಜು, ಶಿವಕುಮಾರ್, ರಮೇಶ್ ಪಾಲ್ಗೊಂಡಿದ್ದರು.



ಕಾಂಗ್ರೆಸ್‌ಗೆ ನೇಮಕ

ಮೈಸೂರು,ಜೂ.6–ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್‌ನ ಇಂದಿರಾಗಾಂಧಿ ಬ್ಲಾಕ್‌ನ ಉಪಾಧ್ಯಕ್ಷರನ್ನಾಗಿ ಶ್ರೀಮತಿ ಲಕ್ಷ್ಮೀ.ಎಂ ಅವರನ್ನು ನೇಮಕ ಮಾಡಲಾಗಿದೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ ಸಭೆಯಲ್ಲಿ 140 ಖಾಸಗಿ ಬಡಾವಣೆ ನಕ್ಷೆ ಅನುಮೋದನೆ; 131 ಕೋಟಿಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯ

ಎಂಡಿಎಗಂತೂ ಬಡಾವಣೆ ನಿರ್ಮಾಣ ಮಾಡುವ ಪ್ರಯತ್ನ ಸದ್ಯಕ್ಕಿಲ್ಲ!?; ಖಾಸಗಿ ಬಡಾವಣೆ ಅಭಿವೃದ್ಧಿಗೆ ಅನುಕೂಲ ಮಾಡಿಕೊಡುವುದರಲ್ಲಿ ದಾರಾಳತನ!

ಮೈಸೂರು,ಜೂ.6(ಎಂಟಿವೈ)–ಮೈಸೂರು ಅಭಿವೃದ್ಧಿ ಪ್ರಾಧಿಕಾರವು 140 ಖಾಸಗಿ ಬಡಾವಣೆ ನಿರ್ಮಾಣಕ್ಕೆ ವಿನ್ಯಾಸ ನಕ್ಷೆ ಅನುಮೋದನೆ ಹಾಗೂ 131 ಕೋಟಿ ಅಂದಾಜು ವೆಚ್ಚದಲ್ಲಿ ವಿವಿಧ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗೆ ಅನುಮೋದನೆ ನೀಡಿದೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ)ದ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾಧಿಕಾರಿಗಳೂ ಆದ ಎಂಡಿಎ ಅಧ್ಯಕ್ಷ ಜಿ.ಲಕ್ಷ್ಮೀಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಪ್ರಾಧಿಕಾರದ ಸಭೆಯಲ್ಲಿ ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್, ಖಾಸಗಿ ಬಡಾವಣೆಗಳ ನಕ್ಷೆ, ಹೊಸ ಬಡಾವಣೆಗಳ ಅಭಿವೃದ್ಧಿ ಕಾಮಗಾರಿ ಸೇರಿದಂತೆ ವಿವಿಧ ವಿಷಯಗಳನ್ನು ಪ್ರಸ್ತಾಪಿಸಿದರು. ಬಳಿಕ ಎಂಡಿಎ ಪ್ರಸ್ತಾಪಿಸಿದ ವಿಷಯಗಳಿಗೆ ಸರ್ವಾನುಮತದ ಒಪ್ಪಿಗೆ ದೊರೆತ ಹಿನ್ನೆಲೆಯಲ್ಲಿ ಅನುಮೋದನೆ ನೀಡಲಾಗಿದೆ.

ಮೈಸೂರು ನಗರವನ್ನು ಯೋಜನಾಬದ್ಧವಾಗಿ ಅಭಿವೃದ್ಧಿಪಡಿಸುವುದಕ್ಕಾಗಿ ಹೊಸ ಬಡಾವಣೆ ನಿರ್ಮಾಣ ಮಾಡುವ ಸಂಬಂಧ ಸುಮಾರು 140 ಬಡಾವಣೆ ವಿನ್ಯಾಸ ನಕ್ಷೆಗಳಿಗೆ ಅನುಮೋದನೆ ನೀಡಲಾಯಿತು. 2026–27ನೇ ಸಾಲಿನ ಆಯವ್ಯಯದಲ್ಲಿ ಉದ್ಯಾನವನ ಅಭಿವೃದ್ಧಿ, ವೃತ್ತ, ಸಿಡಿಪಿ ಮುಖ್ಯ ರಸ್ತೆ ಹಾಗೂ ಇತರೆ ರಸ್ತೆಗಳ ಅಭಿವೃದ್ಧಿ, ಕೆರೆ, ಮಳೆ ನೀರು ಚರಂಡಿ ನಿರ್ಮಾಣ, ಬಿಟ್ಟು ಹೋಗಿರುವ ಪ್ರದೇಶಗಳಲ್ಲಿ ಹೊಸ ಬಡಾವಣೆ ನಿರ್ಮಾಣ ಮಾಡುವ ಸಲುವಾಗಿ 131 ಕೋಟಿ ರೂ.ಅಂದಾಜು ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳುವುದಕ್ಕೆ ವಿಸ್ತೃತವಾಗಿ ಸಮಾಲೋಚಿಸಿದ ಬಳಿಕ ಒಪ್ಪಿಗೆ ನೀಡಲಾಯಿತು.



ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳೂ ಆದ ಎಂಡಿಎ ಅಧ್ಯಕ್ಷ ಜಿ.ಲಕ್ಷ್ಮೀಕಾಂತ್ ರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆಯುಕ್ತ ಕೆ.ಆರ್.ರಕ್ಷಿತ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಇನ್ನಿತರರಿದ್ದರು.

ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆ ಮಾಡಲಾಗಿರುವ ಗುತ್ತಿಗೆ ಅವಧಿ ಮುಕ್ತಾಯಗೊಂಡಿರುವ ನಾಗರಿಕ ಸೌಲಭ್ಯ ನಿವೇಶನಗಳ ಗುತ್ತಿಗೆ ಅವಧಿಯನ್ನು ನವೀಕರಣ ಮಾಡಲು ನಿರ್ದೇಶನ ಕೋರಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು. ಈಗಾಗಲೇ ಸಿಎ ನಿವೇಶನಗಳನ್ನು ಪಡೆದಿರುವ ಖಾಸಗಿ ಸಂಸ್ಥೆಗಳು ಶಿಕ್ಷಣ, ಆಸ್ಪತ್ರೆ ಇನ್ನಿತರ ಸಂಸ್ಥೆಯನ್ನು ನಡೆಸಿಕೊಂಡು ಬಂದಿರುವ ಕಾರಣ ನವೀಕರಣ ಮಾಡುವಾಗ ಅನುಸರಿಸಬೇಕಾದ ಕ್ರಮಗಳ ಕುರಿತು ನಿರ್ದೇಶನ ಕೋರಲು ನಿರ್ಧರಿಸಲಾಯಿತು. ಎಂಡಿಎ ಬಡಾವಣೆಗಳಲ್ಲಿ ಮೂಲಸೌಲಭ್ಯ ಒದಗಿಸುವ ಬಗ್ಗೆ ಜನಪ್ರತಿನಿಧಿಗಳು ಹಾಗೂ ನಿವಾಸಿಗಳ ಬೇಡಿಕೆಯನ್ನು ಆಧರಿಸಿ ಕಾಮಗಾರಿ ನಡೆಸಲಾಗುತ್ತದೆ ಎಂದು ಎಂಡಿಎ ಆಯುಕ್ತರು ಸಭೆಗೆ ವಿವರಿಸಿದರು.

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅವಧಿಯಲ್ಲಿ ಹಂಚಿಕೆ ಮಾಡಲಾದ ನಿವೇಶನಗಳಲ್ಲಿ ವಿವಿಧ ಕಾರಣಗಳಿಂದ ಬದಲಿ ನಿವೇಶನ ಕೋರಿರುವ ಪ್ರಕರಣಗಳನ್ನು ಎಂಡಿಎ ನಿಯಮಗಳು ರಚನೆಯಾದ ನಂತರ ಪ್ರತ್ಯೇಕವಾಗಿ ವಿಷಯವಾರು ಪಟ್ಟಿಯನ್ನು ಮಂಡಿಸಿ ತೀರ್ಮಾನ ಮಾಡಲು ಸೂಚಿಸಲಾಯಿತು. ಈಗಾಗಲೇ ರಾಜ್ಯ ಸರ್ಕಾರ ಬದಲಿ ನಿವೇಶನಗಳ ಹಂಚಿಕೆ ಮಾಡದಂತೆ ಆದೇಶ ನೀಡಿದ್ದು, ಹಾಗಾಗಿ, ಪ್ರತ್ಯೇಕ ನಿಯಮಾವಳಿ ರೂಪಿತವಾದ ಬಳಿಕ ತೀರ್ಮಾನಿಸಲಾಗುತ್ತದೆ. ಸಭೆಯಲ್ಲಿ ಮೈಸೂರು ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ನಗರ ಯೋಜಕ ಸದಸ್ಯ ಶಿವರಾಮಯ್ಯ, ನಗರಪಾಲಿಕೆ ಅಧೀಕ್ಷಕ ಅಭಿಯಂತರ ಸಿ.ಎಸ್.ಮಂಜು, ಎಂಡಿಎ ಕಾರ್ಯದರ್ಶಿ ಜಾನ್ಸನ್, ಸದಸ್ಯರಾದ ಸುನೀಲ್‌ಕುಮಾರ್ ಮತ್ತಿತರರು ಹಾಜರಿದ್ದರು.

ಮೈಸೂರಿನ ಅರ್ಜುನ ವೃತ್ತ ನಿರ್ಮಾಣಕ್ಕೆ ತಾಂತ್ರಿಕ ಅನುಮೋದನೆ ಕಲ್ಪಿಸಿ

ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್‌ಗೆ ಸಂಸದ ಯದುವೀರ್ ಮನವಿ

ಮೈಸೂರು, ಜೂ.6(ಬಿಎಲ್‌ಯು)– ಮೈಸೂರಿನ ಅರ್ಜುನ ವೃತ್ತ (ಎಲ್‌ಐಸಿ ಜಂಕ್ಷನ್) ಅಭಿವೃದ್ಧಿಗೆ ತಾಂತ್ರಿಕ ಅನುಮೋದನೆ ಕಲ್ಪಿಸುವ ದೃಷ್ಟಿಯಿಂದ ಯೋಜನಾ ನಿರ್ವಹಣಾ ಸಲಹೆಗಾರರನ್ನು ನೇಮಕ ಮಾಡುವಂತೆ ಸಂಸದ ಯದುವೀರ್ ಅವರು ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು ಆಗ್ರಹಿಸಿದ್ದಾರೆ. ಮೈಸೂರು ಟ್ರಾವೆಲ್ ಮಾರ್ಟ್ ಕಾರ್ಯಕ್ರಮಕ್ಕೆ ಆಗಮಿಸಿದ್ದ ವೇಳೆ ಈ ಮನವಿ ಸಲ್ಲಿಸಿದ್ದಾರೆ.

ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯ ಈ ಯೋಜನೆಗೆ 20 ಕೋಟಿ ಅನುದಾನ ಮಂಜೂರು ಮಾಡಿದೆ. ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಚಿನ್ನದ ಅಂಬಾರಿ ಹೊತ್ತು, ದಂತಕಥೆಯಾದ ಆನೆ ಅರ್ಜುನನ ಸ್ಮರಣಾರ್ಥ ಭವ್ಯ ಸ್ಮಾರಕ ನಿರ್ಮಿಸುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದ್ದಾರೆ.



ಮೈಸೂರು ಹಾಗೂ ಕೊಡಗಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಅಗತ್ಯ ನೆರವು ನೀಡಬೇಕೆಂದು ಸಂಸದ ಯದುವೀರ್ ಅವರು ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಈ ಯೋಜನೆಯಡಿ ವಿಶ್ವಮಟ್ಟದ ವಿನ್ಯಾಸ, ವಾಸ್ತುಶಿಲ್ಪ, ಸಂಚಾರ ನಿರ್ವಹಣೆ, ಭೂದೃಶ್ಯ ಅಭಿವೃದ್ಧಿ ಹಾಗೂ ಸಮಯೋಜಿತ ಅನುಷ್ಠಾನಕ್ಕೆ ಅಗತ್ಯವಿರುವ ಸಮಗ್ರ ವರದಿ ಸಿದ್ದಪಡಿಸಲಾಗಿದ್ದು, ಇದಕ್ಕೆ ಶೀಘ್ರ ಅನುಮೋದನೆ ನೀಡುವಂತೆ ಯದುವೀರ್ ಆಗ್ರಹಿಸಿದ್ದಾರೆ.

ಮಡಿಕೇರಿ ಕೋಟೆ ಅಭಿವೃದ್ಧಿಗೆ ಮನವಿ: ಕೊಡಗಿನ ಐತಿಹಾಸಿಕ ಮಡಿಕೇರಿ ಕೋಟೆಯ ಸಮಗ್ರ ನವೀಕರಣ, ಸಂರಕ್ಷಣೆ ಹಾಗೂ ತಾಂತ್ರಿಕ ಉನ್ನತೀಕರಣಕ್ಕೆ ಕೇಂದ್ರ ಸರ್ಕಾರ ನೆರವು ನೀಡಬೇಕೆಂದು ಕೋರಿದ್ದಾರೆ. ಕೊಡಗಿನ ಐತಿಹಾಸಿಕ, ಸಂಸ್ಕೃತಿ ಹಾಗೂ ವಾಸ್ತುಶಿಲ್ಪದ ವೈಭವದ ಪ್ರತೀಕವಾದ ಈ ಕೋಟೆ ವರ್ಷವಿಡಿ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸಲಿದೆ ಎಂದು ಸಂಸದ ಯದುವೀರ್ ಮನದಟ್ಟು ಮಾಡಿದ್ದಾರೆ.

ಐತಿಹಾಸಿಕ ಕಟ್ಟಡಗಳ ವೈಜ್ಞಾನಿಕ ರಕ್ಷಣೆ ಮತ್ತು ಪುನಶ್ಚೇತನ, ಆಧುನಿಕ ಪರಂಪರೆ ವಸ್ತು ಸಂಗ್ರಹಾಲಯದ ಸ್ಥಾಪನೆ, ಡಿಜಿಟಲ್ ಮಾಹಿತಿ ವ್ಯವಸ್ಥೆ ಹಾಗೂ ಬಹು ಭಾಷಾ ಆಡಿಯೋ ಮಾರ್ಗದರ್ಶಿಗಳ ಅಳವಡಿಕೆ, ಸೌಂಡ್ ಅಂಡ್ ಲೈಟ್ ಶೋ ಆರಂಭ, ಪರಿಸರ ಸ್ನೇಹಿ ಪಾದಚಾರಿ ಮಾರ್ಗ ಹಾಗೂ ಸುಂದರೀಕರಣ, ವಾಹನ ನಿಲುಗಡೆ ಹಾಗೂ ಸಾರ್ವಜನಿಕ ಸೌಲಭ್ಯಗಳ ಅಭಿವೃದ್ಧಿ ಮಾಡುವಂತೆ ಮನವಿ ಮಾಡಿದ್ದಾರೆ. ಪ್ರವಾಸೋದ್ಯಮ ಮತ್ತು ಪರಂಪರೆ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಅಗತ್ಯ ಸಮೀಕ್ಷೆ ಕೈಗೊಂಡು ಸೂಕ್ತ ನೆರವು ನೀಡುವಂತೆ ಯದುವೀರ್ ಅವರು ಕೇಂದ್ರ ಸಚಿವರಲ್ಲಿ ಕೋರಿದ್ದಾರೆ.

ಮರುಭೂಮಿಯಲ್ಲಿ ಬಾಯಾರಿಕೆಯಿಂದ 49 ಮಂದಿ ಸಾವು

ಅಬಿಡ್ಜಾನ್: ನೈಜರ್‌ನ ಸಹಾರಾ ಮರು ಭೂಮಿ ಪ್ರದೇಶದಲ್ಲಿ ಟ್ರಕ್ ಕೆಟ್ಟು ನಿಂತ ಪರಿಣಾಮ ಸುಮಾರು 49 ಮಂದಿ ಬಾಯಾರಿಕೆಯಿಂದ ಮೃತಪಟ್ಟಿದ್ದಾರೆ. ಈದ್ ಅಲ್– ಅದಾ ಆಚರಣೆ ಬಳಿಕ ಮಾಲಿಯಿಂದ ಟ್ರಕ್‌ನಲ್ಲಿ ವಾಪಸ್ ಆಗುತ್ತಿದ್ದ ವೇಳೆ ಈ ದುರಂತ ಸಂಭವಿಸಿದೆ. ನೈಜರ್–ಅಲ್ಜೀರಿಯಾ ನಡುವಿನ ಗಡಿ ದಾಟುವ ಸ್ಥಳವಾಗಿದ್ದು ಅಸ್ಸಾಮಕಾ ನಗರದಿಂದ 80 ಕಿ.ಮೀ. ದೂರದಲ್ಲಿ ಟ್ರಕ್ ಕೆಟ್ಟು ನಿಂತಿದೆ. ಚಾಲಕ, ಆತನ ಸಹಾಯಕ ಮತ್ತು ಪ್ರಯಾಣಿಕರು ಎಷ್ಟೇ ಪ್ರಯತ್ನಿಸಿದರೂ ವಾಹನ ದುರಸ್ತಿ ಸಾಧ್ಯವಾಗಿಲ್ಲ. ಪರಿಣಾಮ ಕುಡಿಯುವ ನೀರೂ ಇಲ್ಲದೆ, ತೀವ್ರ ತಾಪಮಾನದಿಂದ ಪ್ರಯಾಣಿಕರು ಸಿಲುಕಿಕೊಂಡು ಬಾಯಾರಿಕೆ ತಾಳಲಾರದೆ 49 ಮಂದಿ ಸಾವಿಗೀಡಾಗಿದ್ದಾರೆ. ಮೃತದೇಹಗಳನ್ನು ಸಾಮೂಹಿಕವಾಗಿ ಸಮಾಧಿ ಮಾಡಲಾಗಿದೆ ಎಂದು ಅಗಾಡೆಜ್ ಗವರ್ನರೇಟ್ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಈ ಕಠಿಣ ಪರಿಸ್ಥಿತಿಯಲ್ಲೂ ಇಬ್ಬರು ಪ್ರಯಾಣಿಕರು ಸುಡುವ ಬಿಸಿಲಿನಲ್ಲೇ ಸುಮಾರು 50 ಕಿ.ಮೀ. ನಡೆದು ಜೀವ ಉಳಿಸಿಕೊಂಡಿದ್ದಾರೆ.

ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ
ಬುಕಿಂಗ್ ಪ್ರಾರಂಭವಾಗಿದೆ
MUDA LIMITS
ಕೇವಲ ₹749/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50 | 40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು
95133 01854
88840 71010

Hi! TAXI
ONLY ONE WAY TAXI CHARGE
MYSORE to BANGALORE
City drop or Pick up
BANGALORE to MYSORE
Airport drop or Pick up
MYSURU
9611177599

PROPERTIES FOR SALE
RAINING OFFERS THIS JUNE
2 & 3 BHK APARTMENTS @ RAMKRISHNA NAGAR
Book Now For Free Registration
20x30, 20x35, 30x40, 30x50 Sites
Near Rainbow School, Bogadi
30X40, 30X50+, 40X60 SITES @ 40FT & 50 FT ROAD NEAR RT NAGAR, DEFENCE APARTMENTS
PRAKRUTHI PROPERTIES
95386 90359, 90359 90359

ಚಾಮುಂಡೇಶ್ವರಿ ದೇವಾಲಯ 50 ರೂ. ಟಿಕೆಟ್ ಚಾಲ್ತಿ

ಮೈಸೂರು: ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ನಿಗದಿಪಡಿಸಲಾಗಿದ್ದ ರೂ. 50. ಟಿಕೆಟ್ ಪ್ರವೇಶವನ್ನು ತಾಂತ್ರಿಕ ಕಾರಣಗಳಿಂದ ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು. ಈ ಸಂದರ್ಭದಲ್ಲಿ ಕೆಲವು ಸಾಮಾಜಿಕ ಮಾಧ್ಯಮದವರು ಚಿತ್ರೀಕರಿಸಿಕೊಂಡು ಪ್ರಾಧಿಕಾರದ ವಿರುದ್ಧ ಸಲ್ಲದ ಅಪಪ್ರಚಾರ ಮಾಡಿಕೊಂಡು ಸಾರ್ವಜನಿಕರಿಗೆ ಗೊಂದಲ ಉಂಟು ಮಾಡುತ್ತಿದ್ದಾರೆ. ಆದ್ದರಿಂದ ಈಗಾಗಲೇ ಚಾಲ್ತಿಯಲ್ಲಿದ್ದ ರೂ. 50. ಟಿಕೆಟ್ ಪ್ರವೇಶವನ್ನು ಎಂದಿನಂತೆ ಕಾರ್ಯನಿರ್ವಹಿಸಲು ಕ್ರಮ ವಹಿಸಲಾಗಿರುತ್ತದೆ ಎಂದು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಣಕ್ಕಾಗಿ ಆರ್ಥಿಕ ನೆರವು ನೀಡಲು ಅರ್ಜಿ ಆಹ್ವಾನ

ಮೈಸೂರು: 2026–27ನೇ ಸಾಲಿನಲ್ಲಿ ಬೀಡಿ, ಸುಣ್ಣದ ಕಲ್ಲು, ಡೊಲೊಮೈಟ್, ಗಣಿ, ಕಬ್ಬಿಣ, ಕ್ರೋಮ್ ಮತ್ತು ಮ್ಯಾಂಗನೀಸ್ ಅದಿರು ಗಣಿ, ಸಿನಿ ಕಾರ್ಮಿಕರ ಮಕ್ಕಳಿಗೆ ಶಿಕ್ಷಣಕ್ಕಾಗಿ ಆರ್ಥಿಕ ನೆರವು ನೀಡಲು ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅಕ್ಟೋಬರ್ 31 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 9148240554 ಅನ್ನು ಸಂಪರ್ಕಿಸಬಹುದು.

ಮೈಸೂರು ಮಿತ್ರ 47
ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ – ಸರ್ಕಾರ (ಧಾರ್ಮಿಕದತ್ತಿ ಇಲಾಖೆ)
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು–571301
ದೂರವಾಣಿ ಸಂಖ್ಯೆ: ಕಾ.ನಿ.ಅ: 08221–226245, Email : sstnanjangud@gmail.com
ಸಂಖ್ಯೆ:ಎಸ್‌ಎಸ್‌ಟಿ/ಪಿಆರ್/ಗಿ.ಕ./03/2026–27 ದಿನಾಂಕ: 02–05–2026

ಅಲ್ಪಾವಧಿ ಟೆಂಡರ್ ಪತ್ರಿಕಾ ಪ್ರಕಟಣೆ

ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ದಿನಾಂಕ: 23–06–2026ರಿಂದ ದಿನಾಂಕ: 30–06–2026ರವರೆಗೆ ಶ್ರೀಯವರ ಗಿರಿಜಾ ಕಲ್ಯಾಣ ಮಹೋತ್ಸವವು ಜರುಗಲಿದೆ. ಈ ಸಂಬಂಧ ಈ ಕೆಳಕಂಡವುಗಳಿಗೆ, ಟೆಂಡರ್ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಬೇಕಾಗಿರುತ್ತದೆ.

ಕ್ರ.ಸಂ	ವಿವರ
1	ದಿನಾಂಕ : 23–06–2026 ರಿಂದ 26–06–2026ರ ಬೆಳಗ್ಗೆವರೆಗೆ ಉಪಹಾರ, ಊಟ ತಯಾರಿಸಿ ಬಡಿಸಿ, ಸ್ವಚ್ಛಗೊಳಿಸುವ ಬಗ್ಗೆ.
2	ದಿನಾಂಕ: 23–06–2026 ರಿಂದ 26–06–2026ರವರೆಗೆ ಸಿಹಿತಿಂಡಿಗಳು, ಅಂದೋಜಿ ಸಿದ್ಧಪಡಿಸಿ ಸರಬರಾಜು ಮಾಡುವ ಬಗ್ಗೆ.
3	ದೇವಾಲಯದ ಮಹಾದ್ವಾರ, ವಸಂತ ಮಂಟಪ ಹಾಗೂ ದೇವರ ಸನ್ನಿಧಿಗಳಿಗೆ ದಿನಾಂಕ: 23–06–2026 ಹಾಗೂ 24–06–2026ರಂದು ಹೂವಿನ ಅಲಂಕಾರ ಮಾಡುವ ಬಗ್ಗೆ.
4	ದಿನಾಂಕ:23–06–2026 ರಿಂದ 26–06–2026ರವರೆಗೆ ಹಾಸಿಗೆ, ದಿಂಬು ಇತ್ಯಾದಿಗಳನ್ನು ಸರಬರಾಜು ಮಾಡುವ ಬಗ್ಗೆ.

ಆಸಕ್ತರು ದರಸೂಚಿಯನ್ನು ನಮೂದಿಸಿರುವ ದರಪಟ್ಟಿಯನ್ನು ಮೊಹರು ಮಾಡಿದ ಲಕೋಟೆಯಲ್ಲಿರಿಸಿ, ಕಾರ್ಯನಿರ್ವಾಹಕ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡುರವರಿಗೆ ದಿನಾಂಕ: 15–06–2026 ಸಂಜೆ: 4–00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ಆ ನಂತರ ಬರುವ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಷರತ್ತುಗಳಿಗೆ ದೇವಾಲಯದ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ,
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.1, ಸಕಲೇಶಪುರ, ಹಾಸನ ಜಿಲ್ಲೆ. ದೂರವಾಣಿ ಸಂಖ್ಯೆ:08173–244454
ನೋಂದಾಯಿತಕಛೇರಿ ವಿಳಾಸ: ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೆಂಟ್ರಿ ರೋಡ್, ಬೆಂಗಳೂರು–560001
ಪೊ: 080–22289966/22256688, ಫ್ಯಾಕ್ಸ್: 080–22264477 ಇ–ಮೇಲ್: mdvjnl@gmail.com
ವೆಬ್‌ಸೈಟ್: www.vjnl.in CIN No: U41000KA2016SGC097260

ಸಂ:ಕಾಇಂ/ವಿಜನಿನಿ/ಎಯೋವಿ.1/ಸ/ಟೆಂಡರ್ ಪ್ರಕಟಣೆ/TND-10/CALL-2/2026-27/277 ದಿನಾಂಕ:– 04.06.2026.

ಶೇಕಡಾವಾರು ಟೆಂಡರ್ ಪ್ರಕಟಣೆ ಸಂಖ್ಯೆ : VJNL/EE/D1/SKP/FOREST/TND-10/CALL-2/2026-27/273 Dated:- 04.06.2026. (Two Tender Document System) (ಕೆ.ಪಿ.ಪಿ.ಪಿ ಪೋರ್ಟಲ್ ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗದಡಿಯಲ್ಲಿ 01 ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗಳ ಟೆಂಡರ್‌ಗಿಟ್ಟ್ ಮೊತ್ತ ರೂ. 15.00 ಲಕ್ಷಗಳು (ಜಿ.ಎಸ್.ಟಿ. ಮೊತ್ತ ಹೊರತುಪಡಿಸಿ) ಇರುತ್ತದೆ. ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ ಟೆಂಡರ್‌ಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ಟೆಂಡರ್ ಕಾಮಗಾರಿ ಕ್ರ.ಸಂ.	ಟೆಂಡರ್ ದಸ್ತಾವೇಜುಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ	ಭರ್ತಿ ಮಾಡಿದ ಟೆಂಡರ್ ದಸ್ತಾವೇಜುಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್ (ಲಕೋಟೆ–1) ತೆರೆಯುವ ದಿನಾಂಕ
1	01	06.06.2026 ರಿಂದ 20.06.2026 ಸಂಜೆ 5.30 ರ ವರೆಗೆ	20.06.2026 ಸಂಜೆ 5.30 ರ ವರೆಗೆ	ದಿನಾಂಕ: 22.06.2026 ರವರೆಗೆ ಬೆಳಿಗ್ಗೆ 11.00 ಗಂಟೆಗೆ

ತಾಂತ್ರಿಕ ಬಿಡ್‌ನ್ನು ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.1, ಸಕಲೇಶಪುರ ಇಲ್ಲಿ ತೆರೆಯಲಾಗುವುದು ಮತ್ತು ತಾಂತ್ರಿಕ ಬಿಡ್‌ಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಸದರಿ ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ/ಪೂರ್ವಾರ್ಹತ ಷರತ್ತುಗಳು/ಇ.ಎಂ.ಡಿ ಮೊತ್ತ/ಬಿಡ್ಡುದಾರರ ಅರ್ಹತೆ/ಟೆಂಡರ್ ನಿಭಂಧನೆಗಳು/ಪೂರ್ವ ಬಿಡ್ ಸಭೆಯ ವಿವರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಹಾಗೂ ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ ಹಾಗೂ ಕಡಿಮೆ ಮೊತ್ತದ ಟೆಂಡರ್ ಸ್ವೀಕರಿಸಲು ಬದ್ಧವಾಗಿರುವುದಿಲ್ಲ. ಯಾವುದೇ ಮಾರ್ಪಾಡುಗಳು ಅಥವಾ ತಿದ್ದುಪಡಿಗಳನ್ನು ಕೆ.ಪಿ.ಪಿ.ಪಿ. ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಈ ಕೆಳ ಸಹಿದಾರರಿಂದ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ, https://kppp.karnataka.gov.in/#/portal/portal-home ರಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.1 ಸಕಲೇಶಪುರ.

ವಾಸಾಸಂಇ/ಹಿಸನಿ/ಹಾಸನ/193/ಕೆಎಸ್‌ಎಂಸಿಎ/2026–27



ಬೊಮ್ಮನದೊಡ್ಡಿಯಲ್ಲಿ ಚಿರತೆ ಪ್ರತ್ಯಕ್ಷ: ಆತಂಕ

ಭಾರತೀನಗರ,ಜೂ.6–ಸಮೀಪದ ಬೊಮ್ಮನದೊಡ್ಡಿ ಗ್ರಾಮದಲ್ಲಿ ಚಿರತೆಯೊಂದು ಪ್ರತ್ಯಕ್ಷಗೊಂಡು ಜನರಲ್ಲಿ ಆತಂಕ ಮೂಡಿಸಿದೆ.

ಗುರುದೇವರಹಳ್ಳಿ ಗ್ರಾಮದ ಚೇತನ್‌ಮಾದೇಗೌಡ ಎಂಬುವರು ಬೊಮ್ಮನದೊಡ್ಡಿ ಗ್ರಾಮದ ರಸ್ತೆಯಲ್ಲಿ ಮನೆಕಟ್ಟಿಕೊಂಡಿದ್ದು, ಆ ರಸ್ತೆಯಲ್ಲಿ ಸಂಚರಿಸುತ್ತಿರುವ ಚಿರತೆ ದೃಶ್ಯ ಸಿಸಿ ಕ್ಯಾಮಾರದಲ್ಲೂ ಕೂಡ ಸೆರೆಯಾಗಿದೆ. ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಇದರಿಂದ ಗ್ರಾಮಸ್ಥರು ಆತಂಕಕ್ಕೊಳಗಾಗಿದ್ದಾರೆ. ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆಯನ್ನು ಸೆರೆಹಿಡಿಯಬೇಕು. ಇಲ್ಲದಿದ್ದರೆ ಮುಂದೆ ಆಗುವ ಅನಾಹುತಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳೇ ಹೊಣೆ ಎಂದು ಗ್ರಾಮಸ್ಥರು ಎಚ್ಚರಿಸಿದರು.

ವಿಜೇತ ಮೈಸೂರು ತಂಡಕ್ಕೆ ಅಭಿನಂದನೆ



ಬೆಂಗಳೂರಿನ ಶ್ರೀ ಕಂಠೀರವ ಸ್ಟೇಡಿಯಂನಲ್ಲಿ ನಡೆದ ರಾಜ್ಯ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಸತತ 9ನೇ ಬಾರಿ ಬಾಲ್ ಬ್ಯಾಡ್ಮಿಂಟನ್ ಕ್ರೀಡಾಕೂಟದಲ್ಲಿ ಮೈಸೂರು ತಂಡ ವಿಜೇತವಾಗಿದೆ. ಆಟಗಾರರನ್ನು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಾ.ಅರುಣ್ ಕುಮಾರ್ ಅಭಿನಂದಿಸಿದರು. ಸಂಘದ ಕುಮಾರ, ಮಂಜುನಾಥ್, ವಿಶ್ವನಾಥ್, ಸುರೇಶ್, ಧನು, ಸಂದೀಪ್, ಅರುಣ್‌ಕುಮಾರ್, ಶಿವಪ್ಪ, ಶ್ರೀಧರ್, ರವಿ, ರವಿಕುಮಾರ್, ನವೀನ್ ಕುಮಾರ್ ಇದ್ದರು.

ಮಾನವನ ದುರಾಸೆಯಿಂದ ಮರಗಳ ಹನನ

ಭಾರತೀನಗರ, ಜೂ.6–ಮಾನವನ ದುರಾಸೆಯಿಂದ ಮರಗಳ ಹನನಗಳು ಹೆಚ್ಚಾಗುತ್ತಿದ್ದು, ಇದರಿಂದ ಮಳೆಯ ಪ್ರಮಾಣ ಕುಸಿತ ಕಂಡಿವೆ ಎಂದು ಶಾಸಕ ಮಧು ಜಿ.ಮಾದೇಗೌಡ ಹೇಳಿದರು.

ಸಮೀಪದ ಹನುಮಂತನಗರದ ವಸತಿ ಶಾಲೆಯಲ್ಲಿ ಭಾರತೀ ಎಜುಕೇಷನ್ ಟ್ರಸ್ಟ್, ಭಾರತೀ ವಸತಿ ಸಂಯುಕ್ತ ಶಾಲೆ ಮತ್ತು ಪದವಿ ಪೂರ್ವ ಕಾಲೇಜು, ಡಾ.ರಾವ್ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡನೆಟ್ಟು, ಪರಿಸರ ಮಾಲಿನ್ಯದಿಂದ ಕಾಯಿಲೆಗಳು ಹರಡುತ್ತಿದ್ದು, ಜೀವಸಂಕುಲದ ವಿನಾಶ ಕಟ್ಟಿಟ್ಟಬುತ್ತಿ. ಪರಿಸರದ ಮೇಲೆ ಸರ್ವರಿಗೂ ಕಾಳಜಿ ಇರಲಿ ಎಂದು ಎಚ್ಚರಿಸಿದರು.

ಭಾರತೀ ವಸತಿ ಸಂಯುಕ್ತ ಶಾಲೆ ಪ್ರಾಂಶುಪಾಲ ಪುಟ್ಟಸ್ವಾಮಿ ಮಾತನಾಡಿ, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆಮಾಡಿ ಪರಿಸರ ಸ್ನೇಹಿ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಿ ಎಂದರು. ಪರಿಸರ ದಿನಾಚರಣೆ ಅಂಗವಾಗಿ ವಸತಿ ಶಾಲೆಯ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು.

ಬಿಇಟಿ ಕಾರ್ಯದರ್ಶಿ ಸಿದ್ದೇಗೌಡ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು. ವಿದ್ಯಾರ್ಥಿಗಳಿಂದ ಪರಿಸರ ಗೀತಗಾಯನ ನೃತ್ಯವನ್ನು ಏರ್ಪಡಿಸಲಾಗಿತ್ತು. ವಸತಿ ಶಾಲೆಯ ಡೀನ್ ನಂದ ಯಲಮಾಲಿ ಅಧ್ಯಕ್ಷತೆ ವಹಿಸಿದ್ದರು.

ಇದೇ ವೇಳೆ ಬಿಇಟಿ ಸಿಇಓ ಆಶಯ್ ಮಧು, ಉಪನ್ಯಾಸಕರಾದ ಶಿವಲಿಂಗೇಗೌಡ, ಅರುಣ್, ದೀಪಿಕಾ, ಮಧುರ, ವಿಶ್ವಾಸ್ ಹಲವರು ಉಪಸ್ಥಿತರಿದ್ದರು.



ಭಾರತೀನಗರದ ಪದವಿ ಪೂರ್ವ ಕಾಲೇಜಿನಲ್ಲಿ ಮಧು ಜಿ. ಮಾದೇಗೌಡ ಮಾತನಾಡಿದರು.

ಜೂ.21, ಪಿಇಟಿ ಕ್ರೀಡಾಂಗಣದಲ್ಲಿ ಯೋಗ ದಿನಾಚರಣೆ

ಮಂಡ್ಯ, ಜೂ.6–ವಿಶ್ವ ಯೋಗ ದಿನವನ್ನು ಜೂ.21ರಂದು ನಗರ ಪಿಇಎಸ್ ಇಂಜಿನಿಯರ್ ಕಾಲೇಜಿನ ಪಿಇಟಿ ಕ್ರೀಡಾಂಗಣದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಜಿಲ್ಲೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಲು ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ವಸತಿ ನಿಲಯದ ನಿವಾಸಿಗಳು, ಸ್ಕೌಟ್ ಅಂಡ್ ಗೈಡ್ ಮಹಿಳಾ ಸಂಘಟನೆಗಳು ಮತ್ತು ಯೋಗ ಸಂಸ್ಥೆಗಳು ಸೇರಿದಂತೆ 10,000ಕ್ಕೂ ಹೆಚ್ಚು ಜನರು ಭಾಗವಹಿಸುವಂತೆ ಸಿದ್ಧತೆ ಮಾಡಲು ಸೂಚಿಸಿದರು.

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಮಹತ್ವ ಅರಿತು ಸಂಬಂಧಪಟ್ಟ ವಿವಿಧ ಇಲಾಖೆಗಳು ಕಾರ್ಯಕ್ರಮ ಯಶಸ್ಸುಗೊಳಿಸುವ ನಿಟ್ಟಿನಲ್ಲಿ ಅಗತ್ಯ ಸಹಕಾರ ನೀಡಬೇಕು. ಶಾಲಾ, ಕಾಲೇಜು ಹಾಗೂ ಹಾಸ್ಟೇಲ್ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಲು ಮತ್ತು ಬರಲು ಅಗತ್ಯ ಜವಾಬ್ದಾರಿ ವಹಿಸಿಕೊಂಡು ಕಾರ್ಯಕ್ರಮ ಯಶಸ್ಸಿಗೆ ಸಹಕರಿಸುವಂತೆ ಜಿಲ್ಲಾಧಿಕಾರಿ ಅವರು ನಿರ್ದೇಶನ ನೀಡಿದರು.



ಜಿಲ್ಲಾಧಿಕಾರಿ ಡಾ. ಕುಮಾರ ಯೋಗ ದಿನಾಚರಣೆಯ ಪೂರ್ವಭಾವಿ ಸಭೆ ನಡೆಸಿದರು.

ಯೋಗ ಶಿಕ್ಷಕರನ್ನು ಸಂಯೋಜಕರನ್ನಾಗಿ ನೇಮಿಸಿ, ಭಾಗವಹಿಸುವವರಿಗೆ 20ಂದ 3 ದಿನಗಳ ಮುಂಚಿತವಾಗಿ ತರಬೇತಿ ನೀಡಲಾಗುತ್ತದೆ. ಪೊಲೀಸ್ ಇಲಾಖೆಯಿಂದ ಬಿಗಿ ಭದ್ರತೆ, ಪಾರ್ಕಿಂಗ್ ವ್ಯವಸ್ಥೆ, ಆರೋಗ್ಯ ಇಲಾಖೆಯಿಂದ ಅಂಬುಲೆನ್ಸ್ ವ್ಯವಸ್ಥೆ, ಪ್ರಥಮ ಚಿಕಿತ್ಸೆ ಮತ್ತು ರಕ್ತದಾನ ಶಿಬಿರವನ್ನು ಆಯೋಜಿಸಲು ಸಭೆಯಲ್ಲಿ ತಿಳಿಸಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ ಮಾತನಾಡಿ, ಆಯುಷ್ ಇಲಾಖಾ ಮಾರ್ಗಸೂಚಿಗಳ ಅನುಸಾರ ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಸ್ಥಳ ನಿಗದಿ ಮಾಡುವುದು, ಯೋಗಾಭ್ಯಾಸಗಾರರನ್ನು ಸಜ್ಜುಗೊಳಿಸುವುದು, ಯೋಗ ಪ್ರೋಟೋಕಾಲ್‌ನ ಪ್ರಕಾರ ಯೋಗಾಸನಗಳನ್ನು ಪೂರ್ವಾಭ್ಯಾಸ ಮಾಡಿಸುವುದರ ಕುರಿತು ಮಾಹಿತಿ ನೀಡಿದರು.

ಸಭೆಯಲ್ಲಿ ಎಎಸ್ಪಿ ತಿಮ್ಮಯ್ಯ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಉಪಾಧ್ಯಕ್ಷೆ ಮೀರಾ ಶಿವಲಿಂಗಯ್ಯ ಇನ್ನಿತರೆ ಗಣ್ಯರು ಇದ್ದರು.

ಹೇಮಗಿರಿಯ ಬಿಜಿಎಸ್ ಪಬ್ಲಿಕ್ ಶಾಲೆಯಲ್ಲಿ ಅಕ್ಷರಾಭ್ಯಾಸ



ಹೇಮಗಿರಿಯ ಬಿಜಿಎಸ್ ಪಬ್ಲಿಕ್ ಶಾಲೆಯಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮ ಪೋಷಕರಿಗೆ ಹೂವು ಮತ್ತು ಹಣ್ಣಿನ ಗಿಡಗಳ ವಿತರಣಾ ಕಾರ್ಯಕ್ರಮ ನಡೆಯಿತು.

ಕೆ.ಆರ್.ಪೇಟೆ, ಜೂ.6–ತಾಲೂಕಿನ ಹೇಮಗಿರಿಯ ಬಿಜಿಎಸ್ ಪಬ್ಲಿಕ್ ಶಾಲೆಯಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮ ಹಾಗೂ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪೋಷಕರಿಗೆ ಹೂವು ಮತ್ತು ಹಣ್ಣಿನ ಗಿಡಗಳ ವಿತರಣಾ ಕಾರ್ಯಕ್ರಮ ನಡೆಯಿತು.

ತಾಲೂಕು ನಾಲ್ವಡಿ ಕೃಷ್ಣರಾಜ ಒಡೆಯರ್ ಪರಿಸರ ಜಾಗೃತಿ ವೇದಿಕೆಯ ಅಧ್ಯಕ್ಷ ಬಳ್ಳೇಕೆರೆ ಮಂಜುನಾಥ್ ಸಸಿಗಳನ್ನು ವಿತರಣೆ ಮಾಡಿ, ಜಾಗತಿಕ ಜಗತ್ತಿನ ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ವಿದ್ಯಾರ್ಥಿಗಳು ಮೊಬೈಲ್ ಮಾಯಾಜಾಲದಲ್ಲಿ ಸಿಲುಕಿ ಅತಂತ್ರ ಪರಿಸ್ಥಿತಿಯಲ್ಲಿರುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಿ ಗುರುಹಿರಿಯರು ಹಾಗೂ ತಂದೆ ತಾಯಿಗಳನ್ನು ಗೌರವಿಸಿ ಪೂಜಿಸುವ ಸಂಸ್ಕಾರವನ್ನು ಕಲಿಸುವ ಈ ವಿಶೇಷವಾದ ಕಾರ್ಯಕ್ರಮವು ಮಕ್ಕಳಿಗೆ ಬಾಲ್ಯದಿಂದಲೇ ನೈತಿಕ ಶಿಕ್ಷಣ ಹಾಗೂ ಸಂಸ್ಕಾರವನ್ನು ನೀಡುವ ಜಾಗೃತಿಯ ಕಾರ್ಯಕ್ರಮವಾಗಿದೆ ಎಂದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಕೆ.ಹರಿಚರಣ ತಿಲಕ್ ಮಾತನಾಡಿ, ಮಾನವನ ನಿರಂತರವಾದ ದೌರ್ಜನ್ಯ ದಬ್ಬಾಳಿಕೆಯಿಂದಾಗಿ ಮಾಲಿನ್ಯವಾಗುತ್ತಿದೆ. ನಗರೀಕರಣದ ಪ್ರಭಾವದಿಂದಾಗಿ ಗಿಡಮರಗಳನ್ನು ಕಡಿದು, ಕಾಡನ್ನು ನಾಶ ಮಾಡುತ್ತಿರುವುದರಿಂದ ಕಾಲಕಾಲಕ್ಕೆ ಮಳೆಯಾಗಿ ಉತ್ತಮವಾದ ಬೆಳೆಯಾಗದೆ ಸಂಕಷ್ಟಕ್ಕೆ ಸಿಲುಕಿ ನರಳಬೇಕಾಗಿದೆ ಆದ್ದರಿಂದ ಗಿಡಮರಗಳನ್ನು ನೆಟ್ಟು, ಅವನ್ನು ಮಕ್ಕಳಂತೆ ಪೋಷಿಸಿ ಆರೈಕೆ ಮಾಡುವ ಮೂಲಕ ಪರಿಸರ ಸಮತೋಲನವನ್ನು ಕಾಪಾಡಿ ನಮ್ಮ ಮುಂದಿನ ತಲೆಮಾರಿಗೆ ಉತ್ತಮ ಪರಿಸರವನ್ನು ಕಾಪಾಡಬೇಕಾಗುವುದು ಇಂದಿನ ಅಗತ್ಯವಾಗಿದೆ ಎಂದು ಹೇಳಿದರು.

ಪುರಸಭೆ ಮಾಜಿ ಸದಸ್ಯ ಕೆ.ಆರ್.ನೀಲಕಂಠ ಮಾತನಾಡಿ, ಇಂದಿನ ಮಕ್ಕಳೇ ನಾಳಿನ ಭವ್ಯ ಭಾರತದ ಸತ್ಪ್ರಜೆಗಳಾದ್ದರಿಂದ ನಾವು ಮಕ್ಕಳಿಗಾಗಿ ಆಸ್ತಿ ಅಂತಸ್ತನ್ನು ಸಂಪಾದನೆ ಮಾಡಿ ಕೂಡಿಡುವ ಬದಲಿಗೆ, ನಮ್ಮ ಮಕ್ಕಳಿಗೆ ಉತ್ತಮವಾದ ಸಂಸ್ಕಾರ ಹಾಗೂ ಶಿಕ್ಷಣವನ್ನು ಕೊಡಿಸಿ ಸಮಾಜದ ಮುಖ್ಯವಾಹಿನಿಗೆ ತಂದು ಸಾಧನೆ ಮಾಡುವಂತೆ ಬೆನ್ನು ತಟ್ಟಿ ಪ್ರೋತ್ಸಾಹಿಸುವ ಜೊತೆಗೆ, ಮಕ್ಕಳನ್ನೇ ಸಮಾಜಕ್ಕೆ ಆಸ್ತಿಯನ್ನಾಗಿ ಕೊಡುಗೆ ನೀಡಲು ದೃಢ ಸಂಕಲ್ಪ ಮಾಡಬೇಕು ಎಂದು ತಿಳಿಸಿದರು.

ತಾಲೂಕು ನಾಲ್ವಡಿ ಕೃಷ್ಣರಾಜ ಒಡೆಯರ್ ಪರಿಸರ ಜಾಗೃತಿ ವೇದಿಕೆಯ ಸಂಚಾಲಕ ಅಗ್ರಹಾರ ಬಾಚಹಳ್ಳಿ ಶ್ರೀನಿವಾಸ್, ಹೊನ್ನೇನಹಳ್ಳಿ ರವಿ, ಕಾಮನಹಳ್ಳಿ ಮಂಜುನಾಥ್, ಗಂಜಿಗೆರೆ ಮಹೇಶ್, ಕಾರ್ಯನಿರತ ಪತ್ರಕರ್ತರ ಸಂಘದ(ರಿ) ಅಧ್ಯಕ್ಷ ವಿ.ಲೋಕೇಶ್, ಬಿಜಿಎಸ್ ಶಾಲೆಯ ಮುಖ್ಯಸ್ಥ ಪುನೀತ್ ಕುಮಾರ್, ಸೇರಿದಂತೆ ಶಾಲಾ ಮಕ್ಕಳ ನೂರಾರು ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮರ–ಗಿಡ ನಾಶ ಮಾಡದೆ ಪ್ರಕೃತಿ ಉಳಿಸಿ



ಸ್ಟಾನ್ಫೋರ್ಡ್ ಪಬ್ಲಿಕ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಕಾರ್ಯದರ್ಶಿ ಕೆ.ವಿ.ಚೇತನ್ ಚಾಲನೆ ನೀಡಿದರು.

ಪಾಂಡವಪುರ: ಪರಿಸರ ಉಳಿಸಿದರೆ ನೈಸರ್ಗಿಕ ಗಾಳಿಯಿಂದ ಆರೋಗ್ಯಕ್ಕೆ ಸಹಕಾರಿಯಾಗಲಿದೆ ನಾವು ಮರ–ಗಿಡಗಳನ್ನು ನಾಶ ಮಾಡದೆ ಪ್ರಕೃತಿ ಉಳಿಸಿಕೊಳ್ಳಬೇಕೆಂದು ಕ್ಯಾತನಹಳ್ಳಿ ಸ್ಟಾನ್ಫೋರ್ಡ್ ಪಬ್ಲಿಕ್ ಶಾಲೆ ಕಾರ್ಯದರ್ಶಿ ಕೆ.ವಿ.ಚೇತನ್ ತಿಳಿಸಿದರು.

ಕ್ಯಾತನಹಳ್ಳಿ ಗ್ರಾಮದ ಸ್ಟಾನ್ಫೋರ್ಡ್ ಪಬ್ಲಿಕ್ ಶಾಲೆಯಲ್ಲಿ ವಿಶ್ವ ಪರಿಸದ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳೊಂದಿಗೆ ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು.

ಪರಿಸರವನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ತಿಳಿಸಿದ ಅವರು, ಹೆಚ್ಚು ಹೆಚ್ಚು ಗಿಡಗಳನ್ನು ನೆಟ್ಟು ಬೆಳೆಸುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಶಾಲೆಯ ಆಡಳಿತಾಧಿಕಾರಿ ಎಸ್.ಜಗದೀಶ್ ಮುಖ್ಯ ಶಿಕ್ಷಕಿ ಡಿ.ಕವಿತಾ, ಮೇಲ್ವಿಚಾರಕಿ ಸುಮಾ ಹಾಗೂ ಎಲ್ಲಾ ಶಿಕ್ಷಕ–ಶಿಕ್ಷಕಿಯರು ಉಪಸ್ಥಿತರಿದ್ದರು.

ವಿಶ್ವ ಪರಿಸರ ದಿನದ ಅಂಗವಾಗಿ ನಡೆದ ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಪರಿಸರ ಪ್ರೇಮ ಮತ್ತು ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸುವಲ್ಲಿ ಯಶಸ್ವಿಯಾಯಿತು.

ಗಂಗಾಧರ್ ವಿರುದ್ಧ ಅನಗತ್ಯ ಟೀಕೆ ಖಂಡನಾರ್ಹ

ಮಂಡ್ಯ: ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ವಿರುದ್ಧ ಅನಗತ್ಯ ಟೀಕೆ ಮಾಡುತ್ತಿರುವುದು ಖಂಡನಾರ್ಹ ಎಂದು ಕಿಸಾನ್ ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷ ಜೆ.ಮೋಹನ್‌ಕುಮಾರ್ ತಿಳಿಸಿದರು.

ಜೆಡಿಎಸ್ ಯುವ ಘಟಕದ ಅಧ್ಯಕ್ಷ ಕಂಸಾಗರ ರವಿ ಅವರು ಗಂಗಾಧರ್ ಅವರ ಬಗ್ಗೆ ವೈಯಕ್ತಿಕ ಟೀಕೆ ಮಾಡುವ ಮಟ್ಟಕ್ಕೆ ಇಳಿಯಬಾರದು. ಜೆಡಿಎಸ್ ಅಧ್ಯಕ್ಷರ ಹೇಳಿಕೆಗೆ ವಿಚಾರ ಹೊರತು ಪಡಿಸಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಪ್ರತಿಕ್ರಿಯೆ ಬಗ್ಗೆ ಮಾತನಾಡಿ ಪಲಾಯನ ಮಾಡಿದ್ದು, ಯಾರನ್ನೋ ಓಲೈಸಲು ಮನಬಂದಂತೆ ಮಾತನಾಡುವುದನ್ನು ನಿಲ್ಲಿಸುವಂತೆ ಸುದ್ದಿಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

ಒಂದನೇ ಪುಟದಿಂದ

ದುಬಾರೆ ದುರಂತ ಪ್ರವಾಸೋದ್ಯಮಕ್ಕೆ ಭಾರೀ ಪೆಟ್ಟು

ಬೆಳವಣಿಗೆಗೆ ಕುಂದು ತರುತ್ತದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಪ್ರವಾಸೋದ್ಯಮದಲ್ಲಿ ಇಂತಹ ಯಾವುದೇ ದುರ್ಘಟನೆಗೆ ಅವಕಾಶ ನೀಡದೆ ಅಭಿವೃದ್ಧಿ ಸಾಧಿಸಬೇಕು ಎಂದು ಸಲಹೆ ನೀಡಿದರು.

ಇಚ್ಛಾಸಕ್ತಿ ಬಹಳ ಮುಖ್ಯ: ಮೈಸೂರಿನ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗೆ ಇಚ್ಛಾಸಕ್ತಿ ಇದ್ದಾಗ ಮಾತ್ರ ಮೈಸೂರಿನ ಪ್ರವಾಸೋದ್ಯಮ ಬೆಳವಣಿಗೆ ಸಾಧ್ಯವಾಗುತ್ತದೆ. ಪ್ರವಾಸೋದ್ಯಮ ಇಲಾಖೆಯ ಮೈಸೂರಿನ ಜಂಟಿ ನಿರ್ದೇಶಕರು ಎಂಟು ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಯ ಹೊಣೆ ಹೊತ್ತಿರುತ್ತಾರೆ. ನಾನು ಜಂಟಿ ನಿರ್ದೇಶಕರಾಗಿ ಇಲ್ಲಿಗೆ ವರ್ಗಾವಣೆಗೊಂಡಾಗ ಇಲ್ಲಿನ ಅವ್ಯವಸ್ಥೆ ನೋಡಿ ನನಗೆ ಆಘಾತವಾಯಿತು. ಕೇವಲ 10X10 ಅಳತೆಯ ಕಚೇರಿ, ಒಬ್ಬ ಸಹಾಯಕ ನಿರ್ದೇಶಕ, ನಾಲ್ವರು ಹೊರಗುತ್ತಿಗೆ ನೌಕರರು ಬಿಟ್ಟು ಓಡಾಡಲು ಒಂದು ಸರ್ಕಾರಿ ವಾಹನ ಕೂಡ ಇರಲಿಲ್ಲ. ಪ್ರವಾಸೋದ್ಯಮದ ವೆಬ್‌ಸೈಟ್‌ನಲ್ಲಿ ಏನೂ ಅಪ್‌ಡೇಟ್ ಆಗಿರಲಿಲ್ಲ ಎಂದು ತಾವು ಜಂಟಿ ನಿರ್ದೇಶಕರಾಗಿದ್ದ ಸಮಯದಲ್ಲಿ ಎದುರಿಸಿದ ಸವಾಲು, ಅವುಗಳ ಮೆಟ್ಟಿ ತಂದ ಸುಧಾರಣೆಗಳನ್ನು ಹಂಚಿಕೊಂಡರು.

ಅಧಿಕಾರಿಗಳು ಎದೆಗುಂದಬಾರದು: ನಾನು ಅಧಿಕಾರ ವಹಿಸಿಕೊಂಡ ನಂತರ ವೆಬ್‌ಸೈಟ್‌ನಲ್ಲಿರುವ ತಾಜಾ ಸಂಗತಿಗಳ ಅಪ್‌ಡೇಟ್ ಮಾಡಿದೆ. ಇನ್ನು ಬಹಳಷ್ಟು ಸುಧಾರಣೆ ತಂದೆ. ಮೈಸೂರಿನ ಸ್ಟೇಕ್ ಹೋಲ್ಡರ್‌ಗಳ ಸಮಾವೇಶ ನಡೆಸಿದೆ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರವಾಸೋದ್ಯಮದ ಅಭಿವೃದ್ಧಿಗೆ ಶ್ರಮಿಸಿದೆ. ಹಾಗಾಗಿ ಪ್ರವಾಸೋದ್ಯಮ ಇಲಾಖೆಯಲ್ಲಿ ಸೌಲಭ್ಯಗಳಿಲ್ಲ ಎಂದು ಅಧಿಕಾರಿಗಳು ಎದೆಗುಂದದೆ ಸವಾಲು ಎದುರಿಸಬೇಕು. ಈ ಮೂಲಕ ಪ್ರವಾಸೋದ್ಯಮದಲ್ಲಿ ಬೆಳವಣಿಗೆ ಸಾಧಿಸಬೇಕು. ಇಚ್ಛಾಸಕ್ತಿ ಕೊರತೆ ಇದ್ದರೆ ಮೈಸೂರು ಪ್ರವಾಸೋದ್ಯಮದ ಬೆಳವಣಿಗೆ ಅಸಾಧ್ಯ ಎಂದು ಅಭಿಪ್ರಾಯಪಟ್ಟರು.

ಮೈಸೂರಿನ ಪ್ರವಾಸೋದ್ಯಮದ ಅಭಿವೃದ್ಧಿಗೆ ಪತ್ರಿಕೆಗಳ ಪಾತ್ರ ಬಹು ದೊಡ್ಡದು. ಪ್ರಾಯಶಃ ಬೇರೆ ಯಾವುದೇ ಇಲಾಖೆಗೂ ನೀಡದ ಪ್ರಚಾರವನ್ನು ಪ್ರವಾಸೋದ್ಯಮ ಇಲಾಖೆಗೆ ನೀಡಿದೆ ಎಂದು ಪ್ರಶಂಸಿಸಿದರು.

ಪರಂಪರೆ, ಸಂಸ್ಕೃತಿ ಹಾಗೂ ಆಧುನಿಕ ಪ್ರವಾಸೋದ್ಯಮವನ್ನು ಯಶಸ್ವಿಯಾಗಿ ಸಂಯೋಜಿಸುವ ಮಾದರಿ ತಾಣವಾಗಿರುವ ಮೈಸೂರು ಇತ್ತೀಚೆಗೆ ದೇಶ–ವಿದೇಶದ ಯೋಗಾಸಕ್ತರನ್ನು ಆಕರ್ಷಿಸುತ್ತಿದೆ. ಪ್ರತಿ ವರ್ಷ ಮೈಸೂರಿಗೆ 28 ಸಾವಿರ ಮಂದಿ ದೇಶ–ವಿದೇಶದ ಜನರು ಯೋಗ ಕಲಿಯಲು ಬರುತ್ತಾರೆ. ಈ ಮೂಲಕ ಮೈಸೂರಿನ ಪ್ರವಾಸೋದ್ಯದ ಬೆಳವಣಿಗೆಯನ್ನು ಅಗ್ರ ಸ್ಥಾನಕ್ಕೆ ಕೊಂಡೊಯ್ಯಬೇಕು ಎಂದು ಸಲಹೆ ನೀಡಿದರು.

2024 ರಲ್ಲಿ ಭಾರತವು 10 ಮಿಲಿಯನ್ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಿದೆ. ಭಾರತದ ಜಿಡಿಪಿಯಲ್ಲಿ ಶೇಕಡ 6.6 ರಷ್ಟು ಪಾಲು ನೀಡಿದೆ. 46 ಮಿಲಿಯನ್ ಉದ್ಯೋಗ ಸೃಷ್ಟಿ ಮಾಡಿದೆ. ಈ ಮೂಲಕ ಭಾರತದ ಆರ್ಥಿಕತೆಗೆ 249 ಶತಕೋಟಿ ಡಾಲರ್ ಕೊಡುಗೆ ನೀಡಿದೆ ಎಂದು ಭಾರತದ ಪ್ರವಾಸೋದ್ಯಮದ ಬೆಳವಣಿಗೆ ಕುರಿತಂತೆ ಸವಿತಾ ಅವರು ಅಂಕಿ ಅಂಶಗಳ ಸಹಿತ ವಿವರಣೆ ನೀಡಿದರು.

ಪಾಸಿಟಿವ್ ಪ್ರಚಾರ ಮಾಡಿ: ಯುವ ಪೀಳಿಗೆ ಸೋಷಿಯಲ್ ಮೀಡಿಯಾವನ್ನು ಹೆಚ್ಚು ಬಳಕೆ ಮಾಡುತ್ತಾರೆ. ಮೈಸೂರಿನ ಪ್ರವಾಸೋದ್ಯಮದ ಬಗ್ಗೆ ಅವಶ್ಯವಿರುವುದನ್ನು ಪೋಸ್ಟ್ ಮಾಡಿ. ಆದರೆ ಎಂದೂ ನಕರಾತ್ಮಕ ಪ್ರಚಾರ(ನೆಗೆಟಿವ್ ಪಬ್ಲಿಸಿಟಿ)ಕ್ಕೆ ಅವಕಾಶ ಮಾಡಿಕೊಡಬಾರದು. ಪಾಸಿಟಿವ್ ಪ್ರಚಾರದ ಮೂಲಕ ಮೈಸೂರಿನ ಪ್ರವಾಸೋದ್ಯಮದ ಬೆಳವಣಿಗೆಗೆ ಕಾರಣೀಭೂತರಾಗಿ ಎಂದು ಮೈಸೂರು ಟ್ರಾವೆಲ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಸಲಹೆ ನೀಡಿದರು.

ಚರ್ಚೆ ಅಗತ್ಯ: ಮೈಸೂರಿನ ಪ್ರವಾಸೋದ್ಯಮದ ಅಭಿವೃದ್ಧಿಗೆ ಸರ್ಕಾರ ಇಲ್ಲಿನ ಉದ್ಯಮಿಗಳ ಚರ್ಚೆ ಮಾಡಬೇಕು. ಅವರ ಸಲಹೆಗಳನ್ನು ಪರಿಗಣಿಸಿ ಪ್ರವಾಸೋದ್ಯಮದ ಬೆಳವಣಿಗೆ ಸಾಧಿಸಬೇಕು. ಈ ಸಂಬಂಧ ಅಭಿಯಾನ ಆರಂಭಿಸಬೇಕು. ಈ ಎಲ್ಲಾ ಕಾರ್ಯವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಮರ್ಥ ಅಧಿಕಾರಿಯನ್ನು ನಿಯೋಜಿಸಬೇಕು ಎಂದು ಹೇಳಿದರು.

ಟ್ರಾವೆಲ್ ಡೆಸ್ಕ್ ಇಲ್ಲ: ಮೈಸೂರಿನ ಪ್ರವಾಸಿತಾಣ, ಹೋಟೆಲ್ ಸೇರಿದಂತೆ ಇತರೆ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲು ಮೈಸೂರು ವಿಮಾನ ನಿಲ್ದಾಣದಲ್ಲಿ ಟ್ರಾವೆಲ್ ಡೆಸ್ಕ್ ಇಲ್ಲ. ಇದರಿಂದ ಸೂಕ್ತ ಮಾಹಿತಿ ಇಲ್ಲದೆ ಪ್ರವಾಸಿಗರು ಪರದಾಡುವ ಪರಿಸ್ಥಿತಿ ಎದುರಾಗಿದೆ. ಕೆಲವೊಮ್ಮೆ ಮೋಸ ಹೋಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕಿ ಉಷಾ ಕುಮಾರಿ ಸಲಹೆ ನೀಡಿದರು.

ದೂರದೃಷ್ಟಿ ಅಧಿಕಾರಿ ಅಗತ್ಯ: ಮೈಸೂರಿನ ಪ್ರವಾಸೋದ್ಯಮದ ಅಭಿವೃದ್ಧಿಗೆ ದೂರದೃಷ್ಟಿ ಇರುವ ಅಧಿಕಾರಿ ಹಾಗೂ ಜನಪ್ರತಿನಿಧಿ ಅಗತ್ಯ. ಆಗ ಮಾತ್ರ ಇಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಮೈಸೂರಿನ ಪಾರಂಪರಿಕತೆ ಸಂರಕ್ಷಣೆ ಮಾಡುವ ಜೊತೆಗೆ ನಗರವನ್ನು ಆಧುನಿಕವಾಗಿ ಅಭಿವೃದ್ಧಿ ಮಾಡಬೇಕು ಎಂದು ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ ಕೆ.ಬಿ.ಲಿಂಗರಾಜು ಅಭಿಪ್ರಾಯಪಟ್ಟರು. ಮೈಸೂರಿನ ಮಾನಸ ಗಂಗೋತ್ರಿಯ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಪ್ರೊ.ಸ್ವಪ್ನ ಅವರು ಗಣ್ಯರೊಂದಿಗೆ ಸಂವಾದ ನಡೆಸಿದರು.

ಮೂಲ ಸೌಕರ್ಯ ಕಲ್ಪಿಸದೇ ಪ್ರವಾಸಿಗರ ಆಕರ್ಷಣೆ ಅಸಾಧ್ಯ

ಮೈಸೂರು: 'ಪ್ರವಾಸೋದ್ಯಮ ಮತ್ತು ಪತ್ರಿಕೋದ್ಯಮ' ಕುರಿತು ಮಾತನಾಡಿದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕ ವಿಕ್ರಂ ಮುತ್ತಣ್ಣ ಅವರು, ಗುಣಮಟ್ಟದ ರಸ್ತೆ, ಕುಡಿಯುವ ನೀರು, ಸ್ವಚ್ಛತೆ, ಆರೋಗ್ಯಕರ ವಾತಾವರಣ, ಸೂಕ್ತ ಮಾಹಿತಿ, ಪ್ರಚಾರ ಸೇರಿದಂತೆ ಇತರೆ ಮೂಲಭೂತ ಸೌಕರ್ಯ ನೀಡದೆ ಮೈಸೂರಿನ ಪ್ರವಾಸೋದ್ಯಮದ ಬೆಳವಣಿಗೆ ಅಸಾಧ್ಯ ಎಂದು ಅಭಿಪ್ರಾಯಪಟ್ಟರು.

ದೇಶ– ವಿದೇಶದ ಪ್ರವಾಸಿಗರು ಮೈಸೂರಿಗೆ ಬರುತ್ತಾರೆ. ಇಲ್ಲಿ ಕನಿಷ್ಠ ಮೂಲ ಸೌಕರ್ಯವಿಲ್ಲ ಎಂದು ಮನಗಂಡರೆ ಅವರು ಬೇರೆ ಪ್ರವಾಸಿತಾಣದತ್ತ ಆಕರ್ಷಣೆಗೊಳ್ಳುತ್ತಾರೆ. ಹಾಗಾಗಿ ಮೈಸೂರಿನ ಪ್ರವಾಸೋದ್ಯಮ ಬೆಳವಣಿಗೆಗೆ ಸಮರ್ಥ ಅಧಿಕಾರಿಯ ಅವಶ್ಯವಿದೆ ಎಂದು ಹೇಳಿದರು. ಮೈಸೂರಿನಲ್ಲಿ ಗರಿಷ್ಠ ಮೂಲ ಸೌಕರ್ಯವಿದೆ ಎಂದು ಹೇಳಲಾಗುತ್ತಿದೆ. ಆದರೆ ಇಲ್ಲಿಗೆ ಬಂದ ನಂತರ ಅವರ ನಿರೀಕ್ಷೆ ಹುಸಿಯಾದರೆ ನೆಗೆಟಿವ್ ಪ್ರಚಾರವಾಗುತ್ತದೆ. ಇದು ಇಲ್ಲಿನ ಪ್ರವಾಸೋದ್ಯಮದ ಬೆಳವಣಿಗೆ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ತಿಳಿಸಿದರು.

ದೇಶದ ಹಲವು ಪ್ರಖ್ಯಾತ ಪ್ರವಾಸಿ ತಾಣಗಳಂತೆ ಮೈಸೂರಿನಲ್ಲೂ ಗುಣಮಟ್ಟದ ಸೌಲಭ್ಯ ನೀಡಬೇಕು. ಇದರಿಂದ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತದೆ ಎಂದು ವಿಕ್ರಂ ಮುತ್ತಣ್ಣ ಅಭಿಪ್ರಾಯ ವ್ಯಕ್ತಪಡಿಸಿದರು.

ರಾಜೀನಾಮೆ ಹಿಂಪಡೆದಿದ್ದಾರೆ

ಸಣ್ಣ ಅಸಮಾಧಾನವನ್ನು ಬಿಜೆಪಿ ರಾಜಕೀಯ ಲಾಭಕ್ಕಾಗಿ ಬಳಸಿಕೊಂಡಿತು ಎಂದು ಹೇಳಿದ್ದಾರೆ. ರಾಮಲಿಂಗಾರೆಡ್ಡಿ ಪಕ್ಷದ ಹಿರಿಯ ನಾಯಕರಾಗಿದ್ದು, ಸಮಸ್ಯೆ ಬಗೆಹರಿಸಲು ಇಡೀ ನಾಯಕತ್ವ ಪ್ರಯತ್ನಪಟ್ಟಿತು ಎಂದು ಹೇಳಿದ್ದಾರೆ.

ರಾಮಲಿಂಗಾರೆಡ್ಡಿಯವರು ಕಾಂಗ್ರೆಸ್ ಪಕ್ಷದ ಆಸ್ತಿ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ್ ಹಾಗೂ ನಾನು ಅವರೊಂದಿಗೆ ಮಾತನಾಡಿದ್ದೇವೆ. ರಾಜೀನಾಮೆ ಹಿಂಪಡೆದಿದ್ದರ ಬಗ್ಗೆ ಈಗಾಗಲೇ ಅವರು ನಿಮಗೆ ಮಾಹಿತಿ ನೀಡಿದ್ದಾರೆ ಎಂದು ಅಂದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ.

ಸಂಪುಟ ಖಾತೆ ಕ್ಯಾತೆ ನಡುವೆಯೇ ಸಚಿವರ 2ನೇ ಪಟ್ಟಿ ತಯಾರಿ

ಹೈಕಮಾಂಡ್ ಕೃಪಾಕಟಾಕ್ಷ ಸಿಕ್ಕಿದ್ರೆ ಮಾತ್ರ ಜಮೀರ್‌ಗೆ ಸ್ಥಾನ ಸಿಗಲಿದೆ. ಇಲ್ಲದೆ ಹೋದರೆ ಸಂಪುಟದಿಂದ ಜಮೀರ್ ಅವರನ್ನು ಕೈಬಿಡಬಹುದು.

ಜಮೀರ್ ಸಂಪುಟ ಸೇರ್ಪಡೆಗೆ ಹೆಚ್ಚಿದ ಒತ್ತಡ: ಇನ್ನು ಮಾಜಿ ಸಚಿವ ಜಮೀರ್‌ಗೆ ಸಂಪುಟದಲ್ಲಿ ಸ್ಥಾನ ನೀಡಬೇಕೆಂದು ಬೆಂಗಳೂರಿನ ಮೈಸೂರು ರಸ್ತೆಯ ಸಿರ್ಸಿ ಸರ್ಕಲ್‌ನಲ್ಲಿ ಪ್ರತಿಭಟನೆ ಮಥಲಾಯ್ತು. ಜಮೀರ್ ಅಹ್ಮದ್‌ಗೆ ಅನ್ಯಾಯ ಆಗಿದೆ. ನ್ಯಾಯ ಸಿಗಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದ್ದರು. ಈ ವೇಳೆ ರಸ್ತೆಯಲ್ಲಿ ಪ್ರತಿಭಟನೆ ಮಾಡುತ್ತಿದ್ದವರನ್ನ ಪೊಲೀಸರು ವಶಕ್ಕೆ ಪಡೆದುಕೊಂಡರು. ಅತ್ತ ರಾಯಚೂರಿನ ಅಂಬೇಡ್ಕರ್ ವೃತ್ತದಲ್ಲಿ ಮುಸ್ಲಿಂ ಸಮಾಜದವರು ಹೋರಾಟ ನಡೆಸಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಗೆ ಮುಸ್ಲಿಂ ಸಮುದಾಯ ದೊಡ್ಡ ಕೊಡುಗೆ ನೀಡಿದೆ. ಸರ್ಕಾರ ಬಂದಾಗಿನಿಂದ ಮುಸ್ಲಿಂ ಸಮುದಾಯಕ್ಕೆ ಸರಿಯಾದ ರಾಜಕೀಯ ಸ್ಥಾನಮಾನ ಸಿಕ್ಕಿಲ್ಲ. ಮುಸ್ಲಿಂಮರ ಮೇಲೆ ಸಣ್ಣಪುಟ್ಟ ಅನುಮಾನಗಳಿಂದ ಪಕ್ಷದ ಮುಖಂಡರ ಮೇಲೆ ಕ್ರಮ ಜರುಗಿಸಲಾಗುತ್ತಿದೆ. ಜಮೀರ್ ವಿರುದ್ಧ ಆಡಿಯೋ ಒಂದು ಷಡ್ಯಂತ್ರ ಡಿಕೆ ಸಂಪುಟದಲ್ಲಿ ಜಮೀರ್‌ಗೆ ಸ್ಥಾನ ನೀಡಬೇಕೆಂದು ಹೋರಾಟ ನಡೆಸಿದರು. ಇನ್ನು ಚಿತ್ರದುರ್ಗದಲ್ಲಿ ಜಮೀರ್ ಅಭಿಮಾನಿ ಬಳಗ ಸಹ ಪ್ರತಿಭಟನೆ ನಡೆಸಿತು. ಓಬವ್ವ ವೃತ್ತದಲ್ಲಿ ಜಮೀರ್ ಅಭಿಮಾನಿಗಳು ಧರಣಿ ಮಾಡಿದರು.

ಎರಡನೇ ಪಟ್ಟಿಯಲ್ಲಿ ಡಿಕೆಶಿ ಸಂಪುಟ ಸೇರಲು ಲಕ್ಷ್ಮಣ ಸವದಿ, ಲಕ್ಷ್ಮಿ ಹೆಬ್ಬಾಳ್ಕರ್ ಕಸರತ್ತು ನಡೆಸುತ್ತಿದ್ದಾರೆ. ಹೈಕಮಾಂಡ್ ಮಟ್ಟದಲ್ಲಿ ಇಬ್ಬರು ನಾಯಕರಿಂದಲೂ ಲಾಬಿ ಮಾಡಲಾಗುತ್ತಿದೆ. ಕಿತ್ತೂರು ಕರ್ನಾಟಕದಲ್ಲಿ ತಮ್ಮದೇ ಪ್ರಭಾವ ಹೊಂದಿರುವ ಲಕ್ಷ್ಮಣ ಸವದಿ ಒಂದೆಡೆ ಲಾಬಿ ಮಾಡುತ್ತಿದ್ದರೆ, ಮತ್ತೊಂದೆಡೆ ಸಿಎಂ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿರುವ ಹೆಬ್ಬಾಳ್ಕರ್ ಹೈಕಮಾಂಡ್ ಮಟ್ಟದಲ್ಲಿ ಒತ್ತಡ ಹಾಕುತ್ತಿದ್ದಾರೆ ಎನ್ನಲಾಗುತ್ತಿದೆ. 20 ಸಚಿವ ಸ್ಥಾನಕ್ಕೆ 40ಕ್ಕೂ ಹೆಚ್ಚು ಶಾಸಕರು ಲಾಬಿ ಶುರು ಮಾಡಿದ್ದಾರೆ. ಹೈಕಮಾಂಡ್ ನಾಯಕರು, ಸಿದ್ದರಾಮಯ್ಯ, ಸಿಎಂ ಡಿಕೆ ಶಿವಕುಮಾರ್ ಭೇಟಿ ಸಂಪುಟಕ್ಕೆ ಸೇರಲು ಸರ್ಕಸ್ ಮಾಡ್ತಾ ಇದ್ದಾರೆ. ಕಾಂಗ್ರೆಸ್ ವಲಯದಲ್ಲಿ ಎರಡನೇ ಪಟ್ಟಿ ರಾಹುಲ್ ಗಾಂಧಿ ಆಯ್ಕೆಯೆ ಅಂತಿಮ ಅಂತಲೂ ಚರ್ಚೆ ಆಗ್ತಿದೆ. ಹೈಕಮಾಂಡ್ ಯಾರಿಗೆ ಎರಡನೇ ಹಂತದಲ್ಲಿ ವರ ಕೊಡುತ್ತೆ ಕಾದು ನೋಡಬೇಕು.

ರಾಮಲಿಂಗಾರೆಡ್ಡಿ ರಾಜೀನಾಮೆ ವಾಪಸ್

ಮುಂಬರುವ ಗ್ರೇಟರ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ನಿಮ್ಮ ಅಭಿಪ್ರಾಯ ಗಳಿಗೆ ಹೆಚ್ಚಿನ ಮಾನ್ಯತೆ ನೀಡಲಾಗುವುದು ಎಂದು ಭರವಸೆ ನೀಡುವ ಮೂಲಕ ರಾಮಲಿಂಗಾರೆಡ್ಡಿ ಅವರ ಅಸಮಾಧಾನ ತಣಿಸುವ ಪ್ರಯತ್ನ ನಡೆಸಿದರು. ಇದಾದ ಬಳಿಕ ಖಾಸಗಿ ಹೋಟೆಲ್ ನಲ್ಲಿ ತಂಗಿದ್ದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ನಾಯಕ ರಣದೀಪ್ ಸಿಂಗ್ ಸುರ್ಜೇವಾಲಾ ಅವರೊಂದಿಗೆ ಮಾತುಕತೆ ನಡೆಸಿದರು. ಈ ವೇಳೆ ಹೈಕಮಾಂಡ್ ನೀಡಿದ ಸಲಹೆಗೆ ಸಂಬಂಧಿಸಿದ ರಾಮಲಿಂಗ ರೆಡ್ಡಿ ರಾಜಿನಾಮೆಯ ತಮ್ಮ ನಿರ್ಧಾರ ವಾಪಾಸ್ ಪಡೆಯುವುದಾಗಿ ತಿಳಿಸಿದರು.

ಗೊಂದಲಕ್ಕೆ ತೆರೆ: ಇದಾದ ಬಳಿಕ ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ಅಧ್ಯಕ್ಷ ಬಿಕೆ ಹರಿಪ್ರಸಾದ್ ಅವರೊಂದಿಗೆ ಸುದ್ದಿಗಾರರ ಜೊತೆ ಮಾತನಾಡಿದ ಸುರ್ಜೇವಾಲ ರಾಜ್ಯ ಕಾಂಗ್ರೆಸ್‌ನಲ್ಲಿ ಉಂಟಾಗಿದ್ದ ಗೊಂದಲ ಬಗೆಹರಿದಿದೆ. ಬಿಜೆಪಿ ನಾಯಕರು ಅನಗತ್ಯ ಕಾರಣಕ್ಕಾಗಿ ಗೊಂದಲ ಮೂಡಿಸಲು ಪ್ರಯತ್ನ ನಡೆಸಿದರು. ಆದರೆ ಕಾಂಗ್ರೆಸ್ ಒಂದು ಕುಟುಂಬದ ರೀತಿಯಲ್ಲಿ ವರ್ತಿಸುವ ಮೂಲಕ ಇವರ ಪ್ರಯತ್ನವನ್ನು ಮೂಲೆಗುಂಪು ಮಾಡಿತು ಎಂದು ಹೇಳಿದರು.

ರಾಮಲಿಂಗಾರೆಡ್ಡಿ ಅವರು ಕಾಂಗ್ರೆಸ್ ಪಕ್ಷದ ಅತ್ಯಂತ ಜವಾಬ್ದಾರಿಯುತ ಹಿರಿಯ ನಾಯಕ. ಎಂಟು ಬಾರಿ ಶಾಸಕರಾಗಿ ಆಯ್ಕೆಯಾದವರು ಪಕ್ಷದ ಅಧ್ಯಕ್ಷ ಬಿಕೆ ಹರಿಪ್ರಸಾದ್ ಅವರೊಂದಿಗೆ ವಿದ್ಯಾರ್ಥಿ ಕಾಂಗ್ರೆಸ್‌ನಿಂದ ರಾಜಕಾರಣಕ್ಕೆ ಧುಮುಕಿದ ಅವರು ಇಂದಿಗೂ ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ ಕಾಂಗ್ರೆಸ್ ಪಕ್ಷದ ಪಾಲಿಗೆ ಅವರು ಅಮೂಲ್ಯವಾದ ಆಸ್ತಿ ಹೀಗಾಗಿ ಅವರು ಹೈಕಮಾಂಡ್ ಮಾತಿಗೆ ಒಪ್ಪಿ ತಮ್ಮ ರಾಜೀನಾಮೆ ನಿರ್ಧಾರವನ್ನು ಬದಲಾಯಿಸಿದ್ದಾರೆ ಅಲ್ಲದೆ ತಾವು ಸಲ್ಲಿಸಿದ್ದ ರಾಜೀನಾಮೆ ಪತ್ರವನ್ನು ವಾಪಸ್ ಪಡೆದಿದ್ದಾರೆ ಎಂದು ತಿಳಿಸಿದರು.

ನಾನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ಅವರೊಂದಿಗೆ ರಾಮಲಿಂಗ ರೆಡ್ಡಿ ಅವರ ಜೊತೆ ಮಾತನಾಡಿ ರಾಜೀನಾಮೆ ವಾಪಸ್ ಪಡೆಯಲು ಕೋರಿದೆವು ಅದಕ್ಕೆ ಸಮ್ಮತಿಸಿದ ಅವರು ರಾಜೀನಾಮೆ ವಾಪಸ್ ಪಡೆದಿದ್ದಾರೆ ಎಂದರು. ಕಾಂಗ್ರೆಸ್ ಭದ್ರಕೋಟೆಯಲ್ಲಿ ಬಿರುಕು ಮೂಡಿದೆ ಎಂದು ಸಂಭ್ರಮಿಸುತ್ತಿದ್ದ ಬಿಜೆಪಿಗೆ ಇದರಿಂದ ಭ್ರಮನಿರಸನವಾಗಿದೆ. ಎಲ್ಲಾ ಕಾಂಗ್ರೆಸ್ ನಾಯಕರು ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಅಂಗೀಕಾರ ಇಲ್ಲ: ಇದಕ್ಕೂ ಮುನ್ನ ರಾಮಲಿಂಗಾರೆಡ್ಡಿ ಅವರ ಜೊತೆ ನಡೆಸಿದ ಸಂಧಾನ ಕುರಿತಾಗಿ ಮಾಹಿತಿ ನೀಡಿದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಯಾವುದೇ ಕಾರಣಕ್ಕೂ ತಾವು ರಾಮಲಿಂಗಾರೆಡ್ಡಿ ಅವರ ರಾಜೀನಾಮೆ ಅಂಗೀಕರಿಸು ವುದಿಲ್ಲ ಅವರು ತಮ್ಮ ನಿರ್ಧಾರ ವಾಪಾಸ್ ಪಡೆಯಲಿದ್ದಾರೆ ಎಂದು ಹೇಳಿದರು.

ಹಿರಿಯರಾದ ರಾಮಲಿಂಗಾರೆಡ್ಡಿ ಅವರ ಜೊತೆ ಮಾತುಕತೆ ನಡೆಸಿದ್ದೇನೆ ಈ ವೇಳೆ ಹಲವಾರು ವಿಷಯಗಳು ಚರ್ಚೆ ಮಾಡಿದ್ದಾರೆ ಅವುಗಳನ್ನು ಈಗ ಬಹಿರಂಗವಾಗಿ ಚರ್ಚಿಸುವುದಿಲ್ಲ ಅವರು ತಮ್ಮ ನಿರ್ಧಾರ ಬದಲಿಸಿ ಮಂತ್ರಿಯಾಗಿ ಮುಂದುವರೆಯಲಿದ್ದಾರೆ ಎಂದು ಹೇಳಿದರು.

ಸಿಇಟಿ ಫಲಿತಾಂಶ ಪ್ರಕಟ: ಬಾಲಕಿಯರೇ ಮೇಲುಗೈ

ಕೆಎಂಡಬ್ಲ್ಯುಎ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಸೃಜನ್ ದ್ವಿತೀಯ ಸ್ಥಾನ ಪಡೆದರೆ, ಜಯನಗರದ ಆರ್ ವಿ ಪಿಯು ಕಾಲೇಜಿನ ನೀನಾದ್ ವಶಿಷ್ ಮೂರನೇ ಸ್ಥಾನ ಗಳಿಸಿದ್ದಾರೆ ಎಂದು ತಿಳಿಸಿದರು.

ಮಧ್ಯಾಹ್ನ 2 ಗಂಟೆಯ ಆನ್‌ಲೈನ್‌ನಲ್ಲಿ ಫಲಿತಾಂಶ ವೀಕ್ಷಿಸಲು ಅವಕಾಶ ಕಲ್ಪಿಸಲಾಯಿತು. ಈ ಬಾರಿ ರಾಜ್ಯಾದ್ಯಂತ ಏಪ್ರಿಲ್ 22ರಿಂದ ಮೂರು ದಿನಗಳ ಕಾಲ ನಡೆದ ಸಿಇಟಿ ನಡೆದು, ಒಟ್ಟು 3,09,014 ವಿದ್ಯಾರ್ಥಿಗಳು ಹಾಜರಾಗಿದ್ದರು. ಪರೀಕ್ಷೆಯನ್ನು ರಾಜ್ಯದ 745 ಕೇಂದ್ರಗಳಲ್ಲಿ ನಡೆಸಲಾಗಿದ್ದು, ಪಾರದರ್ಶಕತೆಗಾಗಿ 15,265 ಸಿಸಿಟಿವಿ ಕ್ಯಾಮರಾಗಳು, ವೆಬ್ ಕಾಸ್ಟಿಂಗ್ ಹಾಗೂ ಮುಖಚಹರೆ ಪತ್ತೆಹಚ್ಚುವ ವ್ಯವಸ್ಥೆ ಅಳವಡಿಸಲಾಗಿತ್ತು.

ಪಶುಸಂಗೋಪನೆ, ನರ್ಸಿಂಗ್, ಬಿ.ಫಾರ್ಮಾದಲ್ಲಿ ಶಿವನಗರದ ಬೇಸ್ ಪಿಯು ಕಾಲೇಜಿನ ನಯನ ಗೋಪಿ ಪ್ರಥಮ ಸ್ಥಾನ ಪಡೆದಿದ್ದಾರೆ.

ದಾವಣಗೆರೆಯ ಸರ್ ಎಂ.ವಿ. ಪಿಯು ಕಾಲೇಜಿನ ಅಮೂಲ್ಯ ಎಸ್. ದ್ವಿತೀಯ ಸ್ಥಾನ ಪಡೆದರೆ, ಜಯನಗರದ ಆರ್.ವಿ.ಪಿಯು ಕಾಲೇಜಿನ ಋತ್ವಿಕ್ ಕುಮಾರ್(ನರ್ಸಿಂಗ್, ಪಶು ಸಂಗೋಪನೆ) ಮೂರನೇ ಸ್ಥಾನ ಗಳಿಸಿದ್ದಾರೆ.ಬಿ ಫಾರ್ಮಾ ಹಾಗೂ ಡಿ ಫಾರ್ಮಾ, ಯೋಗ ಮತ್ತು ನ್ಯಾಚುರೋಪತಿಯಲ್ಲಿ ದಾವಣಗೆರೆಯ ಚೈತನ್ಯ ಪಿಯು ಕಾಲೇಜಿನ ಸುಚಿತ ಎಂ. ತೃತೀಯ ಸ್ಥಾನ ಗಳಿಸಿದ್ದಾರೆ.


ಬಿಎಸ್ಸಿ ಅಗ್ರಿಕಲ್ಚರ್ (ಫಾರ್ಮಾ) ವಿಭಾಗದಲ್ಲಿ ಆರ್.ವಿ.ಪಿಯು ಕಾಲೇಜಿನ ನಿನಾದ್ ವಸಿಷ್ಠ ಮೊದಲ ರ್‍ಯಾಂಕ್, ಧಾರವಾಡದ ಅರ್ಜುನ ವಿಜ್ಞಾನ ಪಿಯು ಕಾಲೇಜಿನ ಅನ್ಮೋಲ್ ಪ್ರಭು ದ್ವಿತೀಯ, ಹಾಗೂ ಮಂಗಳೂರಿನ ಎಕ್ಸ್‌ಪರ್ಟ್ ಪಿಯು ಕಾಲೇಜಿನ ಸಮಯ್ ಎ.ಎಸ್. ಅವರು ತೃತೀಯ ಸ್ಥಾನ ಪಡೆದಿದ್ದಾರೆ.

ರಾಜ್ಯಾದ್ಯಂತ 745 ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿ ಪರೀಕ್ಷೆಯಲ್ಲಿ ಈ ಬಾರಿ ಒಟ್ಟು 3.30 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ನೋಂದಾಯಿಸಿಕೊಂಡು ಪರೀಕ್ಷೆ ಬರೆದಿದ್ದರು. ಏಪ್ರಿಲ್ 23, 24ರಂದು ರಾಜ್ಯಾದ್ಯಂತ 745 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು.ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಅವರಿದ್ದರು.

ರಾಜ್ಯದ ಜನರ ಒಳಿತಿಗೆ ಒಟ್ಟಾಗಿ ಕೆಲಸ ಮಾಡೋಣ

● ಸಿಎಂ ಡಿ.ಕೆ.ಶಿವಕುಮಾರ್ ಕರೆ ● ಪ್ರಧಾನಿ ಮೋದಿ ಟೀಕೆಗೆ ಶಾಂತಚಿತ್ತ ಪ್ರತಿಕ್ರಿಯೆ

ಬೆಂಗಳೂರು, ಜೂ.6(ಕೆಎಂಶಿ)– ರಾಜಕಾರಣ ಈಗ ಮುಗಿದ ಅಧ್ಯಾಯ. ಈಗೇನಿದ್ದರೂ ರಾಜ್ಯದ ಅಭಿವೃದ್ಧಿ ತಮ್ಮ ಮೊದಲ ಆದ್ಯತೆ. ಇದಕ್ಕಾಗಿ ರಾಜಕೀಯ ಮರೆತು ಎಲ್ಲರೂ ಒಟ್ಟಾಗಿ ಕೆಲಸ ಮಾಡೋಣ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.



ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸು ಅವರ ಪುಣ್ಯ ಸ್ಮರಣೆ ಅಂಗವಾಗಿ ವಿಧಾನಸೌಧದ ಅವರಣದಲ್ಲಿರುವ ಅರಸು ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತದಿಂದ ಜನ ಸಂಕಷ್ಟಕ್ಕೊಳಗಾಗಿದ್ದಾರೆ ಎಂದು ಪ್ರಧಾನಿ ನಿನ್ನೆ ಟೀಕಿಸಿದ್ದರು. ಇದಕ್ಕೆ ಇಂದು ತಾಳ್ಮೆಯಿಂದಲೇ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಅವರು, ಪ್ರಧಾನಿಯವರು ತಾವು ಮುಖ್ಯಮಂತ್ರಿಯಾದಾಗ ಅಭಿನಂದಿಸಿದ್ದಾರೆ, ನಾನು ಅದಕ್ಕೆ ಧನ್ಯವಾದ ಹೇಳಿದ್ದೇನೆ. ಮುಂದಿನ ದಿನಗಳಲ್ಲಿ ಅವರನ್ನು ಗೌರವಯುತವಾಗಿ ಭೇಟಿ ಮಾಡುತ್ತೇನೆ. ಅವರೂ ರಾಜಕಾರಣ ಮಾಡುವುದು ಬೇಡ, ನಾವೂ ರಾಜಕಾರಣ ಮಾಡುವುದಿಲ್ಲ. ರಾಜ್ಯದ ಜನರ ಒಳಿತಿಗಾಗಿ ಒಟ್ಟಾಗಿ ಕೆಲಸ ಮಾಡೋಣ ಎಂದು ತಿಳಿಸಿದರು. ದೇವರಾಜ ಅರಸು ಅವರು, ಅರಸು ಮನೆತನಕ್ಕೆ ಸೇರಿದ್ದರೂ ಕೂಡ ವಿವಿಧ ಜಾತಿಗಳಲ್ಲಿನ ನಾಯಕರನ್ನು ಬೆಳೆಸಿದ್ದಾರೆ. ಬೆಂಗಳೂರಿನಲ್ಲಿ ಎಲೆಕ್ಟ್ರಾನಿಕ್ ಸಿಟಿ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ್ದು, ದೇವರಾಜ ಅರಸು ಅವರು. ವೀರಪ್ಪಮೊಯ್ಲಿ, ಎಸ್.ಎಂ.ಕೃಷ್ಣ ಆಗ ಸಚಿವರಾಗಿದ್ದರು ಎಂದು ಹೇಳಿದರು. ಅರಸು ಅವರ ಕೆಲಸಗಳು 100 ವರ್ಷಗಳಾದರೂ ನಮ್ಮ ನಡುವೆ ಚಿರಸ್ಥಾಯಿಯಾಗಿರುತ್ತವೆ. ಅವರ ಸೇವೆ ಮತ್ತು ಸಾಕ್ಷಿಗುಡ್ಡೆ ನಮ್ಮ ಮುಂದಿದೆ ಎಂದರು.

ಸಿನಿಮಾ ಥಿಯೇಟರ್‌ನಲ್ಲಿ ವಿಷ ಸೇವಿಸಿ ವ್ಯಕ್ತಿ ಆತ್ಮಹತ್ಯೆ


ಮೈಸೂರು,ಜೂ.6(ಪಿಎಂ)– ಸಿನಿಮಾ ನೋಡುತ್ತಲೇ ವ್ಯಕ್ತಿಯೊಬ್ಬ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಓಲ್ಡ್ ಬ್ಯಾಂಕ್ ರಸ್ತೆಯ ಪ್ರಭಾ ಚಿತ್ರಮಂದಿರದಲ್ಲಿ ಶನಿವಾರ ಸಂಜೆ ನಡೆದಿದೆ. ಮೇಟಗಳ್ಳಿ ನಿವಾಸಿ ಮಂಜು (55ರಿಂದ 60 ವರ್ಷ) ಸಿನಿಮಾ ವೀಕ್ಷಣೆ ಮಾಡುತ್ತ ವಿಷ ಸೇವಿಸಿ ಸಾವನ್ನಪ್ಪಿರುವ ವ್ಯಕ್ತಿ.

ಇಂದು ಸಂಜೆ 4.30ರ ಶೋ ನೋಡಲು ಬಂದಿದ್ದ ಮಂಜು, ಜಿರಳೆ ಔಷಧಿ ಸೇವಿಸಿರುವುದು ಕಂಡುಬಂದಿದೆ. ಜೇಬಿನಲ್ಲಿದ್ದ ಆಧಾರ್ ಕಾರ್ಡ್‌ನಿಂದ ಅವರ ವಿಳಾಸ ಪತ್ತೆಯಾಯಿತು. ಬೆಳಗ್ಗೆ 10.30, ಸಂಜೆ 4.30ರ ಶೋಗಳ ಟಿಕೆಟ್ ತೆಗೆದುಕೊಂಡಿದ್ದರು. ಸುಮಾರು 700 ಆಸನ ಸಾಮರ್ಥ್ಯವಿರುವ ಈ ಚಿತ್ರಮಂದಿರದಲ್ಲಿ ಸಂಜೆಯ ಈ ಶೋಗೆ ಕೇವಲ 40 ಮಂದಿಯಷ್ಟೇ ಇದ್ದರು. ಮಂಜು ಅವರು ಹಿಂಭಾಗದ ಆಸನವೊಂದರಲ್ಲಿ ಕುಳಿತು ಜಿರಳೆ ಔಷಧಿ ಸೇವಿಸಿ ಮೃತಪಟ್ಟಿದ್ದಾರೆ. ಆತ್ಮಹತ್ಯೆಗೆ ಸದ್ಯ ಕಾರಣ ತಿಳಿದುಬಂದಿಲ್ಲ. ಮೈಸೂರು ವೈದ್ಯಕೀಯ ಕಾಲೇಜು ಶವಾಗಾರದಲ್ಲಿ ಮೃತದೇಹ ಇರಿಸಿದ್ದು, ನಾಳೆ ಬೆಳಗ್ಗೆ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಒಪ್ಪಿಸಲಾಗುವುದು. ಈ ಸಂಬಂಧ ಅಸಹಜ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ದೇವರಾಜ ಠಾಣೆ ಪೊಲೀಸರು ತಿಳಿಸಿದ್ದಾರೆ.

ಉಚಿತ ಮೆಗಾ ಆರೋಗ್ಯ ಶಿಬಿರ, ಕಣ್ಣಿನ ತಪಾಸಣೆ

ಮೈಸೂರು: ಅಜೀಜಿಯ ಎಜುಕೇಷನಲ್ ಟ್ರಸ್ಟ್ ಟ್ರಸ್ಟಿಗಳು, ಅಸ್ತಾನ–ಎ–ಸಲ್ಲಾನಿಯಾ ದರ್ಗಾ ಕಮಿಟಿ ಪದಾಧಿಕಾರಿಗಳು, ದಾರುಲ್ ಉಲೂಮ್ ಅಜೀಜಿಯ ಟ್ರಸ್ಟ್‌ನ ಟ್ರಸ್ಟಿಗಳು ಸಂಯುಕ್ತವಾಗಿ ಜೂ.13ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ, ಎ.ಇ.ಟಿ. ಹೈಸ್ಕೂಲು (ಅಜೀಜಿಯ ಬಿಲ್ಡಿಂಗ್), ವಾಟರ್ ಟ್ಯಾಂಕ್ ಬಳಿ, ಕೆ.ಹೆಚ್.ಬಿ. ಕಲ್ಯಾಣಗಿರಿ ಇಲ್ಲಿ ಉಚಿತ ಮೆಗಾ ಆರೋಗ್ಯ ಶಿಬಿರ ಮತ್ತು ಕಣ್ಣಿನ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ : 0821–2457786 ಅಥವಾ ಮೊಬೈಲ್ ನಂ.9620153213, 6360540445 ಅನ್ನು ಸಂಪರ್ಕಿಸಬಹುದು.

ಅಕ್ಕ ಸಮ್ಮೇಳನಕ್ಕೆ ಆಹ್ವಾನ...



ಅಮೇರಿಕ ಕನ್ನಡ ಕೂಟಗಳ ಆಗರ(ಅಕ್ಕ) ಸಂಘಟನೆ ವತಿಯಿಂದ ಸೆಪ್ಟೆಂಬರ್ 4ರಿಂದ 6ರವರೆಗೆ ಅಮೆರಿಕದ ಫಿಲಾಡೆಲ್ಫಿಯಾ ನಗರದಲ್ಲಿ ಆಯೋಜಿಸಿರುವ 'ಅಕ್ಕ ರಜತ ಮಹೋತ್ಸವ' ವಿಶ್ವ ಕನ್ನಡ ಸಮ್ಮೇಳನದಲ್ಲಿ ಅತಿಥಿಯಾಗಿ ಪಾಲ್ಗೊಳ್ಳುವಂತೆ ಮಾಜಿ ಸಚಿವ ಸಾ.ರಾ.ಮಹೇಶ್ ಅವರನ್ನು ಅಕ್ಕ ಸಂಘಟನೆ ಅಧ್ಯಕ್ಷ ಮಧು ರಂಗಯ್ಯ ಆತ್ಮೀಯವಾಗಿ ಆಹ್ವಾನಿಸಿದರು. ಈ ವೇಳೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಸ್ಕಿಲ್ ಟೆಕ್‌ನ ಶಿವಶಂಕರ್, ಜಿಪಂ ಮಾಜಿ ಸದಸ್ಯ ಸಿ.ಜೆ.ದ್ವಾರಕೀಶ್, ಉದ್ಯಮಿ ಬಿ.ಕೆ.ಗಂಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಆ.2ನೇ ವಾರ ಚಾರ್ಧಾಮ್ ಧಾರ್ಮಿಕ ಯಾತ್ರೆ



ಮಾಹಿತಿಗೆ 99646 83183 ಸಂಪರ್ಕಿಸಿ

ಮೈಸೂರು, ಜೂ.6(ಜಿಎ)–ಕರ್ನಾಟಕ ರಾಜ್ಯ ಅಭಿವೃದ್ಧಿ ಪರಿಷತ್ತು ವತಿಯಿಂದ ಆಗಸ್ಟ್ 2ನೇ ವಾರದಲ್ಲಿ ಚಾರ್ಧಾಮ್ ಧಾರ್ಮಿಕ ಯಾತ್ರೆ ಹಮ್ಮಿಕೊಂಡಿದ್ದು, 18 ವರ್ಷ ಮೇಲ್ಪಟ್ಟವರು ನೋಂದಾಯಿಸಿಕೊಂಡು ಪಾಲ್ಗೊಳ್ಳುವ ಅವಕಾಶ ಪಡೆಯಬಹುದಾಗಿದೆ ಎಂದು ಖಜಾಂಚಿ ಮಂಜುಳಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಯಾತ್ರೆ ಹರಿದ್ವಾರ, ರಿಷಿಕೇಶ್, ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್ ಮೊದಲಾದವುಗಳ ದರ್ಶನ ಒಳಗೊಂಡಿದೆ. ಆಧಾರ್, ಪಾಸ್‌ಪೋರ್ಟ್, ಸೇವಿಸುತ್ತಿದ್ದರೆ ಔಷಧಿಗಳ ವಿವರ ಮೊದಲಾದ ದಾಖಲಾತಿ ನೀಡಬೇಕು. ಜುಲೈ ಮೊದಲ ವಾರದವರೆಗೆ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಶುಲ್ಕ 27,300 ರೂ.ಗಳಾಗಿವೆ. ಬೆಂಗಳೂರಿನಿಂದ ಕರೆದೊಯ್ದು, ಬೆಂಗಳೂರಿಗೆ ವಾಪಸು ಕರೆತರಲಾಗುವುದು. 45 ವರ್ಷ ಮೇಲ್ಪಟ್ಟವರಿಗೆ ರಾಜ್ಯ ಸರ್ಕಾರದಿಂದ 20 ಸಾವಿರ ರೂ., ಸಹಾಯಧನ ನೀಡಲಾಗುತ್ತಿದೆ. ಹೆಚ್ಚಿನ ಮಾಹಿತಿಗೆ ದೂ. 99646 83183 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ನಂದಕುಮಾರ್, ಸಿಂಧುವಳ್ಳಿ ಶಿವಕುಮಾರ್, ಎಂ.ರಾಧಾ ಉಪಸ್ಥಿತರಿದ್ದರು.

ಜೀಪ್‌ಗೆ ಟ್ರಕ್ ಡಿಕ್ಕಿ; ಅಸ್ಥಿ ವಿಸರ್ಜನೆಗೆ ತೆರಳುತ್ತಿದ್ದ 9 ಮಂದಿ ದುರ್ಮರಣ



ಪಂಜಾಬ್: ಚಿತಾಭಸ್ಮ(ಅಸ್ಥಿ) ವಿಸರ್ಜನೆಗೆಂದು ತೆರಳುತ್ತಿದ್ದ 9 ಮಂದಿ ಭೀಕರ ಅಪಘಾತದಲ್ಲಿ ದುರ್ಮರಣಕ್ಕೀಡಾದ ಘಟನೆ ಪಂಜಾಬ್‌ನ ಫಿರೋಜ್‌ಪುರದಲ್ಲಿ ಶನಿವಾರ ಸಂಭವಿಸಿದೆ.

ಮೃತ ದುರ್ದೈವಿಗಳು ಇತ್ತೀಚೆಗಷ್ಟೇ ನಿಧನರಾಗಿದ್ದ ತಮ್ಮ ಕುಟುಂಬದ ಸದಸ್ಯರೊಬ್ಬರ ಚಿತಾಭಸ್ಮವನ್ನು ನದಿಯಲ್ಲಿ ವಿಸರ್ಜನೆ ಮಾಡಲು ಜೀಪ್‌ನಲ್ಲಿ ಪ್ರಯಾಣಿಸುತ್ತಿದ್ದರು. ಈ ವೇಳೆ ವೇಗವಾಗಿ ಬಂದ ಟ್ರಕ್, ಜೀಪ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇದರಲ್ಲಿದ್ದ 9 ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಎರಡೂ ವಾಹನಗಳಲ್ಲಿದ್ದ 15ಕ್ಕೂ ಹೆಚ್ಚು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ.

ಅಪಘಾತದ ಭೀಕರತೆಗೆ ಜೀಪ್ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಘಟನೆ ನಡೆದ ತಕ್ಷಣವೇ ಸ್ಥಳೀಯರು ಹಾಗೂ ತುರ್ತು ರಕ್ಷಣಾ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದರು. ಗಾಯಗೊಂಡಿರುವ 15ಕ್ಕೂ ಹೆಚ್ಚು ಜನರನ್ನು ತಕ್ಷಣವೇ ಹತ್ತಿರದ ಆಸ್ಪತ್ರೆಗಳಿಗೆ ದಾಖಲಿಸಿ, ತುರ್ತು ಚಿಕಿತ್ಸೆ ನೀಡಲಾಗುತ್ತಿದೆ. ಸದ್ಯ ಸ್ಥಳೀಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಅಪಘಾತಕ್ಕೆ ಚಾಲಕನ ನಿರ್ಲಕ್ಷ್ಯ ಕಾರಣವೇ ಅಥವಾ ತಾಂತ್ರಿಕ ದೋಷವೇ ಎಂಬ ಕುರಿತು ತನಿಖೆ ಆರಂಭಿಸಿದ್ದಾರೆ.

ಗೋದಾಮಿಗೆ ಬೆಂಕಿ; 25 ಲಕ್ಷ ಮೌಲ್ಯದ ಸಾಮಗ್ರಿ ಅಗ್ನಿಗಾಹುತಿ



ಮೈಸೂರು, ಜೂ.6 (ಎಸ್‌ಪಿಎನ್)–ಬೆಂಕಿ ಪೊಟ್ಟಣ ಮತ್ತು ಇತರೆ ಸ್ಟೇಷನರಿ ವಸ್ತುಗಳನ್ನಿಡಲಾಗಿದ್ದ ಗೋದಾಮಿಗೆ ಆಕಸ್ಮಿಕವಾಗಿ ಬೆಂಕಿ ತಗುಲಿ 25 ಲಕ್ಷ ರೂ. ಮೌಲ್ಯದ ಸಾಮಾಗ್ರಿಗಳು ಬೆಂಕಿಗಾಹುತಿಯಾಗಿವೆ.

ಮೈಸೂರಿನ ದೇವರಾಜ ಮೊಹಲ್ಲಾದ ದಯಾಲಾಲ್ ಮಾಲೀಕತ್ವದ ಮಳಿಗೆಯ ಗೋದಾಮಿನಲ್ಲಿ ಈ ಘಟನೆ ನಡೆದಿದೆ. ಈ ವೇಳೆ ಗೋದಾಮಿನಲ್ಲಿ ಬೆಂಕಿ ಪೊಟ್ಟಣ ಹಾಗೂ ಇತರೆ ಸ್ಟೇಷನರಿ ಸಾಮಾಗ್ರಿಗಳು ಬೆಂಕಿಗೆ ಆಹುತಿಯಾಗಿವೆ. ಗೋದಾಮಿನ ಒಳಗಡೆಯಿಂದ ದಟ್ಟವಾದ ಹೊಗೆ ಬರುತ್ತಿದ್ದುದ್ದನ್ನು ಗಮನಿಸಿದ ಸ್ಥಳೀಯರು, ಅಕ್ಕ–ಪಕ್ಕದ ಮನೆಯವರು ಅಗ್ನಿಶಾಮಕ ದಳಕ್ಕೆ ವಿಚಾರ ಮುಟ್ಟಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳ ಸಿಬ್ಬಂದಿ, ಸತತ ಮೂರು ಗಂಟೆಗಳ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಂದಿಸಿದ್ದಾರೆ. ಈ ಸಂಬಂಧ ದೇವರಾಜ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕೇಂದ್ರ ಸರ್ಕಾರದ ಜನ ವಿರೋಧಿ ನೀತಿ ಖಂಡಿಸಿ ಕಾಕ್ರೋಚ್ ಜನತಾ ಪಾರ್ಟಿ ಹೋರಾಟಕ್ಕೆ ಬೆಂಬಲ

ಮೈಸೂರಲ್ಲಿ ಪ್ರಗತಿಪರ ಚಿಂತಕರ ಪ್ರತಿಭಟನೆ

ಮೈಸೂರು, ಜೂ.6(ಎಂಟಿವೈ)– ನೀಟ್ ಹಾಗೂ ಸಿಬಿಎಸ್‌ಇ ಪರೀಕ್ಷಾ ವ್ಯವಸ್ಥೆಯಲ್ಲಿನ ಅಕ್ರಮ ಖಂಡಿಸಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ ಯುವ ಜನರ ಚಳವಳಿ ಬೆಂಬಲಿಸಿ ಮೈಸೂರಲ್ಲಿ ಪ್ರಗತಿಪರ ಚಿಂತಕರು ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂದೆ ವಿವಿಧ ಪ್ರಗತಿಪರ ಸಂಘಟನೆಗಳು ಮುಖಂಡರು, ಚಿಂತಕರು, ಸಾಹಿತಿಗಳು ಹಾಗೂ ಹೋರಾಟಗಾರರು ಪ್ರತಿಭಟನೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಕಾಕ್ರೋಚ್ ಜನತಾ ಪಾರ್ಟಿ ಪರ ಘೋಷಣೆ ಕೂಗಿದರು.

ದೇಶದಲ್ಲಿ ಯುವಜನರು, ವಿದ್ಯಾರ್ಥಿಗಳು, ರೈತರು, ಕಾರ್ಮಿಕರು ಹಾಗೂ ದಮನಿತ ಸಮುದಾಯಗಳ ಸಮಸ್ಯೆಗಳಿಗೆ ಸ್ಪಂದಿಸುವ ಪರ್ಯಾಯ ರಾಜಕೀಯದ ಅಗತ್ಯವಿದ್ದು, ಆ ನಿಟ್ಟಿನಲ್ಲಿ ಯುವ ಜನರನ್ನು ಸಂಘಟಿಸುವ ಕಾಕ್ರೋಚ್ ಜನತಾ ಪಾರ್ಟಿ ಚಳವಳಿಗೆ ತಮ್ಮ ಬೆಂಬಲಿಸಬೇಕು. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನೀಟ್ ಪರೀಕ್ಷೆ ಸೇರಿದಂತೆ ಶಿಕ್ಷಣ ಕ್ಷೇತ್ರದಲ್ಲಿ ಉಂಟಾಗಿರುವ ವಿವಾದಗಳ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಪರೀಕ್ಷಾ ವ್ಯವಸ್ಥೆಯಲ್ಲಿನ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರಗತಿಪರ ಚಿಂತಕ ಪ್ರೊ.ಕಾಳಚನ್ನೇಗೌಡ ಮಾತನಾಡಿ, 30–40 ವರ್ಷಗಳ ಹಿಂದೆ ಸಣ್ಣ ಪ್ರಮಾಣದ ಅನ್ಯಾಯವಾದ ತಕ್ಷಣ ಸರ್ಕಾರ ಕಿತ್ತೊಗೆಯಲು ಬೀದಿಗಿಳಿದು ಹೋರಾಟ ನಡೆಸುತ್ತಿದ್ದರು. ಇತ್ತೀಚಿನ ವರ್ಷಗಳ ಕೇಂದ್ರ ಹಾಗೂ ರಾಜ್ಯ ಮಟ್ಟದಲ್ಲಿ ವಿದ್ಯಾರ್ಥಿ ಚಳವಳಿ ನಡೆಯುತ್ತಿಲ್ಲ. ಇದರಿಂದ ದೇಶದಲ್ಲಿ ಯುವಜನರಿಗೆ, ದುಡಿಯುವ ವರ್ಗಗಳಿಗೆ ಅನ್ಯಾಯವಾಗಿದೆ. ಎಲ್ಲ ಕ್ಷೇತ್ರದಲ್ಲಿ ಭ್ರಷ್ಟಾಚಾರ ತುಂಬಿ ತುಳುಕಿದೆ. ಭ್ರಷ್ಟಾಚಾರ ತೊಡೆದು ಹಾಕಿ ಸಮ ಸಮಾಜ ನಿರ್ಮಾಣ ಮಾಡಲು ಯುವ ಜನರು ಹೋರಾಟಗಳಲ್ಲಿ ಹೆಚ್ಚು ತೊಡಗಿಕೊಳ್ಳಬೇಕು ಎಂದು ಹೇಳಿದರು.

ದಲಿತ ಸಂಘರ್ಷ ಸಮಿತಿಯ ಸಂಚಾಲಕ ದೇವಗಳ್ಳಿ ಸೋಮಶೇಖರ್ ಮಾತನಾಡಿ, ಅಣ್ಣ ಹಜಾರೆಯ ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆ ದೇಶವೇ ಧ್ವನಿಯಾಗಿ ನಿಂತ ಪರಿಣಾಮ ಒಂದು ಸರ್ಕಾರದ ರಚನೆಗೆ ಕಾರಣವಾಯಿತು. ಅಧಿಕಾರಕ್ಕೆ ಬರುವ ಮುನ್ನ ಪ್ರಧಾನಿ ಮೋದಿ ಅವರು ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುತ್ತೇವೆಂದು ಪ್ರಣಾಳಿಕೆಯಲ್ಲಿ ಘೋಷಿಸಿದ್ದರು. ಆದರೆ, ಅಧಿಕಾರಕ್ಕೆ ಬಂದು 12 ವರ್ಷಗಳಿಂದ ಶಿಕ್ಷಣದ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿದ್ದಾರೆ ಎಂದರು.


ಹೋರಾಟಗಾರ್ತಿ ಸವಿತಾ ಪ.ಮಲ್ಲೇಶ್ ಮಾತನಾಡಿ, ಸಿಬಿಎಸ್‌ಇ ಪರೀಕ್ಷೆಯಲ್ಲೂ ಅಕ್ರಮ ನಡೆದಿದೆ. ಬಿಜೆಪಿ ಪಕ್ಷದಲ್ಲಿನ ಪೋಷಕರ ಮಕ್ಕಳಿಗೆ ಎಂಬಿಬಿಎಸ್ ಪ್ರವೇಶ ಸಿಗಬೇಕು ಎಂದು ಪ್ರಶ್ನೆ ಪತ್ರಿಕೆಗಳನ್ನು ಸೋರಿಕೆ ಮಾಡಲಾಗಿದೆ. ಕಷ್ಟಪಟ್ಟು ಓದಿದ ವಿದ್ಯಾರ್ಥಿಗಳು ಮತ್ತು ಪೋಷಕರ ಬಾಳಿಗೆ ಬೆಂಕಿ ಇಡಲಾಗುತ್ತಿದೆ. ಅಕ್ರಮ ಪರೀಕ್ಷೆ ಮಾಡುವ ಬದಲು ನೇರವಾಗಿ ತಮ್ಮಗೆ ಬೇಕಾದವರಿಗೆ ಪ್ರವೇಶಾತಿ ಟಿಕೆಟ್ ಕೊಡಲಿ. ಆಗ ಲಕ್ಷಾಂತರ ರೂಪಾಯಿ ವ್ಯಯಿಸಿ ಶಿಕ್ಷಣ ಕೊಡಿಸುವುದು ತಪ್ಪಲಿದೆ ಎಂದರು.

ಪ್ರಗತಿಪರ ಚಿಂತಕ ಡಾ.ಪಾ.ಪು. ಪೂರ್ಣನಂದ ಮಾತನಾಡಿದರು. ಪ್ರತಿಭಟನೆಯಲ್ಲಿ ಮಹಿಳಾ ಹೋರಾಟಗಾರ್ತಿ ಡಾ.ರತಿರಾವ್, ಅಹಿಂದ ಜವರಪ್ಪ, ಹೋರಾಟಗಾರರಾದ ವರದಯ್ಯ, ಪ್ರೊ.ಕುಮಾರಸ್ವಾಮಿ, ದಲಿತ ಸಂಘರ್ಷ ಸಮಿತಿಯ ಕೆ.ಎನ್.ಶಿವಲಿಂಗಯ್ಯ, ದೊಡ್ಡಣ್ಣ, ನೆಲೆ ಹಿನ್ನೆಲೆ ಗೋಪಾಲ್, ಕಮ್ಯುನಿಸ್ಟ್ ಪಕ್ಷದ ವಿಜಯಕುಮಾರ್, ರಾಮಕೃಷ್ಣ, ಲೇಖಕರಾದ ಸುಶೀಲ, ಕೆ.ಆರ್.ಗೋಪಾಲ ಕೃಷ್ಣ, ಅಳಗಂಚಿ ನವೀನ್, ರೂಪಾ ರಾವ್, ನಂಜನಗೂಡು ಉಮಾಕಾಂತ್, ಅಭಿ ನಾಗಭೂಷಣ, ತ್ರಿನೇಶ್, ಅಪೂರ್ವ ಡಿಸಿಲ್ವಾ, ರೇವತಿ ಡಿಸಿಲ್ವಾ, ಭೂಮಿಗೌಡ, ವನಜಾ, ಪುಟ್ಟಮಾದಯ್ಯ, ಕುಮಾರಸ್ವಾಮಿ, ಅಯ್ಯಪ್ಪ ಹೂಗಾರ್, ಸೃಷ್ಟಿ ದಯಾನಂದ ಮೂರ್ತಿ, ಸಾಹಿತಿ ಗಂಗರಾಮ ಚಂಡಲಾ, ನಿವೃತ್ತ ಪೊಲೀಸ್ ಅಧಿಕಾರಿ ಬಸವಲಿಂಗಯ್ಯ ಇನ್ನಿತರರು ಪಾಲ್ಗೊಂಡಿದ್ದರು.



ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಕೇಂದ್ರ ಸರ್ಕಾರದ ಜನವಿರೋಧಿ ನೀತಿ ಖಂಡಿಸಿ ಕಾಕ್ರೋಚ್ ಜನತಾ ಪಾರ್ಟಿ ಹೋರಾಟ ಬೆಂಬಲಿಸಿ, ಪ್ರಗತಿಪರ ಚಿಂತಕರು ಪ್ರತಿಭಟನೆ ನಡೆಸಿದರು.

ಇನ್ಫೋಸಿಸ್ ನಾರಾಯಣಮೂರ್ತಿ ಅವರಿಂದ 'ತಾತಾ ಅಪ್ಪ ಕಂಡಂತೆ...ಅಪ್ಪ ನಾನು ಕಂಡಂತೆ' ಕೃತಿ ಬಿಡುಗಡೆ



ಇನ್‌ಫೋಸಿಸ್ ಸಂಸ್ಥಾಪಕ ಡಾ.ಎನ್.ಆರ್.ನಾರಾಯಣ ಮೂರ್ತಿ ಅವರು 'ತಾತಾ ಅಪ್ಪ ಕಂಡಂತೆ...ಅಪ್ಪ ನಾನು ಕಂಡಂತೆ' ಕೃತಿಯನ್ನು ಬಿಡುಗಡೆಗೊಳಿಸಿದರು.

ಮೈಸೂರು, ಜೂ.6(ಜಿಎ)–ಮೈಸೂರಿ ಶಾರದಾ ವಿಲಾಸ್ ಫಾರ್ಮಸಿ ಕಾಲೇಜಿನ ಶ್ರೀ ಚಿನ್ನಸ್ವಾಮಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಇನ್ಫೋಸಿಸ್ ಸಂಸ್ಥಾಪಕ ಡಾ.ಎನ್.ಆರ್.ನಾರಾಯಣ ಮೂರ್ತಿ ಅವರು 'ತಾತಾ ಅಪ್ಪ ಕಂಡಂತೆ...ಅಪ್ಪ ನಾನು ಕಂಡಂತೆ' ಕೃತಿಯನ್ನು ಬಿಡುಗಡೆಗೊಳಿಸಿದರು.

ಸೋಸಲೆ ಮೋಹನ ಅವರು ತಮ್ಮ ತಂದೆ ಸೋಸಲೆ ರಾಜಗೋಪಾಲ ಐಯ್ಯಂಗಾರ್ ಮತ್ತು ತಾತಾ ಸೋಸಲೇ ರಂಗಪ್ಪ ಅವರ ಕುರಿತು 'ತಾತಾ ಅಪ್ಪ ಕಂಡಂತೆ... ಅಪ್ಪ ನಾನು ಕಂಡಂತೆ' ಕೃತಿ ಬರೆದಿದ್ದಾರೆ.

ಕೃತಿ ಲೋಕಾರ್ಪಣೆ ಮಾಡಿದ ನಾರಾಯಣ ಮೂರ್ತಿ ಅವರು ಮಾತನಾಡಿ, ನಾನು ತುಮಕೂರಿನ ಮಧುಗಿರಿಯಿಂದ ಮೈಸೂರಿಗೆ ಬಂದು ಶಾರದ ವಿಲಾಸ್ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ ಪಡೆದುಕೊಂಡೆ. ಶಾಲಾ ದಾಖಲಾತಿ ದಿನ ರಾಜಗೋಪಾಲ ಐಯ್ಯಂಗಾರ್ ಹಾಗೂ ಮುಖ್ಯೋಪಾಧ್ಯಯರು ಕೆಲವು ಪ್ರಶ್ನೆಗಳನ್ನು ಕೇಳಿದರು ಅದಕ್ಕೆ ನಾನು ಸಮರ್ಪಕ ಉತ್ತರ ನೀಡಿದೆ. ಅವರಿಗೆ ಉತ್ತರ ಮೆಚ್ಚುಗೆ ನೀಡಿತು. ಹೀಗೆ ಶಿಕ್ಷಣ ಆರಂಭವಾಯಿತು ಎಂದರು.

ರಾಜಗೋಪಾಲ ಐಯ್ಯಂಗಾರ್ ಅವರು ವಿದ್ಯಾರ್ಥಿಗಳಿಗೆ ಕ್ಲಿಷ್ಟಕರ ಪರೀಕ್ಷೆಗಳನ್ನು ನೀಡುತ್ತಿದ್ದರು. ಅದರಿಂದ ನಮಗೆ ಸಾಕಷ್ಟು ಅನುಕೂಲಗಳು ಆಗುತ್ತಿದ್ದವು. ಅವರು ಮಾಡುತ್ತಿದ್ದ ಪಾಠ ನಮಗೆ ಉತ್ತಮವಾಗಿ ಅರ್ಥವಾಗುತ್ತಿತ್ತು. ಇದರ ಪರಿಣಾಮ ನಾನು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 4ನೇ ರ್‍ಯಾಂಕ್ ಬಂದಿದೆ ಎಂದು ಶಾರದಾ ವಿಲಾಸ ಶಿಕ್ಷಣ ಸಂಸ್ಥೆಯೊಂದಿಗಿನ ನೆನಪು ಮೆಲಕು ಹಾಕಿದರು.


ಈ ವೇಳೆ ಶಾರದಾ ವಿಲಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಸುಬ್ಬರಾಯ, ಕಾರ್ಯದರ್ಶಿ ಆರ್.ದಿನೇಶ್, ರಾಜಗೋಪಾಲಾ ಐಯ್ಯಂಗಾರ್ ಅಳಿಯ ರಾಮ್‌ದಾಸರಾವ್ ಉಪಸ್ಥಿತರಿದ್ದರು.

ಕೆಯುಎಂಸಿಯಿಂದ ಇಂದು ಯುವ ಜನೋತ್ಸವ

ಮೈಸೂರು: ಕರ್ನಾಟಕ ಅರಸು ಮಹಾಮಂಡಲಿ ಚಾರಿಟಬಲ್(ಕೆಯುಎಂಸಿ) ಟ್ರಸ್ಟ್ ವತಿಯಿಂದ ಮೈಸೂರಿನ ಗೋಕುಲಂನ ಶ್ರೀಕೃಷ್ಣ ದೇವಸ್ಥಾನದ ಸಭಾಂಗಣದಲ್ಲಿ ಜೂ.7ರಂದು ಬೆಳಗ್ಗೆ 10.30ಕ್ಕೆ ಜನಾಂಗದ ಯುವ ಜನೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಏರ್ಪಡಿಸಲಾಗಿದೆ. ಶ್ರೀ ರಾಮಕೃಷ್ಣ ಮಠದ ಸ್ವಾಮೀಜಿ ಸರ್ವದಯಾನಂದ ಉದ್ಘಾಟಿಸಲಿದ್ದು, ಸುಮ ಅರಸ್ ನೇತೃತ್ವದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಗ್ಗೆ ಯುವ ಜನರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಟ್ರಸ್ಟ್‌ನ ಗೌರವಾಧ್ಯಕ್ಷ ಎಂ.ಎಲ್.ಬಸವರಾಜೇಅರಸ್, ಅಧ್ಯಕ್ಷ ಬಿ.ಎಸ್.ಶ್ರೀಧರ ರಾಜೇ ಅರಸ್, ಕಾರ್ಯಕ್ರಮದ ಪ್ರಾಯೋಜಕ ಸಮರ್ಥ ರವಿಅರಸ್ ಮತ್ತಿತರರು ಉಪಸ್ಥಿತರಿರಲಿದ್ದಾರೆ.

ಐರ್ಲೆಂಡ್, ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಗೆ ಶ್ರೇಯಸ್ ಅಯ್ಯರ್ ನೇತೃತ್ವದ ಟೀಂ ಇಂಡಿಯಾ ಪ್ರಕಟ

ವಂಡರ್ ಕಿಡ್ ವೈಭವ್ ಸೂರ್ಯವಂಶಿಗೆ ಸ್ಥಾನ



ನವದೆಹಲಿ, ಜೂ 6(ವಿವಿಹೆಚ್)– ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಐರ್ಲೆಂಡ್ ಮತ್ತು ಇಂಗ್ಲೆಂಡ್ ವಿರುದ್ಧದ ಮುಂಬರುವ ಟಿ20 ಸರಣಿಗಾಗಿ ಟೀಮ್ ಇಂಡಿಯಾ ಪ್ರಕಟಿಸಿದೆ. ಈ ಸರಣಿಯಲ್ಲಿ ಅಚ್ಚರಿಯೆಂಬಂತೆ ಪಂಜಾಬ್ ಕಿಂಗ್ಸ್ ತಂಡದ ನಾಯಕತ್ವದ ಹೊಣೆ ಹೊತ್ತಿದ್ದ ಶ್ರೇಯಸ್ ಅಯ್ಯರ್ ಅವರನ್ನು ಟೀಂ ಇಂಡಿಯಾ ಟಿ20 ನಾಯಕರನ್ನಾಗಿ ನೇಮಿಸಲಾಗಿದೆ.

ಮಾಜಿ ನಾಯಕ ಸೂರ್ಯಕುಮಾರ್ ಯಾದವ್ ಅವರನ್ನು ಸಂಪೂರ್ಣವಾಗಿ ಕಡೆಗಣಿಸಿದ್ದು, ಟಿ20 ಫಾರ್ಮೆಟ್‌ನಿಂದಲೇ ಹೊರಗುಳೀಸಿದೆ. ಇನ್ನೂ ತಿಲಕ್ ವರ್ಮಾ ಹೆಗಲಿಗೆ ಉಪ–ನಾಯಕ ಜವಾಬ್ದಾರಿ ನೀಡಿದ್ದು, ವಂಡರ್‌ಕಿಡ್ ವೈಭವ್ ಸೂರ್ಯವಂಶಿ ಅವರಿಗೆ ತಂಡದಲ್ಲಿ ಸ್ಥಾನ ನೀಡಲಾಗಿದೆ.

ಮುಂಬರುವ ಎರಡು ವಿಶ್ವಕಪ್ ಚಕ್ರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಭವಿಷ್ಯದ ತಂಡವನ್ನು ರೂಪಿಸುವ ನಿಟ್ಟಿನಲ್ಲಿ ಬಿಸಿಸಿಐ ಶ್ರೇಯಸ್ ಅಯ್ಯರ್ ಜೊತೆಗೆ ಯುವ ಆಟಗಾರ ತಿಲಕ್ ವರ್ಮಾ ಅವರಿಗೆ ಉಪನಾಯಕನ ಜವಾಬ್ದಾರಿಯನ್ನು ನೀಡಿದೆ.

ಕೇವಲ 15 ವರ್ಷ 71 ದಿನಗಳಲ್ಲಿ ಭಾರತ ತಂಡಕ್ಕೆ ಪಾದಾರ್ಪಣೆ ಮಾಡಿರುವ ಬಿಹಾರದ ವೈಭವ್ ಸೂರ್ಯವಂಶಿ, ಆ ಮೂಲಕ ಭಾರತ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದ ಅತ್ಯಂತ ಕಿರಿಯ ಆಟಗಾರನೆಂಬ ದಾಖಲೆ ನಿರ್ಮಿಸಿದ್ದಾರೆ. ಇದರೊಂದಿಗೆ 36 ವರ್ಷಗಳ ಹಿಂದೆ ಸಚಿನ್ ತೆಂಡೂಲ್ಕರ್ ನಿರ್ಮಿಸಿದ್ದ ದಾಖಲೆಯನ್ನು ಮುರಿದಿದ್ದಾರೆ.

ಟೀಂ ಇಂಡಿಯಾ (ಜೂ.26 ಮತ್ತು 28) ಎರಡು ಟಿ20 ಪಂದ್ಯಗಳನ್ನು ಆಡಲು ಐರ್ಲೆಂಡ್‌ಗೆ ಪ್ರಯಾಣ ಬೆಳೆಸಲಿದೆ. ಅಲ್ಲಿಂದ ಇಂಗ್ಲೆಂಡ್ ನಡುವಣ 5 (ಜು.1 ರಿಂದ 11 ವರೆಗೆ) ಟಿ20 ಪಂದ್ಯಗಳ ಸರಣಿ ಆಡಲಿದೆ.

ಜೊತೆಗೆ 2026ರ ಏಷ್ಯನ್ ಗೇಮ್ಸ್‌ಗಾಗಿ ಬಿಸಿಸಿಐ ತನ್ನ ಬಲಿಷ್ಠ ತಂಡವನ್ನು ಪ್ರಕಟಿಸಿದೆ. ಜಪಾನ್‌ನ ಐಚಿ–ನಾಗೊಯಾದಲ್ಲಿ ನಡೆಯಲಿರುವ ಈ ಕ್ರೀಡಾಕೂಟದಲ್ಲಿ ಶ್ರೇಯಸ್ ಅಯ್ಯರ್ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ. ಈ ತಂಡದಲ್ಲಿ ಜಸ್ಪ್ರೀತ್ ಬುಮ್ರಾ ಮತ್ತು ವೈಭವ್ ಸೂರ್ಯವಂಶಿ ಸೇರಿದಂತೆ ಪ್ರಮುಖ ಆಟಗಾರರು ಸ್ಥಾನ ಪಡೆದಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

07.06.2026 ಭಾನುವಾರ, ಮಳೆ ನಕ್ಷತ್ರ: ರೋಹಿಣಿ 25.05.2026ರಿಂದ 07.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಶತಭಿಷ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

- **ಶ್ರೀ ಸೂತ್ರ ಆಯುರ್ಧಾಮ:** ಮೊಣಕಾಲು ನೋವಿಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಜೆಎಲ್‌ಬಿ ರಸ್ತೆ, ಚಾಮುಂಡಿಪುರಂ, ಬೆಳಗ್ಗೆಯಿಂದ.
- **ಶಾಂತಿ ಚಕ್ರ ಯುವ ಬ್ರಿಗೇಡ್, ಮೈಸೂರು:** ಉಚಿತ ಆರೋಗ್ಯ ತಪಾಸಣಾ ಶಿಬಿರ, ಆಯುರ್ವೇದ ಸಮಾಲೋಚನೆ, ಕಣ್ಣು, ಕಿವಿ, ಮೂಗು, ಗಂಟಲು ಹಾಗೂ ಹಲ್ಲಿನ ಸಮಸ್ಯೆ ಕುರಿತು ತಪಾಸಣೆ, ಸ್ಥಳ: ಶ್ರೀ ಮಹಾವೀರ ಭವನ, ಶ್ರೀರಾಂಪುರ, ಬೆಳಗ್ಗೆ 10ರಿಂದ.
- **ಮೈಸೂರು ಯೋಗ ಒಕ್ಕೂಟ:** ಮೈಸೂರು ಯೋಗ ಒಕ್ಕೂಟದ ರಜತ ಮಹೋತ್ಸವ ಅಂಗವಾಗಿ ಆರೋಗ್ಯದ ಬಗ್ಗೆ ಉಪನ್ಯಾಸ, ಶರೀರಶಾಸ್ತ್ರ, ಚಿಕಿತ್ಸಾಯೋಗ ಸ್ವರಯೋಗ, ಗೌರವ ಸಮರ್ಪಣೆ, ಸ್ಥಳ: ಶ್ರೀ ರಾಮಕೃಷ್ಣ ವಿದ್ಯಾಕೇಂದ್ರ, ಶಾರದಾ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 9.30 ರಿಂದ.
- **ಮೈಸೂರು ಯೋಗೀಸ್ ಟ್ರಸ್ಟ್, ಶ್ರೀ ಮನ್ಮಹಾರಾಜ ಸಂಸ್ಕೃತ ಮಹಾ ಪಾಠಶಾಲೆ:** ಮೈಸೂರು ಯೋಗೋತ್ಸವ–2026, ಬೆಳಗ್ಗೆ 9ಕ್ಕೆ ಉದ್ಘಾಟನೆ: ಸರ್ಕಾರಿ ಸಂಸ್ಕೃತ ಕಾಲೇಜು ಪಾಂಶುಪಾಲ ಡಾ.ಪಿ.ಸತ್ಯನಾರಾಯಣ, ಬೆಳಗ್ಗೆ 11ಕ್ಕೆ ಮೈಸೂರು ಯೋಗ ಪರಂಪರೆ ಛಾಯಾಚಿತ್ರ ಪ್ರದರ್ಶನ, ಸ್ಥಳ: ಯೋಗಾಸನ ವಿಭಾಗ, ಸಂಸ್ಕೃತ ಮಹಾ ಪಾಠಶಾಲೆ.
- **ಕೆಂಪು ಚೆಲುವಾಜಮ್ಮಣ್ಣಿ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಕೆ.ಸಿ.ನಗರ, ಮೈಸೂರು:** ಬೆಳ್ಳಿ ಹಬ್ಬ ಕಾರ್ಯಕ್ರಮ, ಬೆಳಗ್ಗೆ 10ಕ್ಕೆ ಸಾಂಸ್ಕೃತಿಕ ಕಲಾ ತಂಡಗಳ ಮೆರವಣಿಗೆ, ಉದ್ಘಾಟನೆ ಹಾಗೂ ಸ್ಮರಣ ಸಂಚಿಕೆ ಬಿಡುಗಡೆ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿ: ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳ: ಜಯಚಾಮರಾಜೇಂದ್ರ ರಸ್ತೆ, ಕೆ.ಸಿ.ನಗರ.
- **ಕರ್ನಾಟಕ ಅರಸು ಮಹಾ ಮಂಡಲಿ ಚಾರಿಟಬಲ್ ಟ್ರಸ್ಟ್:** ಜನಾಂಗದ ಯುವ ಜನೋತ್ಸವ ಮತ್ತು ಪ್ರತಿಭಾ ಪುರಸ್ಕಾರ, ಶ್ರೀಮತಿ ಸುಮ ಅರಸ್ ನೇತೃತ್ವ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಗ್ಗೆ ನಿವೃತ್ತ ಐಪಿಎಸ್ ಅಧಿಕಾರಿ ಬಿ.ಆರ್.ಜಯಚಾಮರಾಜೇ ಅರಸ್ ಅವರಿಂದ ಉಪನ್ಯಾಸ, ಉದ್ಘಾಟನೆ: ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮೀಜಿ ಸರ್ವ ಜಯಾನಂದ, ಉಪಸ್ಥಿತರು: ಟ್ರಸ್ಟ್‌ನ ಗೌರವಾಧ್ಯಕ್ಷ ಎ.ಎಲ್.ಬಸವರಾಜೇ ಅರಸ್, ಅಧ್ಯಕ್ಷತೆ: ಕೆಯುಎಂಸಿ ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಶ್ರೀಧರರಾಜೇ ಅರಸ್, ಸ್ಥಳ: ಗೋಕುಲಂ ಶ್ರೀಕೃಷ್ಣ ದೇವಸ್ಥಾನದ ಸಭಾಂಗಣ, ಬೆಳಗ್ಗೆ 10.30ರಿಂದ
- **ಬಸವ ಸಮಿತಿ, ಹೆಬ್ಬಾಳು–ವಿಜಯನಗರ–ಮೈಸೂರು:** ಶರಣ ಸಂಗಮ–318, ಸನ್ಮಾನ ಸಮಾರಂಭ, ವಚನ, ಸುಗಮ ಗಾಯನ ಕಾರ್ಯಕ್ರಮ, ಸನ್ಮಾನಿತರು: ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ಅಧ್ಯಕ್ಷ ಕೆ.ಎಸ್.ಪ್ರಕಾಶ್, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ಮೈಸೂರು ತಾಲೂಕು ಅಧ್ಯಕ್ಷ ಕಾವಿ ಬಸಪ್ಪ, ಅಧ್ಯಕ್ಷತೆ: ಬಸವ ಸಮಿತಿ, ಹೆಬ್ಬಾಳು–ವಿಜಯನಗರ–ಮೈಸೂರು ಅಧ್ಯಕ್ಷ ಹೆಚ್.ವಿ.ಬಸವರಾಜು ಹಿನಕಲ್, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11 ಗಂಟೆಗೆ.
- **ಭರಣಿ ಆರ್ಟ್ ಗ್ಯಾಲರಿ:** ಗ್ಯಾಲರಿಯ 32ನೇ ವಾರ್ಷಿಕ ಸಮಾರಂಭ, ಗ್ಯಾಲರಿಯ ಸಹ ಸಂಸ್ಥಾಪಕರಾಗಿದ್ದ ಶ್ರೀಮತಿ ಶೀಲಾ ಕಾವೇರಪ್ಪನವರ ನೆನಪು ಭಾವಚಿತ್ರ ಅನಾವರಣ, ಉದ್ಘಾಟನೆ: ಆಡಳಿತ ತರಬೇತಿ ಕೇಂದ್ರ (ಎಟಿಐ) ಜಂಟಿ ನಿರ್ದೇಶಕರಾದ ಶ್ರೀಮತಿ ಸಾಧನಾ ಅಶೋಕ ಪೋತೆ, ಭಾವಚಿತ್ರ ಅನಾವರಣ: ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಸ್ಥಳ: ಭರಣಿ ಆರ್ಟ್ ಗ್ಯಾಲರಿ, ವಿವೇಕಾನಂದ ನಗರ, ಬೆಳಗ್ಗೆ 11 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ–ನರೇಂದ್ರ ರೈ ದೇರ್ಲಾ, 6.35 ಮತ್ತು ಸಂಜೆ 6.10: ಸಿನಿಮಾಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಠ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ 'ಕೆನ್ನಾಯಿಯ ಜಾಡಿನಲಿ' ಕೃತಿಯ ಬಾನುಲಿ ಓದು. ಪ್ರಸ್ತುತಿ: ಜಿ.ಶಾಂತಕುಮಾರ್, 8.30 ಯೋಗದತ್ತ ಜಗತ್ತು–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ, 8.45 ಚಿತ್ರಗೀತೆಗಳು, 9.40–ನಮ್ಮ ಆರೋಗ್ಯ–ಪೂರಕ ಆಹಾರ ದಿನದ ಸಂದರ್ಭದಲ್ಲಿ ಮಕ್ಕಳಿಗೆ ಪೂರಕ ಆಹಾರದ ಮಹತ್ವ ಅಗತ್ಯ ಕುರಿತು ಇಂಡಿಯನ್ ಅಕಾಡೆಮಿ ಆಫ್ ಪೀಡೀಯಾಟ್ರಿಕ್ಸ್‌ನ ಮಕ್ಕಳ ತಜ್ಞರಾದ ಡಾ.ಮಲ್ಲಿಕಾರ್ಜುನಸ್ವಾಮಿ ಹಾಗೂ ಅನುಷಾ ರಾಜ್.ಕೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00–ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ–ನೇರ ಫೋನ್–ಇನ್ ಕಾರ್ಯಕ್ರಮ. 10.30–ಮಕ್ಕಳ ಮಂಟಪ–ಚೈತನ್ಯ ಚಿಲುಮೆ ಮಾಲಿಕೆಯಲ್ಲಿ ಬಹುಮುಖ ಪ್ರತಿಭೆ ಸ್ಫಟಿಕಾ ಎಸ್.ಭಾರದ್ವಾಜ ಹಾಗೂ ಅವರ ತಾಯಿ ಗೀತಾ.ಎಂ.ವೈ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ, 11.00–ಮಿಶ್ರ ಮಾಧುರ್ಯ, **ಮಧ್ಯಾಹ್ನ:** 12.05 ವನಿತಾ ವಿಹಾರ–ಶಿಕ್ಷಣ ಅಂದು ಇಂದು, ಜೀವನ ಮೌಲ್ಯಗಳನ್ನು ಒಳಗೊಂಡ ಶಿಕ್ಷಣ ಈ ಕುರಿತು ಲೇಖಕಿ ಆಧ್ಯಾತ್ಮ ಚಿಂತಕಿ ಅರುಣಾ ಉದಯಭಾಸ್ಕರ್ ಅವರೊಂದಿಗೆ ಸಂದರ್ಶನ. 12.35 ಭಕ್ತಿಗೀತೆಗಳು: ವೈಷ್ಣವಿ ದತ್ತ, 12.45 ಜನಪದ ಸಂಗೀತ: ನಾಗಮಂಗಲ ತಾಲೂಕು, ಎಲೆಕೊಪ್ಪ ಗ್ರಾಮದ ರುಕ್ಮಿಣಿ ಮತ್ತು ಸಂಗಡಿಗರಿಂದ ಸೋಬಾನೆ ಪದ. 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಅಟಲ್ ಭೂಜಲ ಯೋಜನೆ ಕುರಿತು ಮಾಹಿತಿ. 1.20 ಭಾವಗೀತೆಗಳು–ತನುಶ್ರೀ ಆರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ–ಸಿನಿಸೆಲೆಬ್ರಿಟಿಗಳೊಂದಿಗೆ ಮಾತುಕತೆ, ಚಲನಚಿತ್ರ ನಟ ಹಾಗೂ ರಂಗಭೂಮಿ ಕಲಾವಿದರಾದ ಮಂಡ್ಯ ರಮೇಶ್ ಅವರೊಂದಿಗೆ ಸಂವಾದ. ಪ್ರಸ್ತುತಿ–ಜಿ.ಶಾಂತಕುಮಾರ್ ಹಾಗೂ ಶ್ರೀಮಾನ್.ಎಸ್, 3.40 ಸಿರಿಗನ್ನಡಂ ಗೆಲ್ಗೆ. ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ, ಮೋಕ್ಷ ಸಂಗ್ರಾಮ, ಪ್ರಸ್ತುತಿ–ಬಿ.ಭುಜಬಲಿ ಮತ್ತು ಸಂಗಡಿಗರು, 4.45 ಚಿತ್ರಗೀತೆಗಳು, 6.51–ಕೃಷಿರಂಗ: 1. ಹಟ್ಟಿಹರಟೆ, ವಾರದ ಗ್ರಾಮೀಣ ಚರ್ಚೆ, ಪ್ರಸ್ತುತಿ: ಎನ್.ಕೇಶವಮೂರ್ತಿ, ಡಾ.ಮೈಸೂರು ಉಮೇಶ್, ಬಿ.ಜಿ.ಕವಿತಾ., 2. ಕೃಷಿಲೋಕ 3.ಕೃಷಿ ದರ್ಪಣ–ವಾರದ ಕೃಷಿರಂಗ/ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಜಿ.ಎನ್.ಮಂಜುನಾಥ್, 7.45 ಕನ್ನಡದಲ್ಲಿ ಭಾಷಣ–ಮಹಿಳೆಯರ ಮಾನಸಿಕ ಆರೋಗ್ಯ ಈ ಕುರಿತು ಮಾತನಾಡುತ್ತಾರೆ ವಿದ್ಯಾ ಕಲ್ಯಾಣಶೆಟ್ಟಿ. 8.00 ಕೇಂದ್ರ ಸರ್ಕಾರ 12 ವರ್ಷಗಳನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ ಹಿಂದುಳಿದವರಿಗೆ ಆದ್ಯತೆ ವಿಷಯದ ಕುರಿತು ವಿಶೇಷ ದ್ವಿಭಾಷಾ ಕಾರ್ಯಕ್ರಮ. 8.30–ಹಿಂದಿ ಚಿತ್ರಗೀತೆಗಳು, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ವಿದುಷಿ ಡಾ.ಮಂದ ಸುಧಾರಾಣಿ–ಹಾಡುಗಾರಿಕೆ.

- **ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಮೈಸೂರು ಜಿಲ್ಲಾ ಸಮಿತಿ:** ಶ್ರೀಮತಿ ಪುಷ್ಪಾಲತಾ ಫಣಿರಾಜ್ ವಿರಚಿತ ಹೂವಿನ ಬುಟ್ಟಿ (ಕವನ ಸಂಕಲನ) ಲೋಕಾರ್ಪಣೆ, ಸ್ಥಳ: ವಿಜಯ ವಿಠಲ ಪದವಿ ಪೂರ್ವ ಕಾಲೇಜು ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ
- **ಓಂ ಶ್ರೀ ಸಾಯಿರಾಂ ಸಾಂಸ್ಕೃತಿಕ ಕಲಾ ವೇದಿಕೆ:** ನಾಟಕೋತ್ಸವ–2026 ಕುರುಕ್ಷೇತ್ರ ನಾಟಕ, ಸ್ಥಳ: ಪುರಭವನ, ಬೆಳಗ್ಗೆ 10 ಗಂಟೆಗೆ.
- **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** ಅಂಜನಾನಂದನೋತ್ಸವ, ಡಾ.ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಸುಂದರಕಾಂಡ ಪ್ರವಚನ, ಸ್ಥಳ: ಶ್ರೀರಾಮ ಮಂದಿರ, ಶಿವರಾಂಪೇಟೆ, ಸಂಜೆ 6.30 ರಿಂದ. ರಂಗಾಯಣ: ವಾರಾಂತ್ಯ ರಂಗ ಪ್ರದರ್ಶನ ಗಿರೀಶ್ ಕಾರ್ನಾಡ್ ಅವರು ರಚಿಸಿರುವ 'ಅಗ್ನಿ ಮತ್ತು ಮಳೆ' ನಾಟಕ, ರಂಗಾಯಣದ ರೆಪರ್ಟರಿ ಕಲಾವಿದರಿಂದ, ನಿರ್ದೇಶನ: ಸಾಲಿಯಾನ ಉಮೇಶ್ ನಾರಾಯಣ, ಸ್ಥಳ: ಭೂಮಿಗೀತ ರಂಗಮಂದಿರ, ರಂಗಾಯಣ, ಸಂಜೆ 6.30 ರಿಂದ.
- **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಸಂಸ್ಥಾನ, ಉತ್ತರಾದಿ ಮಠ, ಮೈಸೂರು, ರೋಗ ವಿಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ ಶ್ರೀ 1008 ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಶ್ರೀ ಸತ್ಯ ಸಂಕಲ್ಪ ತೀರ್ಥರ ಹಾಗೂ ಶ್ರೀ ಸತ್ಯಸಂತುಷ್ಟ ತೀರ್ಥರ ದಿವ್ಯ ಸನ್ನಿಧಾನ, ವಿ॥ ಶ್ರೀ ಬಾಲುಮಾಸ್ತಿ ಅವರಿಂದ ವೀಣಾ ವಾದನ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ.5.30ಕ್ಕೆ

ಭಾರಿ ವಾಹನಗಳ ಸಂಚಾರ ನಿಷೇಧಕ್ಕೆ ಜಿಲ್ಲಾಧಿಕಾರಿ ಆದೇಶ

ಮಡಿಕೇರಿ, ಜೂ.6–ಜಿಲ್ಲೆಯಲ್ಲಿ ಮುಂಗಾರು ಮಳೆ ಹೆಚ್ಚಾಗುವ ಸಂದರ್ಭ ಭಾರಿ ವಾಹನಗಳ ಸಂಚಾರದಿಂದ ರಸ್ತೆಗಳು ಹಾಳಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಜೂ. 10ರಿಂದ ಜು. 9ವರೆಗೆ ಜಿಲ್ಲೆಯಲ್ಲಿ ಎಲ್ಲಾ ರೀತಿಯ ಮರದ ದಿಮ್ಮಿಗಳ ಸಾಗಾಟ, ಮರಳು ಸಾಗಾಟದ ವಾಹನಗಳ ಮತ್ತು 18,500 ಕೆ.ಜಿ. ಹೆಚ್ಚಿನ ಸರಕು ಸಾಗಿಸುವ ವಾಹನಗಳ ಸಂಚಾರವನ್ನು ನಿಷೇಧಿಸಿ ಜಿಲ್ಲಾಧಿಕಾರಿ ಸೋಮಶೇಖರ್ ಆದೇಶ ಹೊರಡಿಸಿದ್ದಾರೆ.

ಭಾರಿ ವಾಹನಗಳಾದ ಬುಲೆಟ್ ಟ್ಯಾಂಕರ್, ಶಿಪ್ ಕಾರ್ಗೋ, ಕಂಟೈನರ್, ಲಾಂಗ್ ಚಾಸೀಸ್(ಮಲ್ಟಿ ಆಕ್ಸಿಲ್) ವಾಹನಗಳ ಸಂಚಾರ ಕೂಡ ನಿಷೇಧಿಸಲಾಗಿದೆ. ಅಗತ್ಯ ವಸ್ತುಗಳನ್ನು ಸಾಗಿಸುವ ವಾಹನಗಳು, ಪ್ರಯಾಣಿಕರು ಸಂಚರಿಸುವ ಮಲ್ಟಿ ಆಕ್ಸಿಲ್ ಬಸ್‌ಗಳು, ಸರಕಾರಿ ಕೆಲಸದ ನಿಮಿತ್ತ ಸಂಚರಿಸುವ ವಾಹನಗಳಿಗೆ ನಿಷೇಧದಿಂದ ವಿನಾಯಿತಿ ನೀಡಲಾಗಿದೆ.

ಜಿಲ್ಲೆಯ ಮುಖಾಂತರ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 275ರ ಕುಶಾಲನಗರ ಮತ್ತು ಸಂಪಾಜೆಯಲ್ಲಿ ಚೆಕ್ ಪೋಸ್ಟ್ ತೆರೆದು ದಿನದ 24 ಗಂಟೆಯೂ ನಿಗಾ ವಹಿಸಲು ಸಿಬ್ಬಂದಿ ನೇಮಿಸಬೇಕು. ಆದೇಶ ಉಲ್ಲಂಘನೆ ಮಾಡುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪೊಲೀಸ್ ಇಲಾಖೆ ಮತ್ತು ಆರ್‌ಟಿಓ ಇಲಾಖೆಗೆ ಆದೇಶ ನೀಡಿದ್ದಾರೆ.

ಸಾರಿಗೆ ಬಸ್ ನಿಲ್ದಾಣದಲ್ಲಿ ವಿಶ್ವ ಪರಿಸರ ದಿನಾಚರಣೆ



25ನೇ ವರ್ಷದ ವಿಶ್ವ ಪರಿಸರ ದಿನಾಚರಣೆಯನ್ನು ಸಾರಿಗೆ ಬಸ್ ನಿಲ್ದಾಣದಲ್ಲಿ ಆಚರಿಸಲಾಯಿತು.

ವಿರಾಜಪೇಟೆ: ನಗರದ ಮಲೆತಿರಿಕೆ ಬೆಟ್ಟದ ಶ್ರೀ ಶನೀಶ್ವರ ಭಕ್ತಜನ ಮಂಡಳಿಯಿಂದ ಸಂಸ್ಥಾಪಕ ಹಾಗೂ ಪ್ರಧಾನ ಅರ್ಚಕರಾಗಿದ್ದ ದಿ.ವಿ.ಜಿ ಕೃಷ್ಣಪ್ಪ ಅವರ ಜ್ಞಾಪಕಾರ್ಥವಾಗಿ 25ನೇ ವರ್ಷದ ವಿಶ್ವ ಪರಿಸರ ದಿನಾಚರಣೆಯನ್ನು ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಆಚರಿಸಲಾಯಿತು.

ಚಿತ್ರಕಲಾ ಶಿಕ್ಷಕ ಬಿ.ಆರ್.ಸತೀಶ್ ಪರಿಸರದ ಚಿತ್ರ ಬಿಡಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಸ್ ನಿಲ್ದಾಣದ ಆವರಣದಲ್ಲಿ ಸಸಿ ನೆಟ್ಟು ಪಕ್ಷಿ ತಜ್ಞ ಡಾ.ನರಸಿಂಹನ್ ಮಾತನಾಡಿ, ಪರಿಸರವನ್ನು ಉಳಿಸುವ ಕಾರ್ಯ ಪ್ರತಿ ವ್ಯಕ್ತಿಯೂ ಮಾಡಬೇಕು, ಪ್ರಾಣಿ ಪಕ್ಷಿಗಳು ಯಾವುದೇ ಸ್ವಾರ್ಥವಿಲ್ಲದೆ ಹಣ್ಣು ತಿಂದು ಅದರ ಬೀಜಗಳನ್ನು ಭೂಮಿಯ ಮೇಲೆ ಹಾಕಿ ಸಾವಿರಾರು ಗಿಡಗಳನ್ನು ಬೆಳೆಸುತ್ತವೆ, ಪರಿಸರ ಸಂರಕ್ಷಣೆ ನಮ್ಮ ಮುಖ್ಯ ಉದ್ದೇಶವಾಗಬೇಕು ಎಂದರು.

ಚಿತ್ರಕಲಾವಿದ ಬಿ.ಆರ್.ಸತೀಶ್ ಮಾತನಾಡಿ, ಹಲವಾರು ವರ್ಷಗಳಿಂದ ಶ್ರೀ ಶನೀಶ್ವರ ಭಕ್ತಜನ ಮಂಡಳಿ ಪರಿಸರ ದಿನ ಆಚರಿಸುತ್ತ ಬಂದಿದ್ದು, ಸರಕಾರಿ ಶಾಲಾ ಕಾಲೇಜುಗಳಲ್ಲಿ ಸಸಿಗಳನ್ನು ನಡೆಸುತ್ತ ಬಂದಿದೆ, ಪರಿಸರವನ್ನು ಉಳಿಸುವುದು ನಮ್ಮ ಮುಖ್ಯ ಆದ್ಯತೆಯಾಗಬೇಕು ಎಂದರು.

ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಸಂಚಾರಿ ನಿಯಂತ್ರಕ ವಿ.ಕೆ ಚಂದ್ರಶೇಖರ್, ಟಿ.ಪಿ ಚಂದ್ರ, ಕಾರ್ ಚಾಲಕರ ಸಂಘದ ಸದಸ್ಯರಾದ ಹೆಚ್.ಪಿ ರಾಮ್, ಮುಜಾಯಿದ್, ಮಂಡಳಿ ಅಧ್ಯಕ್ಷ ಯುವರಾಜ್ ಕೃಷ್ಣ ಸದಸ್ಯರಾದ ಮಿಥುನ್, ಪ್ರತಾಪ್, ಸುಮಿತ್ರಾ ಸತೀಶ್, ಅಕ್ಕಮಹಾದೇವಿ, ದಿನೇಶ್ ನಂಬಿಯಾರ್ ಹಾಜರಿದ್ದರು.

ನಾಳೆ ಅಂಚೆ ಅದಾಲತ್ ಸಭೆ

ಮಡಿಕೇರಿ: ಅಂಚೆ ಅದಾಲತ್‌ನ ಸಭೆಯು ಜೂ.8ರಮಧ್ಯಾಹ್ನ 12 ಗಂಟೆಗೆ ಸಿದ್ದಾಪುರ ರಸ್ತೆ ಅಶೋಕಪುರದಲ್ಲಿರುವ ವಿಭಾಗೀಯ ಕಚೇರಿಯಲ್ಲಿ ನಡೆಯಲಿದೆ. ಸಭೆಯಲ್ಲಿ ಕೊಡಗು ಅಂಚೆ ವಿಭಾಗದ ಅಂಚೆ ಸೇವೆಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಿ ಚರ್ಚಿಸಲಾಗುತ್ತದೆ ಎಂದು ಅಂಚೆ ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಐಪಿಎಸ್ ಅಧಿಕಾರಿ ಪತ್ನಿ ಸಾವಿಗೆ ಅರಣ್ಯ ಇಲಾಖೆ ನೇರ ಹೊಣೆ

● ರೈತಸಂಘ, ಸಂಘಟನೆಗಳಿಂದ ತಿತಿಮತಿಯಲ್ಲಿ ಹೆದ್ದಾರಿ ಬಂದ್ ● ಸಂಸದ, ಶಾಸಕರು ಭಾಗಿ

ಮಡಿಕೇರಿ/ ಗೋಣಿಕೊಪ್ಪ, ಜೂ.6–ಕಾಡಾನೆ ದಾಳಿಗೆ ಬಲಿಯಾದ ಐಪಿಎಸ್ ಅಧಿಕಾರಿ ಅಣ್ಣಳಮಾಡ ಸುನಿಲ್ ಅಚ್ಚಯ್ಯರ ಪತ್ನಿ ಸಂಧ್ಯಾ ಸಾವಿಗೆ ಅರಣ್ಯ ಇಲಾಖೆ ನೇರ ಹೊಣೆ ಎಂದು ಆರೋಪಿಸಿ ತಿತಿಮತಿಯಲ್ಲಿ ಹೆದ್ದಾರಿ ಬಂದ್ ನಡೆಸಿ ಆಕ್ರೋಶ ವ್ಯಕ್ತಪಡಿಸಲಾಯಿತು.

ಕೊಡಗು ರೈತ ಸಂಘ, ಹಸಿರು ಸೇನೆ, ಯುಕೋ ಸಂಘಟನೆ ಹಾಗೂ ವಿವಿಧ ಕಾರ್ಮಿಕ ಸಂಘ ಸಂಸ್ಥೆಗಳು ಶನಿವಾರ ತಿತಿಮತಿ ಅರಣ್ಯ ಕಚೇರಿ ಮುಂದೆ ಹಾದು ಹೋಗಿರುವ ಮೈಸೂರು–ಗೋಣಿಕೊಪ್ಪ ರಾಜ್ಯ ಹೆದ್ದಾರಿಯಲ್ಲಿ ರಸ್ತೆ ತಡೆ ನಡೆಸಿ ಆಕ್ರೋಶ ಹೊರ ಹಾಕಿದವು. ಬೆಳಗ್ಗೆ 11.15ಕ್ಕೆ ಆರಂಭಗೊಂಡ ಹೆದ್ದಾರಿ ತಡೆ ಸುಮಾರು 4.30ರವರೆಗೆ ಸುಮಾರು 5 ಗಂಟೆಗೂ ಹೆಚ್ಚು ಕಾಲ ಹೆದ್ದಾರಿ ಬಂದ್ ನಡೆಸಿ ಅರಣ್ಯ ಇಲಾಖೆ ಮತ್ತು ಸರಕಾರಕ್ಕೆ ಬಿಸಿ ಮುಟ್ಟಿಸಿ, ಸಿಸಿಎಫ್ ಪ್ರತಿಭಟನಾ ಸ್ಥಳಕ್ಕೆ ಆಗಮಿಸಬೇಕೆಂದು ಪಟ್ಟು ಹಿಡಿಯಿತು

ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ವಿಫಲ ವಾಗುತ್ತಿದೆ. ಸೋಲಾರ್ ಬೇಲಿ, ಆನೆ ಕಂದಕ, ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮತ್ತು ನಿರ್ವಹಣೆ ಕಳಪೆಯಾಗಿರುವುದು ಕಾಡಾನೆ ಉಪಟಳ ಹೆಚ್ಚಳಕ್ಕೆ ಕಾರಣವಾಗಿ ಅಮಾಯಕರು ಬಲಿಯಾಗುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಂದ್‌ನಿಂದಾಗಿ ರಸ್ತೆಯ ಎರಡೂ ಬದಿಯಲ್ಲಿ ವಾಹನಗಳು ಸಾಲೇ ರೂಪಿತಗೊಂಡು ಪ್ರಯಾಣಿಕರು ಪರದಾಡಿದರು. ಪೊಲೀಸರು ಪಾಲಿಬೆಟ್ಟ, ಮಾಲ್ದಾರೆ, ಪಿರಿಯಾಪಟ್ಟಣ ಮೂಲಕ ತೆರಳಲು ಅನುವು ಮಾಡಿಕೊಟ್ಟರು.

ಯುಕೋ ಸಂಘಟನೆ ಮುಖ್ಯಸ್ಥ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ ಮಾತನಾಡಿ, ಆನೆಗಳ ನಿಯಂತ್ರಣದಿಂದ ಮಾತ್ರ ಸಮಸ್ಯೆ ಬಗೆಹರಿಯಲು ಸಾಧ್ಯ. ಈ ದಿಸೆಯಲ್ಲಿ



ಹಸಿರು ಸೇನೆ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದರು.

ನಿಯಮ ರೂಪಿಸಲು ಸಂವಿಧಾನದಲ್ಲಿ ಅವಕಾಶ ಕಲ್ಪಿಸಿ ನ್ಯಾಯ ಒದಗಿಸಬೇಕಿದೆ. ಈ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೊಣೆ ಹೊತ್ತು ನ್ಯಾಯ ಒದಗಿಸಲಿ ಎಂದು ಆಗ್ರಹಿಸಿದರು. ಕಾರ್ಮಿಕ ಸಂಘಟನೆ ಮುಖ್ಯಸ್ಥ ಪಿ. ಆರ್. ಭರತ್ ಮಾತನಾಡಿ, ಜಿಲ್ಲಾ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಮಾನವ ಹಾನಿಗೆ ಅರಣ್ಯ ಇಲಾಖೆಯ ಅವೈಜ್ಞಾನಿಕ ನೀತಿ ಕಾರಣ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೊಣೆ ಹೊರಬೇಕಿದೆ. ಪರಿಹಾರ ಮೊತ್ತ ಜೀವ ಕಳೆದುಕೊಂಡ ಕುಟುಂಬಕ್ಕೆ ಅನಿವಾರ್ಯವಲ್ಲ. ಆನೆಗಳು ನಾಡಿಗೆ ಬಾರದ ರೀತಿ ಅರಣ್ಯದಲ್ಲಿಯೇ ಕೂಡಿ ಹಾಕುವ ಯೋಜನೆ ಮುಖ್ಯ ಎಂದರು.

ಕೊಡಗು ರೈತ ಸಂಘ ಮತ್ತು ಹಸಿರು ಸೇನೆ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ, ರೈತ ಮುಖಂಡ ಚೆಟ್ರುಮಾಡ ಸುಜಯ್ ಬೋಪಯ್ಯ, ಚೆಪ್ಪುಡೀರ ಕಾರ್ಯಪ್ಪ, ಪುಚ್ಚಿಮಾಡ ಸುಭಾಷ್ ಸುಬ್ಬಯ್ಯ, ಗೋಣಿಕೊಪ್ಪ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಸುನಿಲ್ ಮಾದಪ್ಪ, ಕೊಡಗು ಮಾಡೆಲ್ ಫಾರೆಸ್ಟ್ ಟ್ರಸ್ಟ್ ಅಧ್ಯಕ್ಷ ಡಾ. ಚೆಪ್ಪುಡೀರ ಕುಶಾಲಪ್ಪ, ಮುಖಂಡ ಸಿ.ಕೆ.ಬೋಪಣ್ಣ, ಪಿರಿಯಾಪಟ್ಟಣ ಮತ್ತು ಹೊರ ಜಿಲ್ಲೆಗಳ ರೈತ ಮುಖಂಡರು ಬಂದ್‌ನಲ್ಲಿ ಭಾಗವಹಿಸಿದ್ದರು.

ಜನಪ್ರತಿನಿಧಿಗಳ ಸಾಥ್ : ಸಂಸದ ಯದುವೀರ್ ಒಡೆಯರ್, ಶಾಸಕ ಎ.ಎಸ್.ಪೊನ್ನಣ್ಣ ಬಂದ್‌ನಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಬೆಂಬಲ ನೀಡಿದರು. ಶಾಸಕ ಎ.ಎಸ್. ಪೊನ್ನಣ್ಣ ಮಾತನಾಡಿ, ಕಾಡಾನೆ ತಡೆಗೆ ಸರ್ಕಾರ ಕೂಡ ಯೋಜನೆ ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಪೂರ್ಣ ಪ್ರಮಾಣದಲ್ಲಿ ಕಾರ್ಯಗತಗೊಳ್ಳದ ಕಾರಣ ಸಾವು ನಡೆದಿದೆ. ಇದರಲ್ಲಿ ಹಿಂದಿನ ಶಾಸಕರು, ಈಗಿನ ಶಾಸಕರು, ಸಂಸದರತ್ತ ಬೊಟ್ಟು ಮಾಡುವ ವಿಚಾರಕ್ಕಿಂತ ಪರಿಹಾರ ಕಂಡುಕೊಳ್ಳ ಲಾಗುತ್ತಿಲ್ಲ ಎಂಬ ನೋವು ಅಸಹಾಯಕತೆ ಇದೆ. ಯಾರು ಕೂಡ ಸಾವು ಬಯಸುವುದಿಲ್ಲ. ಮುಂದಿನ ದಿನಗಳಲ್ಲಿ ಅರಣ್ಯ ಮಂತ್ರಿಗಳ ಸಮ್ಮುಖದಲ್ಲಿ ಜಿಲ್ಲೆಯಲ್ಲಿ ವಿಶೇಷ ಸಭೆ ನಡೆಸಿ, ಯೋಜನೆ ಕಾರ್ಯಗತಗೊಳಿಸಲು ಮುಂದಾಗುವುದಾಗಿ ಭರವಸೆ ನೀಡಿದರು

ಸಂಸದ ಯದುವೀರ್ ಒಡೆಯರ್ ಮಾತನಾಡಿ, ಗಡಿಭಾಗದಲ್ಲಿ ಪರಿಸ್ಥಿತಿ ಗಂಭೀರವಾಗಿದೆ ವನ್ಯಜೀವಿ ಬದುಕಿಗೆ ಪೂರಕವಾಗಿ ಭೂಪ್ರದೇಶದ ಮಿತಿ ಬಗ್ಗೆ ಗಂಭೀರ ಚಿಂತನೆ ನಡೆಯಬೇಕಿದೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರ ನೇರವಾಗಿ ಕೇಂದ್ರದ ಅನುಮತಿ ಇಲ್ಲದೆ ತೊಡಗಿಸಿಕೊಳ್ಳಬಹುದಾಗಿದೆ. ಅವುಗಳ ನಿಯಂತ್ರಣಕ್ಕೆ ಯಾವುದೇ ಕಠಿಣ ಕ್ರಮಕ್ಕೂ ಬೆಂಬಲ ನೀಡಲಾಗುವುದು. ಕಾಡಾನೆಗಳ ನಿಯಂತ್ರಣಕ್ಕೆ ಅರಣ್ಯ ಇಲಾಖೆ ಸೂಕ್ತ ಅಧ್ಯಯನ ನಡೆಸಿ ಕ್ರಮಕ್ಕೆ ಮುಂದಾಗಬೇಕಿದೆ. ಕ್ರಮ ಸಂತೋಷಕರವಲ್ಲದಿದ್ದರೂ ಅನುಷ್ಠಾನ ಮುಖ್ಯ ಎಂದು ಅರಣ್ಯ ಇಲಾಖೆಗೆ ಸೂಚಿಸಿದರು.

ವಿರಾಜಪೇಟೆ ಡಿಸಿಎಫ್ ಜಗನ್ನಾಥ್, ನಾಗರಹೊಳೆ ಪ್ರಭಾರ ಡಿಸಿಎಫ್ ಕಿರುಂಬನಮ್ ಹೋರಾಟಗಾರರ ಮನವಿ ಆಲಿಸಿದರು. ಪ್ರತಿಭಟನೆ ನಡೆಯುತ್ತಿದ್ದಾಗಲೇ ಮತ್ತಿ ಗೋಡು ಸಾಕಾನೆ ಕ್ಯಾಂಪ್‌ನಿಂದ ಲಾರಿಗಳಲ್ಲಿ 5 ಆನೆಗಳನ್ನು ಕಾಡಾನೆ ಸೆರೆ ಕಾರ್ಯಾಚರಣೆಗಾಗಿ ಘಟನಾ ಸ್ಥಳಕ್ಕೆ ಕರೆತರಲಾಯಿತು.

ಸಹಕಾರ ಕ್ಷೇತ್ರದ ಕೆಲಸವನ್ನು ದೇಶಸೇವೆ ಎಂದರಿತು ಕಾರ್ಯ ನಿರ್ವಹಿಸಿ



ಯೂನಿಯನ್ ಅಧ್ಯಕ್ಷ ಪಿ.ಯು.ರಾಬಿನ್ ದೇವಯ್ಯ ಶಿಕ್ಷಣ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಮಡಿಕೇರಿ: ಸಹಕಾರ ಕ್ಷೇತ್ರ ರೈತರ ಬೆನ್ನೆಲುಬಾಗಿದ್ದು, ಇಂತಹ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ತಮ್ಮ ಕೆಲಸವನ್ನು ದೇಶ ಸೇವೆ ಎಂದು ಅರಿತುಕೊಂಡು ತೃಪ್ತಿದಾಯಕವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಪಿ.ಯು.ರಾಬಿನ್ ದೇವಯ್ಯ ತಿಳಿಸಿದರು.

ಸಹಕಾರ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳು, ತಿದ್ದುಪಡಿಗಳು, ನೀತಿ ನಿಯಮ, ಕಾನೂನುಗಳನ್ನು ಆಯಾ ಕಾಲಘಟ್ಟದಲ್ಲಿ ಮಾರ್ಪಾಡು ಮಾಡಲಾಗುತ್ತದೆ. ಇಂತಹ ವಿಚಾರಗಳ ಬಗ್ಗೆ ಸಹಕಾರ ಕ್ಷೇತ್ರಗಳ ಸಿಬ್ಬಂದಿಗಳು ಅರಿತುಕೊಂಡು, ಕೆಳ ಹಂತದ ಸಿಬ್ಬಂದಿಗಳಿಗೂ ಮನವರಿಕೆ ಮಾಡಿಸುವ ಕೆಲಸವೂ ನಿಮ್ಮದಾಗಿದೆ. ರೈತರಿಗೆ ಈ ಕುರಿತು ಮಾಹಿತಿ ನೀಡುವ ಉತ್ತರದಾಯಿತ್ವ ಕೂಡ ನಿಮ್ಮ ಮೇಲಿದೆ ಎಂದು ಹೇಳಿದರು.

ದೇಶದ ಗಡಿಯಲ್ಲಿ ನಿಂತು ದೇಶ ರಕ್ಷಣೆ ಮಾಡುವ ಅವಕಾಶ ಎಲ್ಲರಿಗೂ ದೊರಕಲಾರದು. ಹಾಗೆ ತಾವು ಮಾಡುವ ಕೆಲಸವೂ ದೇಶ ಸೇವೆ ಎಂದು ಅರಿತುಕೊಂಡು ತೃಪ್ತಿದಾಯಕ ಸೇವೆಯನ್ನು ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಬೇಕು. ಇದರಿಂದ ಸೇವಾ ನಿವೃತ್ತಿಯ ಬಳಿಕವೂ ಆತ್ಮ ತೃಪ್ತಿ ಇರಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅತಿಥಿ ಉಪನ್ಯಾಸಕ ಹಾಗೂ ಹಾಸನದ ಸನ್ನದ್ದು ಲೆಕ್ಕಿಗರಾದ ಸಿ.ಎ. ಶಂಭುಲಿಂಗಪ್ಪ ಮಾತನಾಡಿ, ಸಹಕಾರ ಸಂಸ್ಥೆ ರೈತ ಉಪಯೋಗಿ ವಸ್ತುಗಳನ್ನು ಡೀಲರ್‌ಗಳಿಂದ ಖರೀದಿಸುವ ಸಂದರ್ಭ ಎಸ್‌ಜಿಎಸ್‌ಟಿ, ಸಿಜಿಎಸ್‌ಟಿ ಸಹಿತ ಇನ್‌ವೈಸ್ ಬಿಲ್ ಹೊಂದುವುದು ಕಡ್ಡಾಯವಾಗಿದೆ. ಇಲ್ಲವಾದಲ್ಲಿ ಸಹಕಾರ ಸಂಸ್ಥೆಗಳು ತೆರಿಗೆಯ ನಷ್ಟವನ್ನು ಎದುರಿಸಬೇಕಾಗುತ್ತದೆ. ಜಿಎಸ್‌ಟಿ ನೋಂದಾಯಿತ ಡೀಲರ್‌ಗಳಿಂದ ಮಾತ್ರವೇ ಖರೀದಿ ವ್ಯವಹಾರ ನಡೆಸಬೇಕು. ಈ ನಿಟ್ಟಿನಲ್ಲಿ ಅಗತ್ಯವಾಗಿ ಜಾಗೃತಿ ವಹಿಸಬೇಕು ಎಂದು ಸಲಹೆ ನೀಡಿದರು. ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರಾದ ಎ.ಎಸ್. ಶ್ಯಾಂಚಂದ್ರ, ಎಂ.ಎಂ. ಶ್ಯಾಮಲ, ಎಂ.ಟಿ. ಸುಬ್ಬಯ್ಯ, ಜಿಲ್ಲಾ ಸಹಕಾರ ಯೂನಿಯನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯೋಗೇಂದ್ರ ನಾಯಕ ಉಪಸ್ಥಿತರಿದ್ದರು.

ಹುಲಿ ದಾಳಿಗೆ ಎರಡು ಜಾನುವಾರು ಬಲಿ

ಮಡಿಕೇರಿ: ತಾಲೂಕಿನ ಮರಗೋಡು ಗ್ರಾಮದ ಕುಯ್ಯಮುಡಿ ಮೋತಿಲಾಲ್ ಎಂಬವರ ಎರಡು ಜಾನುವಾರುಗಳ ಮೇಲೆ ಹುಲಿ ದಾಳಿ ಮಾಡಿ ಕೊಂದಿರುವ ಬಗ್ಗೆ ವರದಿಯಾಗಿದೆ. ಗ್ರಾಮದ ಹೊರವಲಯದಲ್ಲಿರುವ ಕೃಷಿ ಜಮೀನಿನಲ್ಲಿ ಜಾನುವಾರುಗಳನ್ನು ಮೇಯಲು ಬಿಟ್ಟಿದ್ದ ವೇಳೆ ಹುಲಿ ದಾಳಿ ನಡೆಸಿ ಒಂದು ಜಾನುವಾರಿನ ಅರ್ಧ ಭಾಗವನ್ನು ತಿಂದು ಹಾಕಿದೆ.



ಗ್ರಾಮಸ್ಥರು ಜಾನುವಾರುಗಳ ಕಳೇಬರಗಳನ್ನು ಪತ್ತೆ ಹಚ್ಚಿ ಅರಣ್ಯ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಅರಣ್ಯ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ.

ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಗಮನಕ್ಕೆ

ಮಡಿಕೇರಿ: ಗೃಹಲಕ್ಷ್ಮಿ ಯೋಜನೆಯಡಿ ನೋಂದಾಯಿಸಿಕೊಂಡಿರುವ ಫಲಾನುಭವಿಗಳಿಗೆ ಜೀವಂತ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಮಾಡಬೇಕೆಂದು ಸಂಸ್ಥೆಗಳು ಹಾಗೂ ಕೆಲವು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸಿ ಪ್ರಮಾಣ ಪತ್ರ ಮಾಡಿಸಲು ಹಣ ವಸೂಲು ಮಾಡುತ್ತಿರುವುದು ಗಮನಕ್ಕೆ ಬಂದಿದ್ದು, ಜೀವಂತ ಪ್ರಮಾಣ ಪತ್ರವನ್ನು ಮಾಡಿಸುವ ಬಗ್ಗೆ ಸರ್ಕಾರದಿಂದ ಅಧಿಕೃತ ಆದೇಶ ಸ್ವೀಕೃತವಾ ಗಿರುವುದಿಲ್ಲ. ಆದ್ದರಿಂದ ಅಧಿಕೃತ ಆದೇಶ ಬಂದ ಕೂಡಲೇ ನಿರ್ದೇಶನ ನೀಡಲಾ ಗುವುದು. ಫಲಾನುಭವಿಗಳು ಸಹಕರಿಸುವಂತೆ ಸೋಮವಾರಪೇಟೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅವರು ತಿಳಿಸಿದ್ದಾರೆ.

ಮೂರು ವರ್ಷದಲ್ಲಿ ಗುಂಡ್ಲುಪೇಟೆ ಅಭಿವೃದ್ಧಿಗೆ 900 ಕೋಟಿ ರೂ. ಅನುದಾನ

ಮಾಧ್ಯಮ ಸಂವಾದದಲ್ಲಿ ಗುಂಡ್ಲುಪೇಟೆ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಮಾಹಿತಿ

ಚಾಮರಾಜನಗರ, ಜೂ.6– ತಾವು ಕ್ಷೇತ್ರದ ಶಾಸಕರಾಗಿ ಆಯ್ಕೆಯಾದ ಮೂರು ವರ್ಷದ ಅವಧಿಯಲ್ಲಿ ರಾಜ್ಯ ಸರ್ಕಾರ ಜಾರಿ ಮಾಡಿರುವ ಪಂಚ ಗ್ಯಾರಂಟಿಗಳ ನಡುವೆ ಗುಂಡ್ಲುಪೇಟೆ ವಿಧಾನಸಭೆ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ರಾಜ್ಯ ಸರ್ಕಾರದಿಂದ ಸುಮಾರು 900 ಕೋಟಿ ರೂ. ಅನುದಾನ ತಂದಿದ್ದೇನೆ ಎಂದು ಗುಂಡ್ಲುಪೇಟೆ ವಿಧಾನಸಭೆ ಕ್ಷೇತ್ರದ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಮಾಧ್ಯಮ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದರು.

523 ಕೋಟಿ ಅನುದಾನದಲ್ಲಿ ತಾಲೂಕಿನ 110 ಕೆರೆಗಳಿಗೆ ನದಿಮೂಲದಿಂದ ನೀರು ತುಂಬಿಸಲು 475 ಕೋಟಿ ರೂ., 50 ಕೋಟಿ ರೂ.ವೆಚ್ಚದಲ್ಲಿ ಬೇಗೂರಿನಲ್ಲಿ ಹತ್ತಿ ಮಾರುಕಟ್ಟೆ ಸ್ಥಾಪನೆಗೆ ಸಿಎಂ ಅವರಿಂದ ಶಂಕುಸ್ಥಾಪನೆಯಾಗಿದೆ. ಮೊರಾರ್ಜಿ ದೇಸಾಯಿ, ಅಂಬೇಡ್ಕರ್ ವಸತಿ ಶಾಲೆಗಳಿಗೆ ರಸ್ತೆ ನಿರ್ಮಿಸಲು 77 ಕೋಟಿ, ವಡ್ಡಗೆರೆ, ಅರೇಪುರ, ಗೋಪಾಲಪುರದಲ್ಲಿ 45 ಕೋಟಿ ರೂ.ವೆಚ್ಚದಲ್ಲಿ ವಿದ್ಯುತ್ ವಿತರಣಾ ಕೇಂದ್ರ ನಿರ್ಮಿಸಲು ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದರು.

ಗುಂಡ್ಲುಪೇಟೆ ಎಪಿಎಂಸಿ ಮಾರುಕಟ್ಟೆಗೆ 9 ಕೋಟಿ ರೂ. ವೆಚ್ಚದಲ್ಲಿ ಸುತ್ತುಗೋಡೆ ನಿರ್ಮಿಸಲಾಗುತ್ತದೆ. ಬೊಮ್ಮನಹಳ್ಳಿ ಅಂಬೇಡ್ಕರ್ ವಸತಿಶಾಲೆ ನಿರ್ಮಾಣಕ್ಕೆ 25ಕೋಟಿ. ಕೆಆರ್‌ಐಡಿಎಲ್‌ನಿಂದ ನಿರ್ಮಿಸಲಾಗುವ 320 ಕಾಮಗಾರಿಗಳಿಗೆ 91.82 ಕೋಟಿ, ಸಮುದಾಯಭವನ ಸೇರಿದಂತೆ 247 ಕಾಮಗಾರಿಗಳಿಗೆ 52 ಕೋಟಿ, ಪಂಚಾಯತ್ ರಾಜ್ ಇಲಾಖೆಯ ಕಾಮಗಾರಿಗಳಿಗೆ 16 ಕೋಟಿ, ಗುಂಡ್ಲುಪೇಟೆ ಪಟ್ಟಣಕ್ಕೆ ಕುಡಿಯುವ ನೀರು ಒದಗಿಸುವ ಎಕ್ಸ್‌ಪ್ರೆಸ್ ಲೈನ್ ಕಾಮಗಾರಿಗೆ 161 ಕೋಟಿ, 90 ಕೋಟಿ ರೂ. ವೆಚ್ಚದ ಒಳಚರಂಡಿ ಅಭಿವೃದ್ಧಿ ಕಾಮಗಾರಿಗೆ ಅನುಮೋದನೆ ದೊರೆತಿದೆ. ಗಣಿಬಾಧಿತ ಪ್ರದೇಶಗಳಿಗೆ ರಸ್ತೆ ನಿರ್ಮಿಸಲು 2ಕೋಟಿ ರೂ. ಬಂಡೀಪುರ ರಾಷ್ಟ್ರೀಯ ಉದ್ಯಾನದ ಅಂಚಿನಲ್ಲಿ ಕಾಡುಪ್ರಾಣಿಗಳು ನಾಡಿಗೆ ಬರದಂತೆ ತಡೆಯಲು 11ಕಿ.ಮೀ ವ್ಯಾಪ್ತಿಯಲ್ಲಿ ರೈಲ್ವೇ ಬ್ಯಾರಿಕೇಡ್ ಅಳವಡಿಸಲು 10 ಕೋಟಿ ರೂ.ವೆಚ್ಚದಲ್ಲಿ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದರು.

ತಮ್ಮ ಅವಧಿಯಲ್ಲೇ ಗುಂಡ್ಲುಪೇಟೆ ಪಟ್ಟಣಕ್ಕೆ ಸಂಚಾರಿ ಪೊಲೀಸ್ ಠಾಣೆ ಮಂಜೂರಾಗಿರುವುದು ಸಂತಸ ತಂದಿದೆ, ಉಳಿದ ಎರಡು ವರ್ಷದ ಅವಧಿಯಲ್ಲಿ ಕ್ಷೇತ್ರಕ್ಕೆ ಮತ್ತಷ್ಟು ಅನುದಾನ ತರುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ಸಂವಾದದಲ್ಲಿ ಜಿಲ್ಲಾಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎನ್. ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು ಹಾಜರಿದ್ದರು.

ಅಭಿವೃದ್ಧಿಯ ಹೊಸ ಪ್ರಸ್ತಾವನೆಗಳು

ಚಾಮರಾಜನಗರ, ಜೂ.6– ಗುಂಡ್ಲುಪೇಟೆ ವಿಧಾನಸಭೆ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಹೊಸ ಪ್ರಸ್ತಾವನೆಗಳನ್ನು ಸಲ್ಲಿಸಿರುವುದಾಗಿ ಗುಂಡ್ಲುಪೇಟೆ ವಿಧಾನಸಭೆ ಕ್ಷೇತ್ರದ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ಮಾಧ್ಯಮ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದ ಅವರು ಕ್ಷೇತ್ರ ವ್ಯಾಪ್ತಿಯ ಪ್ರಮುಖ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಿಎಚ್‌ಸಿಗಳಾಗಿ ಮೇಲ್ದರ್ಜೆಗೇರಿಸುವುದು, ಗುಂಡ್ಲುಪೇಟೆ ಪಟ್ಟಣದ ಪುರಸಭೆಗೆ ಹೊಸಕಟ್ಟಡ ನಿರ್ಮಾಣ, ಪಿಎಂಜಿಎಸ್‌ವೈ ಯೋಜನೆಯಡಿ ರಸ್ತೆ ನಿರ್ಮಿಸಲು 30 ಕೋಟಿಗೆ ಪ್ರಸ್ತಾವನೆ, ಗ್ರಾಮ ಸಂಪರ್ಕ ರಸ್ತೆಗಳ ಅಭಿವೃದ್ಧಿಗೆ 22ಕೋಟಿ, ಹೋಬಳಿಕೇಂದ್ರ ಹಂಗಳ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸಲು 3.50 ಕೋಟಿ ರೂ.ಗಳ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.



ಮಾಧ್ಯಮ ಸಂವಾದದಲ್ಲಿ ಶಾಸಕ ಗಣೇಶ್ ಪ್ರಸಾದ್ ಮಾತನಾಡುತ್ತಿರುವುದು.

ಶೇ100ಕ್ಕೆ 100 ನಾನು ಸಚಿವ ಸ್ಥಾನದ ಆಕಾಂಕ್ಷಿಯಲ್ಲ

ಚಾಮರಾಜನಗರ, ಜೂ.6– ರಾಜ್ಯದಲ್ಲಿ ಜೂ.3ರಂದು ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಸಚಿವ ಸ್ಥಾನಕ್ಕಾಗಿ ಬೇಡಿಕೆಯಿಟ್ಟಿಲ್ಲ. ಮೇಲಾಗಿ ನಾನು ಶೇ 100ಕ್ಕೆ 100 ಸಚಿವ ಸ್ಥಾನದ ಆಕಾಂಕ್ಷಿಯಲ್ಲ ಎಂದು ಗುಂಡ್ಲುಪೇಟೆ ವಿಧಾನಸಭೆ ಕ್ಷೇತ್ರದ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ಮಾಧ್ಯಮ ಸಂವಾದದಲ್ಲಿ ಸುದ್ದಿಗಾರರ ಜತೆ ಮಾತನಾಡಿ, ಸಚಿವರು ಹಾಗೂ ಕ್ಷೇತ್ರದ ಶಾಸಕರಾಗಿದ್ದ ನನ್ನ ತಂದೆ ದಿ.ಎಚ್.ಎಸ್.ಮಹದೇವಪ್ರಸಾದ್ ಗುಂಡ್ಲುಪೇಟೆ ವಿಧಾನಸಭೆ ಕ್ಷೇತ್ರವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಬೇಕು ಎಂಬ ಆಶಯ ಹೊಂದಿದ್ದರು. ಕ್ಷೇತ್ರದ ಜನತೆ ನನ್ನನ್ನು ಆಯ್ಕೆ ಮಾಡಿದ್ದಾರೆ. ಕ್ಷೇತ್ರದಲ್ಲಿದ್ದುಕೊಂಡು, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತೇನೆ. ಕ್ಷೇತ್ರದ ಜನರು ಯಾವುದೇ ಆತಂಕಪಡುವ ಅಗತ್ಯವಿಲ್ಲ ಎಂದರು.

ಕನ್ನಡ ಚಿತ್ರರಂಗ ವಿಶ್ವಖ್ಯಾತಿಗೊಳಿಸಿದವರು ಪುಟ್ಟಣ್ಣ ಕಣಗಾಲ್: ಎನ್.ಋಗ್ವೇದಿ

ಚಾಮರಾಜನಗರ: ಕನ್ನಡ ಚಿತ್ರರಂಗದ ನಿರ್ದೇಶಕ ಸ್ಥಾನಕ್ಕೆ ವಿಶ್ವಖ್ಯಾತಿ ತಂದುಕೊಟ್ಟವರು ಪುಟ್ಟಣ್ಣ ಕಣಗಾಲ್ ಅವರ ಚಿಂತನೆ, ದೂರದೃಷ್ಟಿ, ಸೃಜನಶೀಲತೆ, ಹೊಸ ರೂಪದ ಯೋಚನೆ, ವಿಶ್ವ ಶ್ರೇಷ್ಠ ನಿರ್ದೇಶಕರನ್ನಾಗಿ ಮಾಡಿ ಕನ್ನಡಿಗರು ಹೆಮ್ಮೆಪಡುವಂತೆ ಮಾಡಿದರು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ಸಂಸ್ಕೃತಿ ಚಿಂತಕರಾದ ಸುರೇಶ್ ಎನ್.ಋಗ್ವೇದಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಚಿತ್ರ ಬ್ರಹ್ಮ ಪುಟ್ಟಣ್ಣ ಕಣಗಾಲ್ ಅವರ ಕೊಡುಗೆಗಳು ಕುರಿತು ಮಾತನಾಡುತ್ತಾ ಪುಟ್ಟಣ್ಣ ಕಣಗಾಲ್ ಕಾದಂಬರಿ ಆಧಾರಿತ ಚಿತ್ರಗಳನ್ನು ನಿರ್ಮಿಸಿ ವಿಶೇಷ ಶೈಲಿಯ ಮೂಲಕ ನಿರ್ದೇಶನ ನೀಡಿದವರು. ಇವರ ಚಿತ್ರಗಳಲ್ಲಿ ಕಲೆ, ಸಾಹಿತ್ಯ, ಭಾವನಾತ್ಮಕತೆ, ಮಾನವೀಯ ಸಂಬಂಧಗಳು, ಸಾಮಾಜಿಕ ಕಾಳಜಿ, ಆಳವಾದ ಮಹಿಳಾ ಪ್ರಾಧಾನ್ಯತೆ ಮುಂತಾದ ದೃಷ್ಟಿಕೋನದ ಮೂಲಕ ಕನ್ನಡ ಚಿತ್ರಗಳನ್ನು ನಿರ್ದೇಶಿಸಿ ಕನ್ನಡ ಚಿತ್ರರಂಗ ಶಾಶ್ವತವಾಗಿ ಉಳಿಯುವಂತೆ ಮಾಡಿದವರು ಎಂದರು.

ಇವರ ಚಿತ್ರಗಳಾದ ಬೆಳ್ಳಿಮೋಡ, ಗೆಜ್ಜೆಪೂಜೆ, ನಾಗರಹಾವು, ಶರಪಂಜರ, ಶುಭ ಮಂಗಳ, ಸಾಕ್ಷಾತ್ಕಾರ, ಅಮೃತ ಘಳಿಗೆ, ಮಸಣದ ಹೂವು ಚಿತ್ರಗಳು ಕಣಗಾಲ್ ಅವರಿಗೆ ವಿಶ್ವಖ್ಯಾತಿ ತಂದುಕೊಟ್ಟವು. ಕನ್ನಡದಲ್ಲಿ 24 ಚಿತ್ರಗಳ ನಿರ್ದೇಶನ ಮಾಡಿ ಹಿಂದಿ ಮತ್ತು ಮಲಯಾಳಂ ಗಳಲ್ಲೂ ನಿರ್ದೇಶನ ಮಾಡಿ ಪ್ರಸಿದ್ಧರಾದವರು ಎಂದು ಅವರು ಹೇಳಿದರು.



ಪುಟ್ಟಣ್ಣ ಕಣಗಾಲ್ ಅವರ ಕೊಡುಗೆಗಳು ಕಾರ್ಯಕ್ರಮದಲ್ಲಿ ಗಣ್ಯರು.

ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾದ ಎಲ್.ಸುರೇಶ್ ಮಾತನಾಡಿದರು. ಪ್ರಾಸ್ತಾವಿಕವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕರಾದ ಬಿಕೆ ಆರಾಧ್ಯ ಪುಟ್ಟಣ್ಣ ಕಣಗಾಲ್ ಅವರ ಜೀವನ ಪ್ರಶಸ್ತಿ ಗೌರವ ಹಾಗೂ ಅವರ ಸಾಧನೆಗಳ ಕುರಿತು ಪರಿಚಯ ಮಾಡಿಕೊಟ್ಟರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕರಾದ ಎಲ್ ಶಿವಲಿಂಗ ಮೂರ್ತಿ ರವರು ಪುಟ್ಟಣ್ಣ ಕಣಗಾಲ್ ನಿರ್ದೇಶನದ ಚಿತ್ರಗಳ ಗೀತೆಗಳನ್ನು ಹಾಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸರಸ್ವತಿ, ಉಮೇಶ್, ರಾಜೇಶ್, ಹನುಮಂತ ನಾಯಕ, ಮಂಜುನಾಥ್, ವೆಂಕಟೇಶ್, ರಘು ಮುಂತಾದವರು ಉಪಸ್ಥಿತರಿದ್ದರು.

ಜೂ.9 ರಂದು ನಗರದಲ್ಲಿ ಉಚಿತ ಕೃತಕ ಕೈ–ಕಾಲು ಜೋಡಣಾ ಶಿಬಿರ

ಚಾಮರಾಜನಗರ: ರೋಟರಿ ಸಂಸ್ಥೆ, ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ ಬೆಂಗಳೂರು (ಸಿಎಸ್‌ಆರ್ ನಿಧಿ) ವತಿಯಿಂದ ನಗರದಲ್ಲಿ ಜೂ.9 ರಂದು ಉಚಿತ ಕೃತಕ ಕೈ–ಕಾಲು ಜೋಡಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ರೋಟರಿ ಸಂಸ್ಥೆಯ ಜಿಲ್ಲಾ ಮಾಜಿ ಗೌರ್ನರ ಡಾ.ನಾಗಾರ್ಜುನ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಧ್ಯಾಹ್ನ 3 ಗಂಟೆಗೆ ಉಚಿತ ಕೃತಕ ಕೈ–ಕಾಲು ಜೋಡಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಲಿದ್ದಾರೆ. ರೋಟರಿ ಸಂಸ್ಥೆಯ ಜಿಲ್ಲಾ ಗೌರ್ನರ್ ಪಿ.ಕೆ.ರಾಮಕೃಷ್ಣ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಶ್ರೀರೂಪ, ಜಿ.ಪಂ.ಸಿಇಓ ಮೋನಾರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು, ನಾಮಿನಿ ಜಿಲ್ಲಾ ಗೌರ್ನರ್ ಯಶಸ್ವಿ ಸೋಮಶೇಖರ ಭಾಗವಹಿಸಲಿದ್ದಾರೆ. ರೋಟರಿ ಅಧ್ಯಕ್ಷ ಬಿ.ಚಂದ್ರಶೇಖರ್ ಉಪಸ್ಥಿತಿ ವಹಿಸಲಿದ್ದಾರೆ ಎಂದರು.

ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ರೋಟರಿ ಸಂಸ್ಥೆಯ ಮುಂದಿನ ಸಾಲಿನ ಅಧ್ಯಕ್ಷ ಅಬ್ದುಲ್ ಅಜೀಜ್ ದಿನಾ, ಕಾರ್ಯದರ್ಶಿ ಜಿ. ಅಂಕಶೆಟ್ಟಿ, ಮಾಜಿ ಅಧ್ಯಕ್ಷ ಕಮಲ್ ರಾಜ್, ನಿರ್ದೇಶಕರಾದ ರಾಮು, ರತ್ನಮ್ಮ, ಬಸವರಾಜು ಇದ್ದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಯಶಸ್ಸಿಗೆ ಸಹಕರಿಸಿ

ಚಾಮರಾಜನಗರ, ಜೂ.6– ಚಾಮರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಯಶಸ್ಸಿಗೆ ಮತದಾರರು ಸಹರಿಸುವಂತೆ ಮತದಾರರ ನೊಂದಣಾಧಿಕಾರಿ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕರಾದ ಡಾ. ವಸುಂಧರ ಹೆಗ್ಡೆ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಆಹಾರ ಇಲಾಖೆ ಉಪನಿರ್ದೇಶಕರ ಕಚೇರಿ ಕೊಠಡಿಯಲ್ಲಿಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್.ಐ.ಆರ್) ಚಾಮರಾಜನಗರ ತಾಲೂಕಿನಲ್ಲಿಯೂ ಕೈಗೊಳ್ಳಲಾಗುತ್ತಿದೆ ಎಂದರು.



ಪತ್ರಿಕಾಗೋಷ್ಠಿಯಲ್ಲಿ ಡಾ. ವಸುಂಧರ ಹೆಗ್ಡೆ ಮಾತನಾಡಿದರು.

ಮತದಾರರ ಪಟ್ಟಿ ಸಿದ್ದಪಡಿಸುವಿಕೆಯಲ್ಲಿ ಮತದಾರರ ಪಟ್ಟಿಯಲ್ಲಿ ಎಲ್ಲ ಅರ್ಹ ನಾಗರಿಕರು ಸೇರ್ಪಡೆ ಗೊಂಡಿರುವುದನ್ನು ಹಾಗೂ ಅರ್ಹರು ಮತದಾರರ ಪಟ್ಟಿಯಿಂದ ಕೈಬಿಡದಿರುವುದನ್ನು ಖಚಿತಪಡಿಸಿಕೊಳ್ಳಲು, ಮುಕ್ತ, ನಿಷ್ಪಕ್ಷಪಾತ ಚುನಾವಣೆ ನಡೆಸಲು ಮತದಾರರ ಪಟ್ಟಿಯ ವಿಶ್ವಾಸಾರ್ಹತೆಯನ್ನು ಕಾಪಾಡಿಕೊಳ್ಳುವುದು ಅತ್ಯಂತ ಅಗತ್ಯವಾಗಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸುತ್ತಿದೆ ಎಂದು ಹೇಳಿದರು.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ಕಾಗಿ ಚಾಮರಾಜನಗರ ವಿಧಾನ ಸಭಾ ಕ್ಷೇತ್ರದಲ್ಲಿ ಈಗಾಗಲೇ 239 ಮತಗಟ್ಟೆಗಳಿಗೆ ಮತಗಟ್ಟೆ ಮಟ್ಟದ ಅಧಿಕಾರಿಗಳನ್ನು ನೇಮಿಸಲಾಗಿದೆ. ಮತಗಟ್ಟೆ ಅಧಿಕಾರಿಗಳಿಗೆ 3 ಬಾರಿ ತರಬೇತಿಯನ್ನು ಸಹ ನೀಡಲಾಗಿದೆ. ಚಾಮರಾಜನಗರ ವಿಧಾನ ಸಭಾ ಕ್ಷೇತ್ರದಲ್ಲಿ 105796 ಪುರುಷರು, 111826 ಮಹಿಳೆಯರು ಹಾಗೂ 16 ಮಂದಿ ಇತರರು ಸೇರಿದಂತೆ ಒಟ್ಟು 217638 ಮಂದಿ ಮತದಾರರಿದ್ದಾರೆ ಎಂದು ಅವರು ತಿಳಿಸಿದರು.

ದಿನಾಂಕ 1–10–2026 ಅನ್ನು ಅರ್ಹತಾ ದಿನಾಂಕ ಎಂದು ಪರಿಗಣಿಸಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ಜೂನ್ 30 ರಿಂದ ಜುಲೈ 29ರವರೆಗೆ ಬೂತ್ ಮಟ್ಟದ ಅಧಿಕಾರಿಗಳು (ಬಿ.ಎಲ್.ಒ) ಮನೆ ಮನೆಗೆ ಭೇಟಿ ನೀಡಲಿದ್ದಾರೆ. ಮತಗಟ್ಟೆಗಳ ಪುನರ್ ವಿಂಗಡಣೆ ಜುಲೈ 29 ರೊಳಗೆ ನಡೆಯಲಿದೆ. ಕರಡು ಮತದಾರರ ಪಟ್ಟಿಯನ್ನು ಆಗಸ್ಟ್ 5ರಂದು ಪ್ರಕಟಿಸಲಾಗುತ್ತದೆ. ಆಗಸ್ಟ್ 5 ರಿಂದ ಸೆಪ್ಟೆಂಬರ್ 4ರವರೆಗೆ ಹಕ್ಕು ಆಕ್ಷೇಪಣೆಗಳ ಸಲ್ಲಿಕೆಗೆ ಅವಕಾಶವಿದೆ. ಆಗಸ್ಟ್ 5 ರಿಂದ ಅಕ್ಟೋಬರ್ 3ರವರೆಗೆ ಹಕ್ಕು ಆಕ್ಷೇಪಣೆಗಳನ್ನು ವಿಲೇವಾರಿ ಮಾಡಲಾಗುತ್ತದೆ. ಅ.7ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುತ್ತದೆ ಎಂದು ವಿವರಿಸಿದರು.

ಚುನಾವಣಾ ಆಯೋಗದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಮಾನ್ಯತೆ ಪಡೆದ ಎಲ್ಲ ರಾಜಕೀಯ ಪಕ್ಷಗಳು ಪ್ರತಿ ಮತಗಟ್ಟೆಗೆ ಬೂತ್ ಮಟ್ಟದ ಏಜೆಂಟರನ್ನು ನೇಮಿಸಲು ಕೋರಲಾಗಿದೆ ಎಂದು ಕ್ಷೇತ್ರದ ಮತದಾರರ ನೊಂದಣಾಧಿಕಾರಿ ಡಾ.ವಸುಂಧರ ಹೆಗ್ಡೆ ವಿವರಿಸಿದರು.

ಚಾಮರಾಜನಗರ ತಾಲೂಕು ತಹಶೀಲ್ದಾರ್ ಬಿ. ಗಿರಿಜಾ ಅವರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ


ಮೈಸೂರು ಮಿತ್ರ

ಭಾನುವಾರ 07-06-2026

ಪುಟ 9

ಎಲ್ಲಿ ಹೋದವು? ಗರಡಿ ಮನೆಗಳು





"ಜನರ ನಡುವೆ ಸಾಮರಸ್ಯ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಗರಡಿ ಮನೆಗಳಲ್ಲಿ ಯಾವುದೇ ಜಾತಿ ಅಥವಾ ಧರ್ಮದ ಭೇದ ಇರಲಿಲ್ಲ. ಕುಸ್ತಿ ಅಖಾಡಕ್ಕೆ ಇಳಿಯುವ ಎಲ್ಲರೂ ಪೈಲ್ವಾನರೇ, ಇದೇ ಅವರ ಜಾತಿ ಆಗಿತ್ತು. ಹಬ್ಬ ಹಾಗೂ ಜಾತ್ರೆಗಳಲ್ಲಿ ಕಾಟಾ ಕುಸ್ತಿಗಳ ಅಖಾಡಗಳು ಆಕರ್ಷಣೆಯ ಕೇಂದ್ರಗಳಾಗಿದ್ದವು. ಟಿಕೆಟ್ ಕುಸ್ತಿಗಳನ್ನು ಏರ್ಪಡಿಸುತ್ತಿದ್ದರು, ಮೈಸೂರು ದಸರಾದಲ್ಲಿ ಕುಸ್ತಿ ಪಂದ್ಯಾವಳಿಗಳನ್ನು ತಪ್ಪದೆ ನಡೆಸುತ್ತಾರೆ, ಗೆದ್ದವರಿಗೆ ಕಂಠೀರವ, ಮೈಸೂರು ಕೇಸರಿ, ದಸರಾ ಕೇಸರಿ ಮುಂತಾದ ಬಿರುದುಗಳನ್ನು ನೀಡಿ ಗೌರವಿಸುತ್ತಾರೆ.



ಗರಡಿ ಎಂಬ ದೈಹಿಕ ಕಸರತ್ತಿನ ಒಳಾಂಗಣ ಕ್ರೀಡೆಗೆ ಕರ್ನಾಟಕದ ಗ್ರಾಮೀಣ ಸಂಸ್ಕೃತಿ ಮತ್ತು ಇತಿಹಾಸದಲ್ಲಿ ಅತ್ಯಂತ ಗೌರವಾನ್ವಿತ ಸ್ಥಾನವಿದೆ, ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಗರಡಿಗೆ ವಿಶೇಷ ಪ್ರಾಮುಖ್ಯತೆ ಇತ್ತು. ಹಳ್ಳಿಗಳು ಕೂಡ ನಗರ ಸಂಸ್ಕೃತಿಯನ್ನು ಅನುಸರಿಸುತ್ತಿರುವುದರಿಂದ ಗರಡಿ ಮನೆಗಳು ಜಿಮ್‌ಗಳಾಗಿ ಬದಲಾಗಿವೆ, ಗರಡಿ ಮನೆಗಳು ನಶಿಸಿ ಹೋಗುತ್ತಿವೆ. ಮೈಸೂರಿನಂತಹ ಕೆಲವು ನಗರಗಳಲ್ಲಿ ಇಂದಿಗೂ ಕಾಣಬಹುದು. ಗರಡಿ ಮನೆಗಳು ಕೇವಲ ದೈಹಿಕ ಕಸರತ್ತಿನ ಕೇಂದ್ರಗಳಾಗಿರದೆ ಗ್ರಾಮಗಳ ರಕ್ಷಣೆ, ಸಂಸ್ಕಾರ, ಮನರಂಜನೆ ಮತ್ತು ಒಗ್ಗಟ್ಟಿನ ಸಂಕೇತಗಳಾಗಿದ್ದವು.

ರಾಜಪ್ರಭುತ್ವದ ಸುವರ್ಣಕಾಲ ಹದಿನೈದನೇ ಶತಮಾನದ ವಿಜಯನಗರ ಸಾಮ್ರಾಜ್ಯದ ಆಡಳಿತಾವಧಿ ಹಾಗೂ ಮೈಸೂರು ಒಡೆಯರ ಸಂಸ್ಥಾನದಲ್ಲಿ ಸಂಸ್ಕೃತಿ, ಧರ್ಮ, ಕಲೆ ಮತ್ತು ಸಾಹಿತ್ಯವನ್ನು ಪರಕೀಯರಿಂದ ಸಂರಕ್ಷಿಸಿ ಪೋಷಿಸಿ ಬೆಳೆಸಿದವರು. ಗರಡಿ ಮನೆಗಳು ಸಹ ಇವರುಗಳಿಂದ ಮಹತ್ವ ಪಡೆದಿತ್ತು. ಯುದ್ಧಕ್ಕೆ ಸೈನಿಕರನ್ನು ಸಿದ್ಧಗೊಳಿಸಲು ಪ್ರತಿಯೊಂದು ಹಳ್ಳಿಗಳಲ್ಲೂ ಗರಡಿ ಮನೆಗಳನ್ನು ಸ್ಥಾಪಿಸಿದ್ದರು. ಅಂದಿನ ಕಾಲದಲ್ಲಿ ಇವುಗಳು ಗ್ರಾಮ ರಕ್ಷಣಾ ಪಡೆಗಳಿಗೆ ತರಬೇತು ನೀಡಿ ಸಿದ್ಧಪಡಿಸುವ ಕೇಂದ್ರಗಳಾಗಿದ್ದವು.

ಗರಡಿ ಮನೆಯ ಒಳಾಂಗಣದಲ್ಲಿ ಮಲ್ಲಯುದ್ಧ ಮಾಡುವುದಕ್ಕೆ ಅಖಾಡವನ್ನು ಕೆಂಪು ಮಣ್ಣಿಗೆ ಎಣ್ಣೆ, ತುಪ್ಪ, ಕರ್ಪೂರ, ಕುಂಕುಮ ಮತ್ತು ಹಾಲನ್ನು ಬೆರೆಸಿ ಹದಗೊಳಿಸಿ ನಿರ್ಮಿಸುತ್ತಿದ್ದರು. ಹದಗೊಳಿಸಿದ ಮಣ್ಣು ಕುಸ್ತಿಪಟುಗಳ ದೇಹಕ್ಕೆ ತಂಪು ನೀಡುವುದಲ್ಲದೆ ಗಾಯಗಳಾಗದಂತೆ ರಕ್ಷಿಸುತ್ತಿತ್ತು. ಶಕ್ತಿ ಹಾಗೂ ಬ್ರಹ್ಮಚರ್ಯಕ್ಕೆ ಹೆಸರಾದ ಆಂಜನೇಯ ಇಲ್ಲವೇ ಗಣಪತಿಯ ವಿಗ್ರಹವನ್ನು ಗರಡಿ ಮನೆಗಳಲ್ಲಿ ಇಡುತ್ತಿದ್ದರು, ಕಸರತ್ತನ್ನು ಆರಂಭಿಸುವ ಮೊದಲು ಪೈಲ್ವಾನರು ದೇವರಿಗೆ ಪೂಜೆ ಸಲ್ಲಿಸಿ, ಗುರುಗಳಿಗೆ ನಮಸ್ಕರಿಸಿ ಅಖಾಡದ ಮಣ್ಣನ್ನು ಹಣೆ ಗಚ್ಚಿಕೊಂಡು ಮಟ್ಟಿಗೆ ಇಳಿಯುತ್ತಿದ್ದರು. ಕಸರತ್ತು ಮಾಡುವವರನ್ನು ಪೈಲ್ವಾನ್‌ಗಳೆಂದು ಕರೆದರೆ, ಹೇಳಿಕೊಡುವ ಗುರುಗಳನ್ನು ಉಸ್ತಾದ್(ಗರಡಿ ಮೇಸ್ತ್ರು) ಎಂದು ಕರೆಯುತ್ತಿದ್ದರು. ಉಸ್ತಾದರಿಗೆ ವಿಶೇಷ ಗೌರವ ಇತ್ತು, ಇವರು ಶಿಸ್ತು, ಸಂಯಮ ಹಾಗೂ ಕುಸ್ತಿಯ ಪಾವಿತ್ರತೆಯನ್ನು ಕಾಪಾಡುತ್ತಿದ್ದರು.

ಜಿಮ್‌ಗಳಲ್ಲಿ ಇರುವಂತೆ ಆಧುನಿಕ ಹಾಗೂ ಡಿಜಿಟಲ್ ಉಪಕರಣಗಳು ಗರಡಿ ಮನೆಗಳಲ್ಲಿ ಇರಲಿಲ್ಲ, ಕಸರತ್ತಿಗೆ ಬಳಸುತ್ತಿದ್ದ ಪರಿಕರಗಳು ಸಂಪೂರ್ಣ ನೈಸರ್ಗಿಕ ಮತ್ತು ವೈಜ್ಞಾನಿಕವಾಗಿದ್ದವು. ಹನುಮಂತನ ಆಯುಧ ರೀತಿ ಇದ್ದ ಗದೆ, ಇದನ್ನು ತಿರುಗಿಸಿದರೆ ತೋಳು ಮತ್ತು ಮಣಿಕಟ್ಟುಗಳು ಬಲಗೊಳ್ಳುತ್ತಿತ್ತು. ವಿಶೇಷವಾಗಿ ನುಣ್ಣಗೆ ಹಾಗೂ ರೌಂಡಾಗಿ, ಸುಮಾರು ಏಳೆಂಟು ಅಡಿ ಎತ್ತರವಿದ್ದ ಮಲ್ಲಗಂಬದ ಮೇಲೆ ವಿವಿಧ ಆಸನ ಮತ್ತು ಕಸರತ್ತುಗಳನ್ನು ಮಾಡುತ್ತಿದ್ದರು. ಭುಜದ ಬಲ ಹೆಚ್ಚಿಸಲು ಭಾರವಾದ ಕಲ್ಲುಗುಂಡುಗಳನ್ನು ಎತ್ತುತ್ತಿದ್ದರು.

ಪೈಲ್ವಾನರುಗಳು ದೇಹದಾರ್ಢ್ಯತೆ ಮಾತ್ರವಲ್ಲದೆ, ಮಾಂಸಾಹಾರ ಮತ್ತು ಮದ್ಯಪಾನಗಳನ್ನು ಮಾಡುವುದಿಲ್ಲ, ಕುಸ್ತಿಯಿಂದ ನಿವೃತ್ತಿ ಪಡೆಯುವವರೆಗೂ ಸಾಮಾನ್ಯವಾಗಿ ಬ್ರಹ್ಮಚರ್ಯ ಪಾಲಿಸುತ್ತಾರೆ ಮತ್ತು ಸಮಾಜದಲ್ಲಿ ಉತ್ತಮ ನಾಗರೀಕನಾಗಿ ಜೀವಿಸುವ ನೈತಿಕ ಶಿಕ್ಷಣವನ್ನು ಗರಡಿಯಿಂದ ಪಡೆಯುತ್ತಾರೆ.

ಜನರ ನಡುವೆ ಸಾಮರಸ್ಯ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಗರಡಿ ಮನೆಗಳಲ್ಲಿ ಯಾವುದೇ ಜಾತಿ ಅಥವಾ ಧರ್ಮದ ಭೇದ ಇರಲಿಲ್ಲ. ಕುಸ್ತಿ ಅಖಾಡಕ್ಕೆ ಇಳಿಯುವ ಎಲ್ಲರೂ ಪೈಲ್ವಾನರೇ, ಇದೇ ಅವರ ಜಾತಿ ಆಗಿತ್ತು. ಹಬ್ಬ ಹಾಗೂ ಜಾತ್ರೆಗಳಲ್ಲಿ ಕಾಟಾ ಕುಸ್ತಿಗಳ ಅಖಾಡಗಳು ಆಕರ್ಷಣೆಯ ಕೇಂದ್ರಗಳಾಗಿದ್ದವು. ಟಿಕೆಟ್ ಕುಸ್ತಿಗಳನ್ನು ಏರ್ಪಡಿಸುತ್ತಿದ್ದರು, ಮೈಸೂರು ದಸರಾದಲ್ಲಿ ಕುಸ್ತಿ ಪಂದ್ಯಾವಳಿಗಳನ್ನು ತಪ್ಪದೆ ನಡೆಸುತ್ತಾರೆ, ಗೆದ್ದವರಿಗೆ ಕಂಠೀರವ, ಮೈಸೂರು ಕೇಸರಿ, ದಸರಾ ಕೇಸರಿ ಮುಂತಾದ ಬಿರುದುಗಳನ್ನು ನೀಡಿ ಗೌರವಿಸುತ್ತಾರೆ.



ಮಿರ್ಲೆ ಚಂದ್ರಶೇಖರ

ಹವ್ಯಾಸಿ ಬರಹಗಾರರು

ಮೊ: 9916129654



ಗ್ರಾಮೀಣ ಗರಡಿ ಮನೆಗಳು ವಿದೇಶಿ ಶೈಲಿಯ ಜಿಮ್‌ಗಳ ಹಾವಳಿಯಿಂದಾಗಿ ನಶಿಸಿಹೋಗುತ್ತಿವೆ, ಮೈಸೂರು, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಅರಸರ ಕಾಲದ ಸಾಂಪ್ರದಾಯಿಕ ಕಲೆಯಾದ ಗರಡಿ ಮನೆಗಳು ಇಂದಿಗೂ ಜೀವಂತವಾಗಿ ಇವೆ, ಆದರೆ ಅವುಗಳ ವೈಭೋಗ ಮೊದಲಿನಂತಿಲ್ಲ ಎಂಬುದು ಬೇಸರದ ಸಂಗತಿ.

ಗರಡಿಯಲ್ಲಿ ದಂತ ಕಥೆಯಾಗಿರುವ ಒಬ್ಬ ಪೈಲ್ವಾನ್‌ನ ಹೆಸರನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ. 1910ರಲ್ಲಿ ಭಾರತಕ್ಕೆ ವಿಶ್ವಕುಸ್ತಿ ಪ್ರಶಸ್ತಿಯನ್ನು ದೊರಕಿಸಿಕೊಟ್ಟ ಹೆಸರಾಂತ ಕುಸ್ತಿಪಟು ಹೆಸರು ಗುಲಾಮ್ ಮಹಮದ್, ಗಾಮ ಹೆಸರಿನಿಂದ ಪ್ರಸಿದ್ಧಿಯಾಗಿದ್ದ. ಇವನ ತಂದೆ ಅಜೀಜ್, ಸಹೋದರ ಇವ್ರಾನ್ ಕೂಡ ಪೈಲ್ವಾನರು, ಪಂಜಾಬಿನ ಅಮೃತಸರದವನು. ಇವನು ಬಾದಾಮಿಯನ್ನು ಕಡ್ಲೆಕಾಯಿಯಂತೆ ಬೆರಳಿನಿಂದ ಹೊಸಕಿ ಸಿಪ್ಪೆ ತೆಗೆದು ತಿನ್ನುತ್ತಿದ್ದನಂತೆ. ಕಬ್ಬಿಣದ ದಪ್ಪ ಮೊಳೆಗಳನ್ನು ಬಗ್ಗಿಸುತ್ತಿದ್ದನಂತೆ, ವ್ಯಾಯಾಮ ಮಾಡುವಾಗ ದಮ್ಮು ಕಟ್ಟಿ ನಿಂತು ನಾಲ್ಕಾರು ಜನ ಪೈಲ್ವಾನರುಗಳಿಂದ ಡಂಬಲ್ಸ್‌ಗಳಿಂದ ಭುಜ, ಎದೆ, ಬೆನ್ನು ಮತ್ತು ತೋಳುಗಳಿಗೆ ಏಟು ಹಾಕಿಸಿಕೊಳ್ಳುತ್ತಿದ್ದನಂತೆ.

ಲಂಡನ್ನಿನಲ್ಲಿ ನಡೆದ ವಿಶ್ವಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಲು ಹೋಗಿದ್ದ ಸಂದರ್ಭದಲ್ಲಿ ಎತ್ತರ ಮತ್ತು ತೂಕವನ್ನು ಪರಿಗಣಿಸಿ ಇವನು ಖ್ಯಾತ ಪೈಲ್ವಾನರ ಜೊತೆ ಸೆಣಸಲು ಆಗದೆಂದು ಅವಕಾಶ ನೀಡುವುದಿಲ್ಲ, ಉತ್ಸಾಹದಿಂದ ಹೋಗಿದ್ದ ಗಾಮನಿಗೆ ಬಹಳವೇ ನಿರಾಸೆ ಆಯಿತು. ಕೋಪಗೊಂಡು ಸ್ಪರ್ಧೆ ನಡೆಯಲಿದ್ದ ಕ್ರೀಡಾಂಗಣದಲ್ಲಿ ನಿಂತು ಇಲ್ಲಿ ಯಾರೇ ಆದರೂ ಸರಿ ನನ್ನನ್ನು ಗೆಲ್ಲುವುದಿರಲಿ, ನನ್ನ ಜೊತೆ ಐದು ನಿಮಿಷಗಳ ಕಾಲ ಸೆಣಸಾಡಿದರೆ ಅವರಿಗೆ 15 ಪೌಂಡುಗಳನ್ನು ಬಹುಮಾನವಾಗಿ ಕೊಡುತ್ತೇನೆಂದು ಸವಾಲು ಹಾಕುತ್ತಾನೆ. ಇಂಗ್ಲೇಂಡಿನ ಪೈಲ್ವಾನರು ಗಾಮನ ಸವಾಲನ್ನು ಎದುರಿಸಲೇಬೇಕಾಯಿತು, ಮೊದಲ ದಿನ ಬಂದ ಮೂರು ಜನ ಪೈಲ್ವಾನರನ್ನು ಕೇವಲ ಎರಡೇ ನಿಮಿಷದಲ್ಲಿ ಮಣಿಸಿದ, ಎರಡನೇ ದಿನ ಬಂದ 12 ಜನ ಪೈಲ್ವಾನರುಗಳಿಗೂ ಅದೇ ಗತಿ ಕಾಣಿಸಿದ, ನೆರೆದಿದ್ದ ಪ್ರೇಕ್ಷಕರಿಗೆ ದಿಗ್ಭ್ರಮೆ ಹಿಡಿಸಿದ. ಇದನ್ನು ಕಂಡ ವ್ಯವಸ್ಥಾಪಕರು ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ನೀಡಲೇಬೇಕಾಯಿತು. 1910 ಸೆಪ್ಟೆಂಬರ್ 10ರಂದು ಅಮೆರಿಕದ ಕುಸ್ತಿಪಟು ಇ.ರೋಲರ್‌ನ್ನು 15 ನಿಮಿಷಗಳಲ್ಲಿ 12 ಬಾರಿ ಕೆಡವಿ ಪ್ರೇಕ್ಷಕರು ಖುಷಿಯಿಂದ ಹುಚ್ಚೆದ್ದು ಕುಣಿಯುವಂತೆ ಮಾಡಿದ, ಅನಂತರ ವಿಶ್ವಚಾಂಪಿಯನ್ ಆಗಿದ್ದ ಆಸ್ಟ್ರೇಲಿಯಾದ ಜಿಬಿಸ್ಕೊನನ್ನು ಹಲವಾರು ಬಾರಿ ಸೋಲಿಸಿದ. ನೀತಿ ನಿಯಮಗಳನ್ನು ರೆಫರಿಗಳು ಸರಿಯಾಗಿ ಪಾಲಿಸದೆ ಇದ್ದ ಕಾರಣ ಸ್ಪರ್ಧೆಯನ್ನು ಮರುದಿನಕ್ಕೆ ಮುಂದೂಡಿದರು. ಆ ದಿನ ಗಾಮನು ಉತ್ಸಾಹದಿಂದ ಕುಸ್ತಿ ಅಖಾಡಕ್ಕೆ ಇಳಿದರೆ ಹಿಂದಿನ ದಿನ ಗಾಮನಿಂದ ಮೈಮೂಳೆ ಮುರಿಸಿಕೊಂಡಿದ್ದ ಜಿಬಿಸ್ಕೊ ಹಾಸಿಗೆಯಿಂದ ಏಳಲಾರದೆ ಸ್ಪರ್ಧೆಗೆ ಗೈರುಹಾಜರಾದ, ಅಂದು ಗಾಮನನ್ನು ಜಯಶಾಲಿ ಎಂದು ಘೋಷಿಸಲಾಯಿತು.

ರೋಚಕವಾಗಿ ವಿಶ್ವಕುಸ್ತಿ ಪ್ರಶಸ್ತಿಯನ್ನು ಗೆದ್ದುಕೊಂಡು ವಿಶ್ವಚಾಂಪಿಯನ್ ಬಿರುದು ಪಡೆದು ಭಾರತದ ಕೀರ್ತಿ ಪತಾಕೆಯನ್ನು ಎತ್ತಿಹಿಡಿದ. ಜಿಬಿಸ್ಕೊನನ್ನು ಅವನ ದೇಶದ ಜನರು ವಿಶ್ವಚಾಂಪಿಯನ್ ಬಿರುದನ್ನು ಮತ್ತೆ ಪಡೆಯುವಂತೆ ಒತ್ತಾಯಿಸಿದ ಕಾರಣ ಇಷ್ಟವಿಲ್ಲದಿದ್ದರೂ ಪಾಟಿಯಾಲದಲ್ಲಿ ನಡೆದ ಸ್ಪರ್ಧೆಯಲ್ಲಿ ಸ್ಪರ್ಧಿಸಿ ಕೇವಲ ಎರಡು ಸೆಕೆಂಡ್‌ಗಳಲ್ಲಿ ಜಿಬಿಸ್ಕೊನನು ಗಾಮನಿಂದ



ಸೋಲುಣಬೇಕಾಯಿತು. ಗಾಮನು ವಿಶ್ವಕ್ಕೇ ಅಜೆಯನೆನಿಸಿಕೊಂಡು ಇತಿಹಾಸದ ಸಾಧನೆಯ ಪುಟದಲ್ಲಿ ಸೇರಿದ, ಸುಮಾರು 5000 ಪಂದ್ಯಗಳಲ್ಲಿ ಅಜೇಯನಾಗಿದ್ದ. ಇಂಥಹ ಮಹಾನ್ ಶೂರನಿಗೆ ಸರ್ಕಾರದಿಂದ ಯಾವ ಪುರಸ್ಕಾರವು ದೊರೆಯಲಿಲ್ಲ, ಕಡೆಗಾಲದಲ್ಲಿ ಅನ್ನಅಹಾರಗಳಿಲ್ಲದೆ ಸಾಯುವ ದುರ್ಗತಿ ಬಂದು, ಮೂಗಿನ ಮೇಲೆ ಕುಳಿತ ನೊಣವನ್ನು ಕೂಡ ಕೈಯಿಂದ ಓಡಿಸಲಾರದ್ದಷ್ಟು ನಿಶ್ಯಕ್ತನಾಗಿದ್ದು, ದುರಂತವೇ ಸರಿ, 1953ರಲ್ಲಿ ನಿಧನ ಹೊಂದಿದ, ಅದೂ ಪಾಕಿಸ್ತಾನದಲ್ಲಿ ಮರಣ ಹೊಂದಿದ್ದು ನೋವು ತರುವಂತಹದ್ದು.


ದೇಶದಲ್ಲಿ ಗಾಮನಂತೆ ಹಲವಾರು ಪೈಲ್ವಾನರುಗಳಿದ್ದರೂ ಬೆಳಕಿಗೆ ಬಂದವರಿಗಿಂತ ತೆರೆಯ ಮರೆಯಲ್ಲಿ ಉಳಿದವರೇ ಹೆಚ್ಚು. ಇವರುಗಳಿಗೆ ಸರ್ಕಾರದಿಂದ ಗೌರವ ಪುರಸ್ಕಾರಗಳು ದೊರಕಿರುವುದು ತೀರಾ ಕಡಿಮೆ. ನಶಿಸಿ ಹೋಗುತ್ತಿರುವ ಗರಡಿ ಕಲೆ ಮತ್ತು ಗರಡಿ ಮನೆಗಳನ್ನು ಉಳಿಸಿ ಬೆಳೆಸಬೇಕಾಗಿದೆ. ಸರ್ಕಾರವು ಗರಡಿ ಕಲೆಯನ್ನು ಇತರೆ ಕ್ರೀಡೆಗಳಂತೆ ಪ್ರೋತ್ಸಾಹಿಸಬೇಕು, ಇಲ್ಲವಾದಲ್ಲಿ ರಾಜಮಹಾರಾಜರು ಗ್ರಾಮಗಳು ಹಾಗೂ ಸಂಸ್ಥಾನದ ರಕ್ಷಣೆಗಾಗಿ ಬೆಳೆಸಿದ ಪಾರಂಪರಿಕ ಕ್ರೀಡೆ ಅಥವಾ ನಾಟಿ ಕಲೆಯೊಂದು ಜಿಮ್‌ಗಳ ಹಾವಳಿಯಿಂದ ಕೆಲವೇ ದಿನಗಳಲ್ಲಿ ಸಂಪೂರ್ಣ ನಶಿಸಿ ಹೋಗುವುದು.

ಮಕ್ಕಳ ಚಿತ್ರಕಥೆ


'ಕರ್ಮದ ಫಲ'

■ ಹೆಚ್.ಜಿ.ಎನ್.ಪ್ರಸಾದ್

ಮೊ. 98453 76199



ಒಂದು ಊರಿನಲ್ಲಿ ಒಬ್ಬ ಪ್ರಜಾಪಾಲಕ ರಾಜನಿದ್ದ. ಅವನಿಗೆ ಮೂರು ಜನ ಮಂತ್ರಿಗಳಿದ್ದರು. ಈ ಮೂರೂ ಜನ ಮಂತ್ರಿಗಳಲ್ಲಿ ಒಳ್ಳೆಯವರೂ, ಕುತಂತ್ರಿಗಳೂ ಇದ್ದರು. ಆದರೆ ರಾಜನೆದುರು ಸಭ್ಯರಂತೆ ವರ್ತಿಸಿ, ಒಳಗೊಳಗೇ ರಾಜನ ಆಜ್ಞೆಯನ್ನು ನಿರ್ಲಕ್ಷಿಸುತ್ತಿದ್ದರು.




ರಾಜ ಅದೊಂದು ದಿನ ತನ್ನ ಮೂರೂ ಮಂತ್ರಿಗಳನ್ನೂ ಕರೆಯುತ್ತಾನೆ. ಆ ಮೂರೂ ಜನರಿಗೆ ಒಂದೊಂದು ಗೋಣಿಯನ್ನು ಕೊಟ್ಟು ಕಾಡಿಗೆ ಹೋಗಿ ನಾಳೆ ಸಂಜೆಯೊಳಗೆ ಕಾಡಿನಲ್ಲಿ ಸಿಗುವ ಅತ್ಯುತ್ತಮ ಹಣ್ಣುಗಳನ್ನು ಆಯ್ದು ತುಂಬಿಕೊಂಡು ಬರುವಂತೆ ಆಜ್ಞೆ ಮಾಡುತ್ತಾನೆ.




ಆ ಮೂರೂ ಮಂತ್ರಿಗಳಲ್ಲಿ ಒಬ್ಬ ರಾಜನ ಆಜ್ಞೆಯನ್ನು ಚಾಚುತಪ್ಪದೆ ಕಾಡು ಸುತ್ತಿ ಒಳ್ಳೆಯ ಮತ್ತು ಉತ್ತಮವಾದ ಹಣ್ಣುಗಳನ್ನು ಆಯ್ದು ತುಂಬಿಸಿಕೊಳ್ಳುತ್ತಾನೆ. ಎರಡನೆಯವನು "ಅಯ್ಯೋ ರಾಜರು ಒಳಗೆಲ್ಲಿ ನೋಡುತ್ತಾರೆ" ಎಂದುಕೊಂಡು ಮೇಲೆ ಸ್ವಲ್ಪ ಒಳ್ಳೆಯ ಹಣ್ಣುಗಳನ್ನು ತುಂಬಿಸಿ ಒಳಗೆ ಕೊಳೆತ ಹಣ್ಣುಗಳನ್ನು ತುಂಬಿಸಿಕೊಳ್ಳುತ್ತಾನೆ.



ಇನ್ನು ಮೂರನೆಯವನು ರಾಜ ನೋಡುವುದೇ ಇಲ್ಲಾ.. ಯಾರು ಕಾಡು ಸುತ್ತಿ ಹಣ್ಣು ಆರಿಸಿ ತರೋದು..? ಎಂದು ತರಗೆಲೆ ಮತ್ತು ಕಸ-ಕಡ್ಡಿಯನ್ನು ತುಂಬಿಸಿಕೊಂಡು ಹೋಗುತ್ತಾನೆ. ಮಾರನೇ ದಿನ, ಮಂತ್ರಿಗಳು ಅರಸನ ಮುಂದೆ ಗೋಣಿಯ ಮೂಟೆಗಳನ್ನಿಡುತ್ತಾರೆ.



ಅರಸ, ಅದನ್ನು ಪರೀಕ್ಷಿಸುವುದಿಲ್ಲ. ಬದಲಾಗಿ ಭಟರನ್ನು ಕರೆದು ಹೇಳುತ್ತಾನೆ ಈ ಮೂರೂ ಜನರನ್ನೂ ಜೈಲಿಗಟ್ಟಿ... ಅವರವರು ತಂದ ಹಣ್ಣಿನ ಮೂಟೆ ಅವರ ಬಳಿಯಲ್ಲಿಯೇ ಇರಲಿ.....ಸ್ವಲ್ಪ ದಿನ ತಿನ್ನಲು ಏನೂ ಕೊಡಬೇಡಿ...! ಎಂದು ಆಜ್ಞೆ ಹೊರಡಿಸುತ್ತಾನೆ.



ಸ್ವಲ್ಪ ದಿನದ ನಂತರ ಬಾಗಿಲು ತೆರೆದಾಗ, ಪ್ರಾಮಾಣಿಕವಾಗಿ ಉತ್ತಮವಾದ ಹಣ್ಣುಗಳನ್ನು ತಂದವ, ಆರೋಗ್ಯವಂತನಾಗಿ ಹೊರಬರುತ್ತಾನೆ. ಕೊಳೆತ ಹಣ್ಣುಗಳನ್ನು ಪೇರಿಸಿಟ್ಟ ಮಂತ್ರಿ ರೋಗಗ್ರಸ್ತನಾಗಿದ್ದ. ಇನ್ನು ತಿನ್ನಲು ಯೋಗ್ಯವಲ್ಲದ ವಸ್ತುಗಳನ್ನು ತಂದ ಮಂತ್ರಿ ಕೊನೆಯುಸಿರೆಳೆದಿರುತ್ತಾನೆ.

ನೀತಿ :- ಇದೇ ಕರ್ಮ, ಉತ್ತಮ ಕೆಲಸಕ್ಕೆ ಉತ್ತಮ ಫಲ, ಕೆಟ್ಟ ಕೆಲಸಕ್ಕೆ ಕೆಟ್ಟ ಫಲ. ನಮಗೆ ಕೊಟ್ಟ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದರೆ ಅದು ಎಂದಿದ್ದರೂ ನಮಗೆ ಒಳ್ಳೆಯದನ್ನೇ ಮಾಡುತ್ತದೆ.

ವಾರಭವಿಷ್ಯ

7.06.2026 ರಿಂದ 13.06.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:-ರವಿ-ವೃಷಭ, ಚಂದ್ರ- ಕುಂಭ, ಮೀನ, ಮೇಷ, ಕುಜ-ಮೇಷ, ಬುಧ-ಮಿಥುನ, ಗುರು-ಕಟಕ, ಶುಕ್ರ-ಮಿಥುನ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ

ವಿ.ಕೇಶವಮೂರ್ತಿ

ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'

'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'

'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'

ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ವಾರದಾರಂಭಕ್ಕೆ ಗ್ರಹಗಳ ಸಂಚಾರ ಪೂರಕವಾಗಿರುವುದರಿಂದ ಮೈ ಮನಗಳಲ್ಲಿ ಹರುಷದ ವಾತಾವರಣ, ನೂತನ ವಸ್ತ್ರಾಭರಣ ಪ್ರಾಪ್ತಿ. ಪ್ರಯಾಣಗಳು ಧನಲಾಭ ತರುವುದು. 'ಧರ್ಮೋ ರಕ್ಷತಿ ರಕ್ಷಿತಃ' ಎಂಬಂತೆ ಧರ್ಮಮಾರ್ಗವನ್ನು ಬಿಡಬೇಡಿ. ಹಳೆಯ ಗೆಳೆಯರ ಭೇಟಿ, 'ಸ್ನೇಹಕೂಟಗಳು ಜರುಗುವುದು, ಇತಿ-ಮಿತಿಯಲ್ಲಿ ನಡೆಯಲಿ. ಡ್ರೈವಿಂಗ್‌ನಲ್ಲಿ ದುಡುಕು ಮಾರಕವಾದೀತು.

ಶ್ರೀ ಗಣೇಶ ಆರಾಧನೆ. ಶುಭ ಸಂಖ್ಯೆ-4

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ಧನ ಸಂಪಾದನೆಯ ಹೊಸ ಮಾರ್ಗ ತೋರುವುದು. ನೂತನ ವಾಹನ ಖರೀದಿಯೊಂದಿಗೆ ವಾರಕ್ಕೆ ಸ್ವಾಗತ. ನೌಕರ ವರ್ಗದವರಿಗೆ ಹಿರಿಯ ಅಧಿಕಾರಿಗಳಿಂದ ಪ್ರಶಂಸೆ. ಸೈಟು ವ್ಯವಹಾರಗಳಲ್ಲಿ ಉತ್ತಮ ಲಾಭ. ಶೇರು ವ್ಯವಹಾರಗಳಲ್ಲಿ ಹೊಸ ಬಂಡವಾಳ ಹೂಡಲು ಅಡ್ಡಿಯಿಲ್ಲ. ಹಲವರಿಗೆ ಆರೋಗ್ಯದಲ್ಲಿ ಸುಧಾರಣೆ ಹಾಗೂ ಆಸ್ಪತ್ರೆಯಿಂದ ಡಿಸ್‌ಚಾರ್ಜ್. ದಂಪತಿಗಳು ಪರಸ್ಪರ ಹಠ ಸಾಧಿಸದೆ ಸೋತು-ಗೆಲ್ಲಿ.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-5

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ಈ ವಾರದ ನಿಮ್ಮ ಆಯವ್ಯಯದ ಬಜೆಟ್ ಸಮನಾಗಿ ನಡೆಯುತ್ತದೆ. ನೂತನ ದಂಧೆ ಆರಂಭಿಸುವ ಮೊದಲು ಅನುಭವಿಗಳ ಮಾರ್ಗದರ್ಶನ ಪಡೆಯುವುದು ಉಚಿತ. ನಿಮ್ಮ ಕಾರ್ಯಕಲಾಪಗಳಿಗೆ ನಿಮ್ಮ ಶ್ರೀಮತಿಯ ಮತ್ತು ಮಕ್ಕಳ ಬೆಂಬಲ ದೊರಕುವುದು. ಕ್ರಮೇಣ ನಿಮ್ಮ ಆರೋಗ್ಯದಲ್ಲಿ ಸುಧಾರಣೆ ಕಂಡು ಬರುವುದು. ಗುರುತು ಇಲ್ಲದವರೊಂದಿಗೆ ನಿಮ್ಮ ಬ್ಯಾಂಕ್ ವಿವರ ನೀಡಬೇಡಿ.

ಶ್ರೀ ಸತ್ಯನಾರಾಯಣ ವ್ರತ ಕಥೆ ಓದಿ. ಶುಭ ಸಂಖ್ಯೆ-2

ಕಟಕ (ಹೊ,ಹು,ಹೆ,ಡ,ಡಿ,ಡು)

ಸಪ್ತಾಹದ ಆದಿಗೆ ಹಿತ ಶತ್ರುಗಳ ಪಿತೂರಿಯಿಂದ ಇಚ್ಛಿತ ಕಾರ್ಯಗಳಲ್ಲಿ ಹಿನ್ನಡೆ ಉಂಟಾಗಲಿದೆ. ನಿಮ್ಮ ರಾಶಿಜನ್ಯ ಸ್ವಭಾವ ಆತುರದಿಂದ ಹಣಕಾಸಿನ ನಷ್ಟ ಉಂಟಾದೀತು. 'ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ' ಎಂಬ ಗಾದೆ ನಿಮಗೆ ಅನ್ವಯವಾದೀತು. ಸ್ಥಿರಾಸ್ತಿ ಮಾರಾಟ ವಿಷಯದಲ್ಲಿ ಅಡಚಣೆಗಳು ಎದುರಾಗುವುದು. ವಾರಾಂತ್ಯಕ್ಕೆ ದೈವ ಕೃಪೆಯಿಂದ ಸಂತಸದ ತಂಗಾಳಿ ಬೀಸುವುದು.

ಶ್ರೀ ನವಾರ್ಣ ಮಂತ್ರ ಜಪಿಸಿ. ಶುಭ ಸಂಖ್ಯೆ-3

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ನಿಮ್ಮ ರಾಶಿಯ ವ್ಯಯ ಭಾವಕ್ಕೆ ಗುರುಗ್ರಹದ ಪ್ರವೇಶವಾಗಿದೆ. ನೀವು ಎಲ್ಲ ವಿಚಾರಗಳಲ್ಲಿ ಶಾಂತಿ, ಸಮಾಧಾನದಿಂದಲೂ, ಎಚ್ಚರಿಕೆಯಿಂದಲೂ ನಡೆದುಕೊಳ್ಳಬೇಕು. ರಾಜಕೀಯ ರಂಗದವರಿಗೆ ಗುಪ್ತ ಶತ್ರುಗಳು ಸವಾಲೆನಿಸುವರು. ವಾರ ಮಧ್ಯೆ-ಚಂದ್ರಗ್ರಹ ಕೃಪೆಯಿಂದ ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ನಡೆಯುವುದು. ವಿದ್ಯಾರ್ಥಿಗಳು ಶಿಕ್ಷಣ ಕ್ಷೇತ್ರದಲ್ಲಿ ಸಫಲತೆಯನ್ನು ಹೊಂದುವರು.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಜಪಿಸಿ. ಶುಭ ಸಂಖ್ಯೆ-1

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ಇದೀಗ ಗುರು ಲಾಭ ಸ್ಥಾನಕ್ಕೆ ಬಂದಿದೆ. ಇದರ ಪರಿಣಾಮವಾಗಿ ಆರ್ಥಿಕ ಮುಗ್ಗಟ್ಟುಗಳು ನಿವಾರಣೆ ಆಗುವುದು. ಆಸ್ತಿ ವಿವಾದಗಳು ನಿಮಗೆ ಅನುಕೂಲಕರವೆನಿಸುವುದು. ಕನ್ಯಾರ್ಥಿಗಳಿಗೆ ಹೊಸ ಸಂಬಂಧಗಳು ಕೂಡಿ ಬರಲಿವೆ. ನೂತನ ವಾಹನ ಖರೀದಿ ಯೋಗವೂ ಇದೆ. ಪ್ರತಿಭಾವಂತ ಶಿಕ್ಷಣಾರ್ಥಿಗಳಿಗೆ ವಿದೇಶ ವ್ಯಾಸಂಗ ಯೋಗ ದೊರೆಯಬಹುದು. ಅಣ್ಣ-ತಮ್ಮಂದಿರಲ್ಲಿನ ಭಿನ್ನಾಭಿಪ್ರಾಯಗಳು ವಿಕೋಪಕ್ಕೆ ಹೋದೀತು.

ಶ್ರೀ ಮನೆ ದೇವರ ದರ್ಶನ ಮಾಡಿ. ಶುಭ ಸಂಖ್ಯೆ-6

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ವಾರದಾರಂಭಕ್ಕಷ್ಟೇ ಕೊಂಚ ನೆಮ್ಮದಿ, ನಿರಾಳ. ವಾರ ಸಾಗಿದಂತೆ ಸಿಟ್ಟಿನಿಂದ ಕಾರ್ಯ ಹಾನಿ. ಸಮಯ ಪ್ರಜ್ಞೆಯ ಕೊರತೆಯಿಂದ ಕೆಲಸ ಕಾರ್ಯಗಳು ಮುಂದೆ ಸಾಗದು. ರಾಜಕಾರಣಿಗಳಿಗೆ ಅಪವಾದದ ಭೀತಿ ಹಾಗೂ ಜನ ವಿರೋಧ ಎದುರಿಸಬೇಕಾಗುವುದು. ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದೆ ನಿರಾಸೆ ಅನುಭವಿಸುವಿರಿ. ವಾರದ ಕಡೆಗೆ ಆಪ್ತೇಷ್ಟರ ದರ್ಶನ ಭೇಟಿಯಿಂದ ಮನಸ್ಸಿಗೆ ಹರ್ಷ.

ಶ್ರೀ ಪುಣ್ಯ ಕ್ಷೇತ್ರ ಸಂದರ್ಶನ ಮಾಡಿ. ಶುಭ ಸಂಖ್ಯೆ-9

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ಗುರುಕೃಪೆಯಿಂದ ನಿಂತು ಹೋಗಿದ್ದ ಮಹತ್ವದ ಕೆಲಸ ಕಾರ್ಯಗಳು ಮರುಚಾಲನೆಗೊಳ್ಳಲಿವೆ. ಮನೆ, ನಿವೇಶನ ಹೊಂದಲು ಸಾಲ ಮಾಡಬಹುದು. ನ್ಯಾಯಾಲಯ ವ್ಯವಹಾರಗಳಲ್ಲಿ ಅನುಕೂಲ ಫಲ ದೊರೆಯಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವ ಸಾಧ್ಯತೆ ಇದೆ. ಕೃಷಿ ಚಟುವಟಿಕೆಗಳು ಚುರುಕಾಗಿ ನಡೆಯುವುದು. ಪಂಚಮ ಶನಿಯ ಕಾರಣ ಮಕ್ಕಳು ಅಪವಾದ ತರುವರು.

ಶ್ರೀ ನೃಸಿಂಹ ಪೂಜೆ. ಶುಭ ಸಂಖ್ಯೆ-8

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ವಾರದಾರಂಭಕ್ಕೆ ವ್ಯಾಪಾರ ವ್ಯವಹಾರಗಳು ಉತ್ತಮ ರೀತಿಯಲ್ಲಿ ನಡೆದು ಧನಲಾಭವಾಗುವುದು. ಹೊಸ ವಸ್ತ್ರ, ಸುಭೋಜನ, ಶಯನಾದಿ ಸುಖಗಳನ್ನು ಅನುಭವಿಸುವಿರಿ. ವಿದ್ವಜ್ಜನರ ಭೇಟಿ ಹಾಗೂ ಆತ್ಮಜ್ಞಾನ ಪ್ರಾಪ್ತಿ. ವಿದೇಶ ಪ್ರವಾಸಕ್ಕೆ ಪೂರ್ವಭಾವಿ ಸಿದ್ಧತೆಗಳು ನಡೆದೀತು. ನಿಮ್ಮ ಆರೋಗ್ಯದಲ್ಲಿ ಏರುಪೇರುಗಳು ಉಂಟಾಗಬಹುದು. ಅಷ್ಟಮ ಗುರು ವೈದ್ಯಕೀಯ ವೆಚ್ಚಗಳು ಹೆಚ್ಚಲು ಕಾರಣನಾಗುವನು.

ಶ್ರೀ ಅಶ್ವತ್ಥವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ-5

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ಸಪ್ತಾಹದ ಆರಂಭಕ್ಕೆ ಹಿತಶತ್ರುಗಳ ಪಿತೂರಿ ನಡೆಯದು. ನಿಮ್ಮ ಕೆಲಸಗಳು ಬಯಕೆಯಂತೆ ಸಂಭವಿಸುವುದು. ಗುರು ಕೃಪೆ ಬಂದಿದೆ ದಕ್ಷತೆಯಿಂದ ಪ್ರಯತ್ನಶೀಲರಾದರೆ ಗುರಿ ಮುಟ್ಟುವಿರಿ. ನೀವು ನಂಬಿದ ದೇವರು ಕೈ ಹಿಡಿದು ಸಾಲ-ಸೋಲಗಳು ತೀರುವಳಿ ಆಗುವುದು. ಮನೆಯಲ್ಲಿ ಶುಭ ಕಾರ್ಯಗಳು ನಡೆಯುವುದು. ರಾಹು-ಕೇತುಗಳ ಕರ್ತರಿಯೋಗ ಸಂಬಂಧಿಕರಲ್ಲಿ ಮನಸ್ತಾಪಗಳು.

ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ-9

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಸಾಡೇಸಾತಿಯ ಕಡೆಯ ಚರಣ ನಡೆಯುತ್ತಿದ್ದರೂ ರಾಜಕೀಯ ರಂಗದವರಿಗೆ ಜನ ಮನ್ನಣೆ ದೊರೆಯುವುದು. ಮನೆಗೆ ಬರುವ ಅತಿಥಿ ಜನರ ಸ್ವಾಗತಕ್ಕೆ ಸಜ್ಜಾಗಿರಿ. ನಿರುದ್ಯೋಗಿಗಳಿಗೆ ಹೊಸ ಅವಕಾಶಗಳು ದೊರೆಯುತ್ತವೆ. ಸೇವಾ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತೀರಿ. ಇದರಿಂದ ಸಮಾಜದಲ್ಲಿ ಪರಿಚಯಗಳು ಇನ್ನಷ್ಟು ವಿಸ್ತಾರವಾಗುತ್ತವೆ. ಸ್ವಲ್ಪ ದೇಹಕ್ಕೆ ಅಸೌಖ್ಯ ಕಾಣಿಸಬಹುದು.

ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ-6

ಮೀನ (ದಿ,ದು,ಖ,ಝ,ಥ,ದೆ,ದೊ,ಚ,ಚಿ)

ನಿಮ್ಮ ರಾಶಿಯಲ್ಲೇ ಸ್ಥಿತ ಶ್ರೀ ಶನಿದೇವ ಕೆಲವೊಂದು ಆತಂಕಕಾರಿ ಪರಿಣಾಮಗಳನ್ನು ತಂದೊಡ್ಡಿದರೂ, ನಿಮ್ಮ ರಾಶ್ಯಾಧಿಪತಿ ಬೃಹಸ್ಪತಿ ಶುಭ ಸ್ಥಾನಕ್ಕೆ ಪಲ್ಲಟವಾಗಿದ್ದು ನಿಮ್ಮನ್ನು ರಕ್ಷಿಸಲಿದ್ದಾನೆ. ಬರಬೇಕಾದ ಹಣ ಕೈ ಸೇರುತ್ತದೆ. ಬೆಳೆದು ನಿಂತ ಮಕ್ಕಳ ಸಹವಾಸ ಹಾಗೂ ಚಲನವಲನದ ಮೇಲೆ ಗಮನವಿರಿಸಿ. ನೌಕರ ವರ್ಗದವರು ಹಿರಿಯ ಅಧಿಕಾರಿಗಳ ಅವಕೃಪೆ ಉಂಟಾಗದಂತೆ ನಡೆದುಕೊಳ್ಳಿ.

ಶ್ರೀ ದತ್ತಗುರು ದರ್ಶನ. ಶುಭ ಸಂಖ್ಯೆ-5

ನಂಜನಗೂಡಲ್ಲಿ ವಿಜೃಂಭಣೆಯ ಹನುಮ ಜಯಂತಿ ಶೋಭಾಯಾತ್ರೆ

●ಮೆರಗು ನೀಡಿದ ರಾಜ್ಯ, ಹೊರ ರಾಜ್ಯಗಳ ಕಲಾ ತಂಡಗಳು, ●ಕಣ್ಮನ ಸೆಳೆದ ಶ್ರೀರಾಮ, ಆಂಜನೇಯ ಸ್ವಾಮಿಗಳ ಬೃಹತ್ ಮೂರ್ತಿಗಳು



ಹನುಮಂತನ ಮೂರ್ತಿಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಹನುಮ ಜಯಂತಿ ಶೋಭಾಯಾತ್ರೆ ಉದ್ಘಾಟಿಸಲಾಯಿತು.

ನಂಜನಗೂಡು: ದಕ್ಷಿಣ ಕಾಶಿ ಪ್ರಸಿದ್ಧಿಯ ನಂಜನಗೂಡಿನಲ್ಲಿ ಶನಿವಾರ ಹನುಮ ಜಯಂತಿ ಪ್ರಯುಕ್ತ ಬೃಹತ್ ಆಂಜನೇಯ ಮೂರ್ತಿಯ ಮೆರವಣಿಗೆಯ ಶೋಭಾಯಾತ್ರೆಯು ರಾಜ್ಯ ಹಾಗೂ ಹೊರರಾಜ್ಯಗಳ ಹತ್ತಾರು ಕಲಾತಂಡಗಳ ಆಕರ್ಷಣೆಯೊಂದಿಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಮಧ್ಯಾಹ್ನ 3ರ ಸಮಯದಲ್ಲಿ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮುಂಭಾಗದಲ್ಲಿ ಮಳವಳ್ಳಿ ತಾಲೂಕಿನ ಬೊಪ್ಪೇಗೌಡನಪುರದ ಧರೆಗೆ ದೊಡ್ಡವರ ಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ಬಿ.ಎಸ್.ಜ್ಞಾನಾನಂದ ಚೆನ್ನರಾಜೇ ಅರಸ್ ಸ್ವಾಮೀಜಿ, ಶರಣ ಸಂಗಮ ಮಠದ ಶ್ರೀ ಪಟ್ಟದ ನಾಗರಾಜೇಂದ್ರ ಸ್ವಾಮೀಜಿ, ಮಲ್ಲನಮೂಲೆ ಮಠದ ಶ್ರೀ ಇಮ್ಮಡಿ ಸಿದ್ಧಲಿಂಗಸ್ವಾಮೀಜಿ, ಶಿರಮಳ್ಳಿ ವಿರಕ್ತ ಮಠಾಧ್ಯಕ್ಷ ಶ್ರೀ ಇಮ್ಮಡಿ ಮುರಗಿ ಸ್ವಾಮೀಜಿ ಹಾಗೂ ಮಾಜಿ ಶಾಸಕ ಬಿ.ಹರ್ಷವರ್ಧನ್ ಆಂಜನೇಯ ಮೂರ್ತಿಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಶೋಭಾಯಾತ್ರೆಗೆ ಚಾಲನೆ ನೀಡಿದರು.

ಮೆರವಣಿಗೆಯ ಮುಂಚೂಣಿಯಲ್ಲಿ ಡೊಳ್ಳು, ನಗಾರಿ, ಚಂಡೆ ವಾದ್ಯ, ಪೂಜಾ ಕುಣಿತ, ವೀರಭದ್ರ ಕುಣಿತ, ನಂದಿ ಕಂಬ ಮೇಳದ ಕಲಾವಿದರು ಸಾಗಿದರೆ, ಕೇರಳದ ದೈವಸ್ವರೂಪಿ ಆಂಜನೇಯ, ಗಣೇಶ, ಶಾರದಾ ಮಾತೆ, ಶ್ರೀರಾಮ, ಸೀತೆ ಮೊದಲಾದ ವೇಷಧಾರಿಗಳು ಶೋಭಾಯಾತ್ರೆಯಲ್ಲಿ ಗಮನ ಸೆಳೆದರು. ಇನ್ನು ಬೃಹತ್ ಕ್ರೇನ್‌ನಲ್ಲಿ ಅಳವಡಿಸಲಾಗಿದ್ದ ಶ್ರೀರಾಮ ಹಾಗೂ ಆಂಜನೇಯನ ಮೂರ್ತಿಗಳು ನೋಡುಗರ ಕಣ್ಮನ ಸೆಳೆದವು ಇದೇ ಸಂದರ್ಭ ಮಹಿಳಾ ಭಜನಾ ತಂಡದ ಸದಸ್ಯರು ಮೆರವಣಿಗೆಯಲ್ಲಿ ಭಜನೆಯನ್ನು ಪಠಿಸಿದರು. ಇನ್ನು ಚಂಡೆ ಹಾಗೂ ಡೊಳ್ಳು ವಾದ್ಯಮೇಳ, ಡಿಜೆ ಸದ್ದಿಗೆ ಯುವ ಜನರು ಶಿಳ್ಳೆ, ಚಪ್ಪಾಳೆ ಹೊಡೆದು ಹುಚ್ಚೆದ್ದು ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಶೋಭಾಯಾತ್ರೆಯ ಮೆರವಣಿಗೆಯು ನಗರದ ಆರ್.ಪಿ. ರಸ್ತೆ, ಹುಲ್ಲಹಳ್ಳಿ ವೃತ್ತ, ಎಂಜಿಎಸ್ ರಸ್ತೆ, ಬಜಾರ್ ರಸ್ತೆಯ ಮೂಲಕ ಸಾಗಿ ಶ್ರೀಕಂಠೇಶ್ವರ ದೇವಾಲ ಯದಲ್ಲಿ ಅಂತ್ಯವಾಯಿತು.

ಮೆರವಣಿಗೆಯಲ್ಲಿ ನೂರಾರು ಮಂದಿ ಮಹಿಳೆಯರೂ ಭಾಗಿಯಾಗುವ ಮೂಲಕ ಆಕರ್ಷಣೆ ಹೆಚ್ಚಿಸಿದರು. ಮೆರವಣಿಗೆ ಉದ್ಘಾಟನೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವ ಮೂರ್ತಿ, ಬಿಜೆಪಿ ಜಿಲ್ಲಾಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ, ಪ್ರಧಾನ ಕಾರ್ಯದರ್ಶಿ ವಿನಯ್ ಕುಮಾರ್, ಬಿಜೆಪಿ ತಾಲೂಕು ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ಧರಾಜು, ಅನಂತು, ಯುವಾ ಬ್ರಿಗೇಡ್ ಸಂಚಾಲಕ ಎಸ್.ಚಂದ್ರಶೇಖರ್, ಸುನೀಲ್, ನಿತೀನ್, ಗಿರೀಶ್ ಮೊದಲಾದವರು ಭಾಗವಹಿಸಿದ್ದರು.

ಇದಕ್ಕೂ ಮೊದಲು ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಹೊರಾವರಣದ ಮುಂಭಾಗದಲ್ಲಿ ಲೋಕ ಕಲ್ಯಾಣಾರ್ಥವಾಗಿ ಅರ್ಚಕ ಕೃಷ್ಣಾ ಜೋಯಿಸ್ ನೇತೃತ್ವದಲ್ಲಿ ಹೋಮ ನಡೆಸಲಾಯಿತು, ಹೋಮ ಕಾರ್ಯದಲ್ಲಿ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಭಾಗಿಯಾಗಿದ್ದರು.

ಈ ಸಂದರ್ಭ ಮಾತನಾಡಿದ ಅವರು ಹಿಂದೂ ಧರ್ಮದ ಮೂಲ ಸಾರವಾದ ನಮ್ಮ ಆಚರಣೆ ಮತ್ತು ನಮ್ಮ ಸಂಸ್ಕೃತಿಯ ಉಳಿವಿಗಾಗಿ ಹಿಂದೂ ಧರ್ಮೀಯರು ಎಚ್ಚರಗೊಳ್ಳಬೇಕಿದೆ, ಇನ್ನು ಧಾರ್ಮಿಕ ಜಾಗೃತಿಯ ಮೂಲಕ ಜನರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಬೆಳೆಸಬೇಕಿದೆ ಈ ನಿಟ್ಟಿನಲ್ಲಿ ಆಯೋಜಿಸಿರುವ ಹನುಮ ಜಯಂತಿ ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಜೇನು ಸಂಗ್ರಹಿಸಲು ಕಾಡಿಗೆ ತೆರಳಿದ್ದ ಯುವಕನ ಮೇಲೆ ಕರಡಿ ದಾಳಿ

ತೀವ್ರ ಗಾಯ, ಆಸ್ಪತ್ರೆಗೆ ದಾಖಲು



ಹೆಚ್.ಡಿ.ಕೋಟೆ: ಜೇನು ಸಂಗ್ರಹಿಸಲು ತೆರಳಿದ್ದ ಯುವಕನ ಮೇಲೆ ಕರಡಿಯೊಂದು ದಾಳಿ ನಡೆಸಿ ತೀವ್ರವಾಗಿ ಗಾಯಗೊಳಿಸಿರುವ ಘಟನೆ ತಾಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ಅರಣ್ಯ ವ್ಯಾಪ್ತಿಯಲ್ಲಿ ಸಂಭವಿಸಿದೆ.

ಬಳ್ಳೆ ಹಾಡಿಯ ಆದಿವಾಸಿ ಉಪೇಂದ್ರ (26) ಎಂಬಾತನೇ ಕರಡಿ ದಾಳಿಯಿಂದ ತೀವ್ರವಾಗಿ ಗಾಯಗೊಂಡವರಾಗಿದ್ದಾರೆ.

ತಾಲೂಕಿನ ಬಳ್ಳೆ ಹಾಡಿಯ ಆದಿವಾಸಿ ಉಪೇಂದ್ರ ಶುಕ್ರವಾರ ಜೇನು ಅಳಿಯಲು ಕಾಡಿನತ್ತ ತೆರಳಿದ್ದ ವೇಳೆ ಕರಡಿ ಏಕಾಏಕಿ ದಾಳಿ ನಡೆಸಿದೆ. ಇದರಿಂದ ಈತನ ಮುಖದ ಭಾಗ, ತಲೆ, ಕೈಗಳು ಸೇರಿದಂತೆ ದೇಹದ ನಾನಾ ಭಾಗಗಳಲ್ಲಿ ತೀವ್ರಸ್ವರೂಪದ ಗಾಯಗಳಾಗಿವೆ.

ಅರಣ್ಯದಲ್ಲಿ ತೀವ್ರವಾಗಿ ಗಾಯಗೊಂಡು ಬಿದ್ದು ಒದ್ದಾಡುತ್ತಿದ್ದನ್ನು ಗಮನಿಸಿ ಹಾಡಿಯ ಜನರಿಗೆ ವಿಷಯ ತಿಳಿಸಲಾಯಿತು. ತಕ್ಷಣ ಮಾಹಿತಿ ತಿಳಿಯುತ್ತಿದ್ದಂತೆ ಹಾಡಿಯ ಜನತೆ ಅರಣ್ಯ ಇಲಾಖೆಗೆ ಮಾಹಿತಿ ನೀಡಿ ಆಂಬುಲೆನ್ಸ್ ಮೂಲಕ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

ಕಾಡಿನೊಳಗೆ ಜೇನು ತೆಗೆಯಲು ತೆರಳಿದ್ದಾರೆ ಎಂಬ ಮಾಹಿತಿ ಬಂದಿದ್ದು, ಶುಕ್ರವಾರ ಕರಡಿ ದಾಳಿ ಮಾಡಿದೆ, ದಾಳಿಗೆ ಸಿಲುಕಿದ ವ್ಯಕ್ತಿಯನ್ನು ಆಂಬುಲೆನ್ಸ್ ಮೂಲಕ ಮೈಸೂರಿನ ಕೆಆರ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಸ್ಪತ್ರೆಯಲ್ಲಿ ವೈದ್ಯರು ಸೂಕ್ತ ಚಿಕಿತ್ಸೆ ನೀಡುತ್ತಿದ್ದಾರೆ ಎಂದು ಆರ್‌ಎಫ್‌ಓ ಹನುಮಂತರಾಜು ತಿಳಿಸಿದ್ದಾರೆ.

ಡೋರ್ನಹಳ್ಳಿಯಲ್ಲಿ ವಿಜೃಂಭಣೆಯ ಸಂತ ಅಂತೋಣಿ ಬೆಸಿಲಿಕಾದ ವಾರ್ಷಿಕೋತ್ಸವ

ಪ್ರತಿ ನಿತ್ಯ ವಿಚಾರ ಸಂಕಿರಣ, ಉಪನ್ಯಾಸ ವೈಭವದ ತೇರಿನ ಮೆರವಣಿಗೆ



ಕೆ.ಆರ್.ನಗರ: ತಾಲೂಕಿನ ಡೋರ್ನಹಳ್ಳಿಯ ವಿಶ್ವ ವಿಖ್ಯಾತ ಸಂತ ಅಂತೋಣಿ ಬೆಸಿಲಿಕಾದ ವಾರ್ಷಿಕ ಮಹೋತ್ಸವ ಎಂಟು ದಿನಗಳ ಕಾಲ ನಡೆಯಲಿದ್ದು, ಜೂ.13 ಶನಿವಾರ ತೇರಿನ ಮೆರವಣಿಗೆ ಹಾಗೂ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಲಿದೆ.

ವಾರ್ಷಿಕೋತ್ಸವ ಆರಂಭದ ಮೊದಲ ದಿನವಾದ ಗುರುವಾರ (ಜೂ.4) ಮೈಸೂರು ಧರ್ಮಕ್ಷೇತ್ರದ ಧರ್ಮಾಧ್ಯಕ್ಷ ಡಾ.ಫ್ರಾನ್ಸಿಸ್ ಸೆರಾವೊ ಅವರಿಂದ ಧ್ವಜಾರೋಹಣ ಮತ್ತು ಬಲಿಪೂಜೆ ನೆರವೇರಿಸಿದರು.

ಶುಕ್ರವಾರ (ಜೂ.5) ಮೈಸೂರಿನ ಗುರುಶ್ರೇಷ್ಠರಾದ ವಂದನೀಯ ಗುರು ಅಂತಪ್ಪಎಂ ಅವರಿಂದ ಭರವಸೆಯ ಪುನಃ ಸ್ಥಾಪನೆಯ ಬುನಾದಿ ವಿಷಯದ ಬಗ್ಗೆ ವಿಚಾರ ಸಂಕಿರಣ ನಡೆಯಿತು. ಶನಿವಾರ ಮೈಸೂರಿನ ಬೋಗಾದಿಯ ಧ್ಯಾನ ಸದನ ಧರ್ಮ ಗುರು ವಂದನೀಯ ಗುರು ಅರ್ಚಿಬಾಲ್ಡ್ ಗೊನ್ಸಾಲ್ವಿಸ್ ಭರವಸೆ ನವ ಜೀವನದ ಪ್ರಾರಂಭದ ಬೋಧನೆ ಜರುಗಿತು.

ಜೂ.7, 8, 9, 10, 11, 12 ರಂದು ವಿವಿಧ ವಿಚಾರ ಸಂಕಿರಣ, ಪ್ರವಚನ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ವಾರ್ಷಿಕೋತ್ಸವದ ಅಂತಿಮ ದಿನವಾದ ಜೂ.13ರಂದು ಶನಿವಾರ ಬೆಳಿಗ್ಗೆ 10 ಗಂಟೆಗೆ ಮೈಸೂರು ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷರಾದ ಡಾ.ಫ್ರಾನ್ಸಿಸ್ ಸೆರಾವೊ ಅವರಿಂದ ಹಬ್ಬದ ಆಡಂಬರ ಗಾಯನ ಬಲಿಪೂಜೆ ಜರುಗಲಿದೆ.

ಆನಂತರ ಸಂಜೆಗೆ ಸಾವಿರಾರು ಭಕ್ತರ ನಡುವೆ ಡೋರ್ನಹಳ್ಳಿ ಸಂತ ಅಂತೋಣಿಯವರ ವೈಭವದ ತೇರಿನ ಮೆರವಣಿಗೆ ಹಾಗೂ ಪರಮಪ್ರಸಾದ ಜೊತೆಗೆ ಆಶೀರ್ವಾದ ಇರುತ್ತದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಬಸಿಲಿಕಾದ ಆಡಳಿತ ಮಂಡಳಿ ಮನವಿ ಮಾಡಿದ್ದಾರೆ.

ಹಣ್ಣಿನ ಗಿಡಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಣೆ



ಹುಣಸೂರು, ಜೂ.6– ಪರಿಸರ ಸಮತೋಲನ ಕಾಪಾಡಿಕೊಳ್ಳಬೇಕಾದರೆ ಪ್ರತಿಯೊಬ್ಬರು ಗಿಡಗಳನ್ನು ನೆಟ್ಟು ಪೋಷಿಸುವ ಕೆಲಸವಾಗಬೇಕಿದೆ ಎಂದು ರೋಟರಿ ಕ್ಲಬ್ ಅಧ್ಯಕ್ಷ ಹೆಚ್.ಆರ್.ಕೃಷ್ಣ ಕುಮಾರ್ ತಿಳಿಸಿದರು.

ನಗರದ ರೋಟರಿ ಕ್ಲಬ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ರೋಟರಿ ಶಾಲೆಯ ಮಕ್ಕಳಿಗೆ ಮತ್ತು ಶಿಕ್ಷಕರಿಗೆ, ನೇರಳೆ, ಹಲಸು, ಸೀಬೆ, ದಾಳಿಂಬೆ ಇನ್ನಿತರೆ ಹಣ್ಣಿನ ಗಿಡಗಳನ್ನು ನೀಡುವ ಮೂಲಕ ಪರಿಸರ ಉಳಿವುಗೆ ನಾವೆಲ್ಲರೂ ಗಿಡಗಳನ್ನು ನೆಟ್ಟು ಪೋಷಣೆ ಮಾಡಬೇಕು ಎಂದರು.

ಇತ್ತೀಚೆಗೆ ಅರಣ್ಯ ಇಲಾಖೆಯ ಮೂಲಕ ಸರ್ಕಾರ ಉಚಿತ ಗಿಡಗಳನ್ನು ರೈತರಿಗೆ ನೀಡುವುದರ ಜೊತೆಗೆ. ಅರಣ್ಯವನ್ನು ರಿಸರ್ವ್ ಫಾರೆಸ್ಟ್ ಎಂದು ಘೋಷಣೆ ಮಾಡಿ. ರಕ್ಷಣೆ ಮಾಡುತ್ತಿರುವುದು ಮುಂದಿನ ಪೀಳಿಗೆಗೆ ಸಹಕಾರಿಯಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ರೊ.ಡಾ.ಪ್ರಸನ್ನ, ಮುಖ್ಯ ಶಿಕ್ಷಕ ಹರೀಶ್, ಶಿಕ್ಷಕರಾದ ಅಕ್ಮಲ್, ಲೋಕೇಶ್, ಕೃತಿಕ, ಸಿಂಧು, ಜೊಹಾರ, ಆಶಾ, ನಾಗರತ್ನ, ಶೋಭ, ಇಲಾಂಜಲಿ, ಶರ್ಮಿಳ, ದೈಹಿಕ ಶಿಕ್ಷಕರಾದ ಪ್ರಸನ್ನ, ಹರ್ಷಿತಾ ಹಾಗೂ ಶ್ರೀನಿವಾಸ್ ಇದ್ದರು.

ಎಂಸಿಡಿಸಿಸಿ ಬ್ಯಾಂಕಿನಿಂದ ಹೊಸ ಸದಸ್ಯರಿಗೂ ಸಾಲ



ರೈತರಿಗೆ ಟ್ರಾಕ್ಟರ್ ಕೀಗಳನ್ನು ವಿತರಿಸುತ್ತಿರುವುದು.

ಕೆ.ಆರ್.ನಗರ: ಕಳೆದ ಐದು ತಿಂಗಳಿನಿಂದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಸುಸ್ತಿದಾರಲ್ಲದ ಸಹಕಾರ ಸಂಘಗಳಲ್ಲಿ ಹೊಸ ಸದಸ್ಯರಿಗೂ ಸಾಲ ನೀಡುತ್ತಿದ್ದು, ರೈತರು ಇದರ ಸದುಪಯೋಗ ಪಡೆದು ಕೊಳ್ಳಬೇಕೆಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ ತಿಳಿಸಿದರು.

ತಾಲೂಕಿನ ಹಂಪಾಪುರ, ಚಿಕ್ಕವಡ್ಡರಗುಡಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ವತಿಯಿಂದ ರೈತ ಸದಸ್ಯರಿಗೆ ನೀಡಲಾದ ಟ್ರಾಕ್ಟರ್‌ಗಳನ್ನು ಪಟ್ಟಣದ ಎಂಸಿಡಿಸಿಸಿ ಬ್ಯಾಂಕ್ ಆವರಣದಲ್ಲಿ ವಿತರಿಸಿ ಮಾತನಾಡಿದ ಅವರು ರೈತರಿಗೆ ಟ್ರಾಕ್ಟರ್ ಜತೆಗೆ ಬೋರ್‌ವೆಲ್ ಕೊರಿಸಲು ಮತ್ತು ಬೈಕ್ ಹಾಗೂ ಕಾರು ಖರೀದಿ ಮಾಡಲು ಸಾಲ ಸೌಲಭ್ಯ ನೀಡಲಾಗುತ್ತಿದೆ ಎಂದರು.

ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕಿನಲ್ಲಿರುವ 24 ಸಹಕಾರ ಸಂಘಗಳ ಪೈಕಿ ಕೆಲವು ಸಂಘಗಳು ಸುಸ್ತಿಯಾಗಿದ್ದು 3 ಕೋಟಿ ರೂ. ಬಾಕಿ ಇದ್ದು, ಸುಸ್ತಿ ದಾರರಾಗಿರುವ ರೈತರಿಗೆ ಶೇ.14ರಷ್ಟು ಬಡ್ಡಿ ಹಾಕಲಾಗುತ್ತದೆ. ಈ ಬಗ್ಗೆ ಸಂಘದ ಆಡಳಿತ ಮಂಡಳಿಯವರು ಸುಸ್ತಿದಾರ ರೈತರಿಗೆ ಅರಿವು ಮೂಡಿಸಿ ಸಾಲ ಮರು ಪಾವತಿ ಮಾಡಿಸಲು ಪ್ರಯತ್ನ ಮಾಡಬೇಕೆಂದು ಸೂಚಿಸಿದರು.

ಎಂಸಿಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಎಸ್.ಸಿದ್ದೇಗೌಡ, ಹಂಪಾಪುರ ವಿಎಸ್‌ಎಸ್‌ಎನ್ ಅಧ್ಯಕ್ಷ ಹೆಚ್.ಪಿ. ಪ್ರಶಾಂತ್, ಹೆಬ್ಬಾಳು ಅಧ್ಯಕ್ಷ ಹೆಚ್.ಹೆಚ್. ನಾಗೇಂದ್ರ, ಹೊಸಗ್ರಹಾರ ಅಧ್ಯಕ್ಷ ರಾಜೇಗೌಡ, ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಚಿಕ್ಕವಡ್ಡರಗುಡಿ ಅಧ್ಯಕ್ಷ ನಾರಾಯಣ್, ಮಾಜಿ ಅಧ್ಯಕ್ಷ ಜಿ.ಆರ್.ಕೃಷ್ಣೇಗೌಡ, ಎಂಸಿಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಮೋಹನ್‌ರಾಜ್, ಜಿಲ್ಲಾ ಬ್ಯಾಂಕ್ ಪ್ರತಿನಿಧಿಗಳಾದ ಎನ್. ದಿನೇಶ್, ಬಸವರಾಜು, ಟಿ.ಉಮೇಶ್, ವಿಎಸ್‌ಎಸ್‌ಎನ್ ಕಾರ್ಯದರ್ಶಿಗಳ ಸಂಘದ ಅಧ್ಯಕ್ಷ ಬಿ.ಹೆಚ್. ಮಹದೇವ್, ನಗರ ಯೋಜನಾ ಪ್ರಾಧಿಕಾರದ ನಿರ್ದೇಶಕ ಕೆ.ಎನ್.ಪ್ರಸನ್ನಕುಮಾರ್ ಮತ್ತಿತರರಿದ್ದರು.

ಮಧುಮೇಹಕ್ಕೆ ಆತಂಕ ಪಡುವ ಅಗತ್ಯವಿಲ್ಲ

ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ನೂರಾರು ಮಂದಿಗೆ ಚಿಕಿತ್ಸೆ



ಮಧುಮೇಹದ ಉಚಿತ ಶಿಬಿರವನ್ನು ನೆರಗ್ಯಾತನಹಳ್ಳಿ ಮಠದ ಶ್ರೀ ಇಮ್ಮಡಿ ಶಿವಕುಮಾರಸ್ವಾಮಿ ಉದ್ಘಾಟಿಸಿದರು.

ತಿ.ನರಸೀಪುರ, ಜೂ.6– ಮಧುಮೇಹ ರೋಗ ಕಂಡುಬಂದ ತಕ್ಷಣ ಆತಂಕಕ್ಕೊಳಗಾಗುವ ಅಗತ್ಯವಿಲ್ಲ. ನಿಯಮಿತ ಆರೋಗ್ಯ ತಪಾಸಣೆ, ವೈದ್ಯರ ಸಲಹೆಯಂತೆ ಔಷಧೋಪಚಾರ, ಸಮತೋಲಿತ ಆಹಾರ ಸೇವನೆ ಹಾಗೂ ದೈಹಿಕ ಚಟುವಟಿಕೆಗಳನ್ನು ಅಳವಡಿಸಿಕೊಂಡರೆ ಮಧುಮೇಹವನ್ನು ನಿಯಂತ್ರಣದಲ್ಲಿಟ್ಟುಕೊಂಡು ಆರೋಗ್ಯಕರ ಜೀವನ ನಡೆಸಬಹುದು ಎಂದು ಸಿದ್ದರಾಮನಹುಂಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಬಹುಗುಣ ತಿಳಿಸಿದರು.

ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕುಪ್ಪೇಗಾಲ ಗ್ರಾಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಶುಶ್ರೂಷ ಶಾಲೆ ವತಿಯಿಂದ ಆಯೋಜಿಸಲಾಗಿದ್ದ ಮಧುಮೇಹದ ಉಚಿತ ಶಿಬಿರ ಕಾರ್ಯ ಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜೆಎಸ್‌ಎಸ್ ಶುಶ್ರೂಷಾ ಶಾಲೆಯ ಪ್ರಾಂಶುಪಾಲೆ ಬಿ.ಎನ್.ರೇಣುಕಾದೇವಿ, ಬಿಜೆಪಿ ಹಿರಿಯ ಮುಖಂಡ ಕುಪ್ಪೇಗಾಲ ಶಿವ ಬಸಪ್ಪ ಮಾತನಾಡಿದರು.

ತಪಾಸಣಾ ಶಿಬಿರದಲ್ಲಿ ಗ್ರಾಮದ ನೂರಾರು ಮಂದಿ ರಕ್ತ ಪರೀಕ್ಷೆ, ರಕ್ತ ದೊತ್ತಡ ಪರೀಕ್ಷೆಗಳನ್ನು ಮಾಡಿಸಿಕೊಂಡು ಔಷಧಿಗಳನ್ನು ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಸಾರ್ವಜನಿಕರು, ಗ್ರಾಮಸ್ಥರು ಭಾಗವಹಿಸಿ ಮಧುಮೇಹ ತಡೆ ಹಾಗು ನಿಯಂತ್ರಣ ಕುರಿತು ವೈದ್ಯರಿಂದ ಮಾಹಿತಿ ಪಡೆದುಕೊಂಡರು. ಜೆಎಸ್‌ಎಸ್ ನರ್ಸಿಂಗ್ ವಿದ್ಯಾರ್ಥಿಗಳು ರೋಗಿಗಳಿಗೆ ತಪಾಸಣೆ ಮಾಡುವ ಕಾರ್ಯದಲ್ಲಿ ತೊಡಗಿಕೊಂಡರು.

ಈ ವೇಳೆ ಕಾರ್ಯಕ್ರಮ ಉದ್ಘಾಟಿಸಿದ ನೆರಗ್ಯಾತನಹಳ್ಳಿ ವಿರಕ್ತ ಮಠದ ಇಮ್ಮಡಿ ಶಿವಕುಮಾರಸ್ವಾಮಿ, ಹೊಸೂರು ಹುಂಡಿ ಮಠದ ಶ್ರೀ ರಾಜಶೇಖರಸ್ವಾಮಿ, ಐನೋರಹಟ್ಟಿ ಶಿವಬಸಪ್ಪ, ಹಿರಿಯ ಉಪನ್ಯಾಸಕ ಆರ್.ಕೆ.ಮಹದೇವಸ್ವಾಮಿ, ವಿ.ಸುಕನ್ಯ, ಪಿ.ಪುನೀತ್, ಸಿಎಚ್‌ಓ ಜ್ಯೋತಿ, ನಾಗರಾಜಗೌಡ, ಎಸ್.ಪುಟ್ಟ ಸ್ವಾಮಿ, ಜಯಶೀಲ, ಕೆ.ಪುಟ್ಟಸ್ವಾಮಿ, ರಾಜಣ್ಣ, ಡೈರಿ ಅಧ್ಯಕ್ಷ ನಾಗೇಂದ್ರ ಮಾಜಿ ಕಾರ್ಯದರ್ಶಿ ಸುರೇಶ್, ಡೈರಿ ನಿರ್ದೇಶಕ ಎಂ.ಸತೀಶ್, ಸೋಮಶೇಖರ್, ಮಹದೇವಸ್ವಾಮಿ, ರಾಜಣ್ಣ, ರಮೇಶ್, ವೀರೇಂದ್ರ ಮಹೇಶ್ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

ಜೋಗನಹಳ್ಳಿ ಗ್ರಾಮ ದೇವತೆ ಮೂರೂರಮ್ಮ ರಥೋತ್ಸವ



ಬೆಟ್ಟದಪುರ: ಸಮೀಪದ ಜೋಗನಹಳ್ಳಿ ಗ್ರಾಮದೇವತೆ ಮೂರೂರಮ್ಮ ತಾಯಿ ರಥೋತ್ಸವ ಶುಕ್ರವಾರ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವದ ಅಂಗವಾಗಿ ಗ್ರಾಮದಲ್ಲಿ ಮುಂಜಾನೆಯಿಂದಲೇ ಸಕಲ ಸಿದ್ಧತೆ ಕೈಗೊಳ್ಳಲಾಗಿತ್ತು. ಬೆಳಗ್ಗೆ ಶುಭಮುಹೂರ್ತದಲ್ಲಿ ರಥದ ಮೇಲೆ ಕಳಸ ಪ್ರತಿಷ್ಠಾಪನೆ ನೆರವೇರಿಸಲಾಯಿತು. ಬಳಿಕ ದೇವಿಯ ಉತ್ಸವ ಮೂರ್ತಿಯನ್ನು ದೇಗುಲದಿಂದ ಉತ್ಸವದ ಮೂಲಕ ಕರೆತಂದು ರಥದ ಸುತ್ತ ಪ್ರದಕ್ಷಿಣೆ ಹಾಕಲಾಯಿತು. ದೇವಿಯ ಉತ್ಸವ ಮೂರ್ತಿಯನ್ನು ರಥದ ಮೇಲೆ ಪ್ರತಿಷ್ಠಾಪಿಸಿ, ಜೋಗನಹಳ್ಳಿ ಗ್ರಾಮದಿಂದ ಮೂರೂರಮ್ಮ ದೇವ ಸ್ಥಾನದವರೆಗೆ ರಥವನ್ನು ಭಕ್ತರು ಉತ್ಸಾಹದಿಂದ ಎಳೆಯುವ ಮೂಲಕ ತಮ್ಮ ಭಕ್ತಿ ಸಮರ್ಪಿಸಿದರು. ರಥೋತ್ಸವದ ವೇಳೆ ದೇವಿಗೆ ಜಯಘೋಷ ಮೊಳಗಿ ದರೆ, ಭಕ್ತರು ವಿವಿಧ ರೀತಿಯ ಹರಕೆಗಳನ್ನು ಸಲ್ಲಿಸಿ ಪೂಜೆ ಸಲ್ಲಿಸಿದರು. ಭಕ್ತರು ದೇವಿಯ ದರ್ಶನ ಪಡೆದು ತಮ್ಮ ಇಷ್ಟಾರ್ಥಗಳ ಸಿದ್ಧಿಗಾಗಿ ಪೂಜೆ ಸಲ್ಲಿಸಿದರು.

ಹಬ್ಬದ ಸಂಭ್ರಮದ ಹಿನ್ನೆಲೆಯಲ್ಲಿ ಗ್ರಾಮದ ಪ್ರಮುಖ ಬೀದಿಗಳು, ದೇವಾಲಯಗಳು ಹಾಗೂ ಮುಖ್ಯರಸ್ತೆಗಳು ವಿದ್ಯುತ್ ದೀಪಾಲಂಕಾರ ಕಂಗೊಳಿಸುತ್ತಿದ್ದ ರಥೋತ್ಸವದಲ್ಲಿ ಯಜಮಾನರು ಮುಖಂಡರು ವಿವಿಧ ಊರುಗಳಿಂದ ಬಂದ ಸಂಬಂಧಿಕರು ಗ್ರಾಮಸ್ಥರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಂತಸಪಟ್ಟರು.

ನಾಳೆಯಿಂದ ಉಚಿತ ಪಿಜಿ–ಸಿಇಟಿ ತರಬೇತಿ

ನಂಜನಗೂಡು: ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ಸಲುವಾಗಿ ತಾಂಡವಪುರ ಎಂಐಟಿ ಕಾಲೇಜಿನಲ್ಲಿ ಜೂ.8 ಮತ್ತು 9ರಂದು ಎರಡು ದಿನ ಉಚಿತ ಪಿಜಿ–ಸಿಇಟಿ ತರಬೇತಿಯನ್ನು ನಡೆಸಲಾಗುವುದು ಎಂದು ಎಂಐಟಿ ಕಾಲೇಜಿನ ಜಂಟಿ ಕಾರ್ಯದರ್ಶಿ ಡಾ.ಹೆಚ್.ಕೆ.ಚೇತನ್ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಗ್ರಾಮೀಣ ಭಾಗದ ಆರ್ಥಿಕವಾಗಿ ಹಿಂದುಳಿದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಪಿಜಿ–ಸಿಇಟಿ ತರಬೇತಿ ಪಡೆಯದ ಕಾರಣ ಅವರು ಉನ್ನತ ವ್ಯಾಸಂಗದಿಂದ ಅವಕಾಶ ವಂಚಿತರಾಗುತ್ತಿದ್ದಾರೆ, ಆದ್ದರಿಂದ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಈ ಶಿಬಿರ ಏರ್ಪಡಿಸಲಾಗಿದೆ.

ಎಲ್ಲಾ ಗ್ರಾಮಗಳಿಗೂ ಸಮಗ್ರ ನೀರು ಪೂರೈಕೆಗೆ ಆಗ್ರಹಿಸಿ

ನಾಳೆ ನಂ.ಗೂಡಿನಲ್ಲಿ ಬಾರುಕೋಲು ಚಳುವಳಿ



ಪತ್ರಿಕಾಗೋಷ್ಠಿಯಲ್ಲಿ ಹೆಚ್. ಮಹದೇವ ಮಾತನಾಡಿದರು.

ನಂಜನಗೂಡು: ನಂಜನಗೂಡು ತಾಲೂಕಿನ ಎಲ್ಲಾ ಗ್ರಾಮಗಳಿಗೂ ಸಮಗ್ರ ನೀರಾವರಿ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಹಾಗೂ ತಾಲೂಕು ಆಡಳಿತದ ರೈತ ವಿರೋಧಿ ಧೋರಣೆಯನ್ನು ಖಂಡಿಸಿ ಜೂ.8ರಂದು ಬೆಳಗ್ಗೆ 11 ಗಂಟೆಗೆ ಅನಿರ್ದಿಷ್ಟಾವಧಿ ಬೃಹತ್ ಬಾರುಕೋಲು ಚಳುವಳಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಹೆಚ್.ಮಹದೇವ ನಾಯಕ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಜೂನ್ 8ರ ಬೆಳಿಗ್ಗೆ 11 ಗಂಟೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಅಲ್ಲಿಂದ ಪಾದಯಾತ್ರೆ ಮೂಲಕ ತಾಲೂಕು ಕಚೇರಿಯ ಆವರಣದವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ನಡೆಸಲಾಗುವುದು. ನಂತರ ತಾಲೂಕು ಕಚೇರಿಯ ಮುಂಭಾಗ ಅನಿರ್ದಿಷ್ಟ ಅವಧಿ ಬೃಹತ್ ಧರಣಿಯನ್ನು ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

ಪ್ರಧಾನ ಕಾರ್ಯದರ್ಶಿ ದೇವರಾಜು ಮಾತನಾಡಿ, ತಾಲೂಕಿನ 5 ಹೋಬಳಿಗಳಿಗೆ ಸಮಗ್ರ ನೀರಾವರಿ ಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ಮತ್ತು, ರೈತ ವಿರೋಧಿ ಭ್ರಷ್ಟ ಆಡಳಿತವನ್ನು ತೊಲಗಿಸಬೇಕು, ಬಣ್ಣಾರಿ ಅಮ್ಮನ ಸಕ್ಕರೆ ಕಾರ್ಖಾನೆಗೆ ಪೂರೈಕೆ ಮಾಡುವ ಪ್ರತಿ ಟನ್ ಕಬ್ಬಿಗೆ 4,500ಗಳನ್ನು ನಿಗದಿಪಡಿಸಬೇಕು. ಕಬ್ಬಿನ ಬಾಕಿ ಹಣವನ್ನು ಕೂಡಲೇ ಬಿಡುಗಡೆಗೊಳಿಸಬೇಕು. ಎಲ್ಲಾ ಕೈಗಾರಿಕಾ ಪ್ರದೇಶಗಳಲ್ಲಿ ನಿರುದ್ಯೋಗ ಯುವಕ ಯುವತಿಯರಿಗೆ ಖಾಯಂ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿದರು.

ಭೌತಿಕವಾಗಿ ಉಳುಮೆ ಮಾಡುತ್ತಿರುವ ಸಾಗುವಳಿದಾರರಿಗೆ ಸಾಗುವಳಿ ಪತ್ರ ನೀಡಬೇಕು. ವಿದ್ಯುತ್ ಖಾಸಗೀಕರಣ ಕೈಬಿಡಬೇಕು ಎಂಬುದು ಸೇರಿದಂತೆ ಹಲವಾರು ಬೇಡಿಕೆಗಳನ್ನು ಈಡೇರಿಸುವಂತೆ ಅನಿರ್ದಿಷ್ಟಾವಧಿ ಧರಣಿಯನ್ನು ನಡೆಸಲಾಗುವುದು.

ಈ ಪ್ರತಿಭಟಣೆಯಲ್ಲಿ ರೈತ ಸಂಘದ ಕಾರ್ಯಾಧ್ಯಕ್ಷ ವಿದ್ಯಾಸಾಗರ್, ರಾಜ್ಯ ಉಪಾಧ್ಯಕ್ಷ ಇಮ್ಮಾವು ರಘು, ಬಂಗಾರಸ್ವಾಮಿ ಸೇರಿದಂತೆ ಹಲವಾರು ರೈತ ಮುಖಂಡರು ಮತ್ತು ಸಾವಿರಾರು ಸಂಖ್ಯೆಯ ರೈತರು ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ತಾಲೂಕಿನ ರೈತರು ಆಗಮಿಸಿ ಪ್ರತಿಭಟನೆಯಲ್ಲಿ ಭಾಗವಹಿಸುವ ಮೂಲಕ ಪ್ರತಿಭಟನೆಯನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಎನ್. ಮಹದೇವನಾಯಕ, ವರದರಾಜು, ಶಿವಕುಮಾರ್, ವಿದ್ಯಾಸಾಗರ್, ಸತೀಶ್ ರಾವ್ ಇದ್ದರು.

ಕೊನೆಗೂ ಸೆಂಟ್ ಮೇರಿಸ್ ಶಾಲೆಯ ರಸ್ತೆ ಕಾಮಗಾರಿಗೆ ಕಾಯಕಲ್ಪ

70 ಲಕ್ಷ ರೂ, ವೆಚ್ಚದಲ್ಲಿ ಕಾಂಕ್ರಿಟ್ ರಸ್ತೆ ಕಾಮಗಾರಿಗೆ ಚಾಲನೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಪುರಸಭೆ ಮಾಜಿ ಸದಸ್ಯೆ ರೂಪಾ ಪರಮೇಶ್ ಚಾಲನೆ ನೀಡಿದರು.

ತಿ.ನರಸೀಪುರ, ಜೂ.6– ಪಟ್ಟಣದ ನಿವಾಸಿಗಳ ಬಹು ವರ್ಷಗಳ ಬೇಡಿಕೆಯಾಗಿದ್ದ ಸೆಂಟ್ ಮೇರಿಸ್ ಶಾಲೆಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಕೊನೆಗೂ ಚಾಲನೆ ದೊರೆತಿದೆ.

ಅನೇಕ ವರ್ಷಗಳಿಂದ ಹದಗೆಟ್ಟು ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟು ಮಾಡುತ್ತಿದ್ದ ರಸ್ತೆಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಎಸ್‌ಎಫ್‌ಸಿ ಅನುದಾನದಲ್ಲಿ 70 ಲಕ್ಷ ರೂ.ಗಳ ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗೆ ಪುರಸಭೆ ಮಾಜಿ ಸದಸ್ಯೆ ರೂಪಾ ಪರಮೇಶ್ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಅನೇಕ ವರ್ಷಗಳಿಂದ ನೆನೆಗುದಿಯಲ್ಲಿದ್ದ ಸೆಂಟ್ ಮೇರಿಸ್ ರಸ್ತೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಪುರಸಭೆ ಸಾಮಾನ್ಯ ಸಭೆಯಲ್ಲಿ ಹಲವು ಬಾರಿ ವಿಷಯ ಪ್ರಸ್ತಾಪಿಸಿ ರಸ್ತೆ ದುರಸ್ತಿ ಹಾಗೂ ಶಾಶ್ವತ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡುವಂತೆ ಒತ್ತಾಯಿಸಿದ್ದ ರೂಪಾ ಪರಮೇಶ್ ಅವರ ನಿರಂತರ ಪ್ರಯತ್ನಕ್ಕೆ ಇದೀಗ ಮನ್ನಣೆ ದೊರೆತಿದ್ದು, ಕಾಮಗಾರಿಗೆ ಅಧಿಕೃತ ಚಾಲನೆ ದೊರಕಿದೆ.

ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ರೂಪಾ ಪರಮೇಶ್ ಸಾರ್ವಜನಿಕರ ಬಹುದಿನಗಳ ಬೇಡಿಕೆಯಾಗಿದ್ದ ಸೆಂಟ್ ಮೇರಿಸ್ ರಸ್ತೆ ಅಭಿವೃದ್ಧಿಗೆ ಇಂದು ಚಾಲನೆ ದೊರೆತಿರುವುದು ಸಂತಸದ ಸಂಗತಿ. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಉದ್ದೇಶದಿಂದ ಪುರಸಭೆ ಸಾಮಾನ್ಯ ಸಭೆಯಲ್ಲಿ ಹಲವು ಬಾರಿ ಈ ವಿಷಯವನ್ನು ಪ್ರಸ್ತಾಪಿಸಲಾಗಿತ್ತು. ಇದೀಗ ಕಾಮಗಾರಿಗೆ ಅನುಮೋದನೆ ದೊರೆತು ಕಾಮಗಾರಿ ಆರಂಭವಾಗಿರುವುದರಿಂದ ಸ್ಥಳೀಯ ನಿವಾಸಿಗಳ ಕನಸು ನನಸಾಗಿದೆ ಎಂದು ಹೇಳಿದರು.

ವಕೀಲ ಪರಮೇಶ್ ಮಾತನಾಡಿದರು. ಈ ವೇಳೆ ಗದ್ದೆ ಮೋಳೆ ಸಿದ್ದರಾಜು, ತೋಂಟೇಶ್, ಬನ್ನಹಳ್ಳಿ ಶಿವಕುಮಾರ್, ಅಂಗಡಿ ನಾಗೇಶ್, ಫ್ಯಾನ್ಸಿ ಮೋಹನ್, ಓಂ ಗುರು, ಗ್ರಾನೈಟ್ ಪ್ರಕಾಶ್, ರಾಜಶೇಖರ್, ಪುರಸಭೆ ಇಂಜಿನಿಯರ್ ಸಿದ್ದರಾಜು, ರಂಜಿತ್, ಗುತ್ತಿಗೆದಾರ ಪವನ್, ವಿಜಯಕುಮಾರ್ ಮತ್ತಿತರರು ಇದ್ದರು.

ಗ್ರಾಪಂ ಮಾಜಿ ಉಪಾಧ್ಯಕ್ಷೆ ಸುಮಾ ಸಿದ್ದರಾಜು ನಿಧನ



ಸರಗೂರು: ತಾಲೂಕಿನ ಹೂವಿನಕೊಳ ಗ್ರಾಮದ ನಿವಾಸಿ ಮನುಗನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷೆ ಸುಮಾ ಸಿದ್ದರಾಜು (50) ಶುಕ್ರವಾರ ಸಂಜೆ ನಿಧನರಾಗಿದ್ದಾರೆ. ಮೃತರು ಪತಿ, ಇಬ್ಬರು ಪುತ್ರಿಯರು, ಒರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಶನಿವಾರ ಮೃತರ ಜಮೀನಿನಲ್ಲಿ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಕೊಡವ ಹಾಕಿ ಪ್ರೀಮಿಯರ್ ಲೀಗ್ ಎರಡನೇ ಆವೃತ್ತಿಗೆ ದಶಪಡೆ ಸಜ್ಜು

ಮೈಸೂರಿನಲ್ಲಿ ಜುಲೈ 3ರಿಂದ 5ರವರೆಗೆ ಪಂದ್ಯಾವಳಿ; ಹತ್ತು ತಂಡಗಳು ಭಾಗಿ

ಮೈಸೂರು, ಜೂ.6– ಕೊಡವ ಹಾಕಿ ಪ್ರೀಮಿಯರ್ ಲೀಗ್(ಕೆಎಚ್‌ಪಿಎಲ್)ನ ಎರಡನೇ ಆವೃತ್ತಿಗೆ ವೇದಿಕೆ ಸಜ್ಜಾಗಿದ್ದು, ಜುಲೈ 3ರಿಂದ 5ರವರೆಗೆ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದ ಹಾಕಿ ಟರ್ಫ್‌ನಲ್ಲಿ ನಡೆಯಲಿರುವ ಬಹು ನಿರೀಕ್ಷಿತ ಪಂದ್ಯಾವಳಿಗೆ ಆಟಗಾರರ ಹರಾಜು ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಂಡಿದೆ.

ಕೊಡವ ಸಮಾಜ ಯುವ ವಿಭಾಗವು ಮೈಸೂರು ಕೊಡವ ಸಮಾಜ ಹಾಗೂ ಹಾಕಿ ಮೈಸೂರಿನ ಸಹಯೋಗದೊಂದಿಗೆ ಆಯೋಜಿಸುತ್ತಿರುವ ಕೆಎಚ್‌ಪಿಎಲ್, ಕೊಡವ ಸಮುದಾಯದ ಉದಯೋನ್ಮುಖ ಪ್ರತಿಭೆಗಳನ್ನು ಪೋಷಿಸುವುದರ ಮೂಲಕ ಕ್ರೀಡೆಯನ್ನು ಉತ್ತೇಜಿಸುವ ಗುರಿ ಹೊಂದಿರುವ ವಿಶಿಷ್ಟ ಫ್ರಾಂಚೈಸಿ ಆಧಾರಿತ ಹಾಕಿ ಸ್ಪರ್ಧೆಯಾಗಿ ಹೊರಹೊಮ್ಮಿದೆ.

ಪಂದ್ಯಾವಳಿಯ ಅಧಿಕೃತ ಆತಿಥ್ಯ ಪಾಲುದಾರ ಮೈಸೂರಿನ ಐಬಿಸ್ ಸ್ಟೈಲ್ಸ್‌ನಲ್ಲಿ ನಡೆದ ಆಟಗಾರರ ಹರಾಜಿನಲ್ಲಿ ಫ್ರಾಂಚೈಸಿ ಮಾಲೀಕರು, ಆಟಗಾರರು, ಸಮುದಾಯದ ಮುಖಂಡರು ಮತ್ತು ಹಾಕಿ ಕ್ರೀಡಾಸಕ್ತರು ಭಾಗವಹಿಸಿದ್ದರು.

ಈ ಬಾರಿ ಲೀಗ್‌ಗೆ ನೋಂದಾಯಿಸಿಕೊಂಡಿದ್ದ 268 ಕ್ಕೂ ಹೆಚ್ಚು ಆಟಗಾರರಲ್ಲಿ 10 ಫ್ರಾಂಚೈಸಿ ತಂಡಗಳಿಂದ 174 ಆಟಗಾರರನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಹಾಗೆಯೇ 30 ಐಕಾನ್ ಆಟಗಾರರನ್ನು ಆಯಾ ಫ್ರಾಂಚೈಸಿಗಳು ತಮ್ಮ ತಂಡಗಳಲ್ಲೇ ಉಳಿಸಿಕೊಂಡವು. ಕೆಎಚ್‌ಪಿಎಲ್ ಸೀಸನ್ 2ರಲ್ಲಿ ಪಳೇ ತಾಲೂಕ್, ಕನೆಕ್ಟಿಂಗ್ ಕೊಡವಾಸ್, ಕೊಡವು ವಾರಿಯರ್ಸ್, ಅಂಜಿಗೇರಿ ನಾಡ್, ಕೂರ್ಗ್ ಯುನೈಟೆಡ್, ಸೌತ್ ಸೈಡ್ ರೇಂಜರ್ಸ್, ಟೀಮ್ ಕೊಡವ ಟ್ರೈಬ್, ಕೂರ್ಗ್ ಟೈಟಾನ್ಸ್, ಕಾಕೋಟ್ ಸ್ಟ್ರೈಕರ್ಸ್ ಮತ್ತು ಎಂಟಿಬಿ ರಾಯಲ್ಸ್ ಸೇರಿದಂತೆ ಒಟ್ಟು 10 ತಂಡಗಳು ಭಾಗ ವಹಿಸುತ್ತಿವೆ. ಪ್ರತಿ ತಂಡವು ಓರ್ವ ಮಹಿಳಾ ಆಟಗಾರ್ತಿ ಹಾಗೂ ಇಬ್ಬರು 18 ವರ್ಷದೊಳಗಿನ ಆಟಗಾರರು ಸೇರಿ ಒಟ್ಟು 18 ಕ್ರೀಡಾಳುಗಳನ್ನು ಒಳಗೊಂಡಿರುತ್ತದೆ. ಈ ಮೂಲಕ ಯುವ ಆಟಗಾರರಿಗೆ ಅನುಭವಿ ವೃತ್ತಿಪರ ಮತ್ತು ರಾಷ್ಟ್ರೀಯ ಮಟ್ಟದ ಆಟಗಾರರೊಂದಿಗೆ ಭಾಗವಹಿಸುವ ಅವಕಾಶವನ್ನು ಕಲ್ಪಿಸಲಾಗಿದೆ.



ಮೈಸೂರಿನಲ್ಲಿ ನಡೆಯಲಿರುವ ಕೊಡವ ಹಾಕಿ ಪ್ರೀಮಿಯರ್ ಲೀಗ್‌ನ ಎರಡನೇ ಆವೃತ್ತಿಗೆ ಆಟಗಾರರ ಹರಾಜು ಪ್ರಕ್ರಿಯೆ ನಡೆಯಿತು.


ಹರಾಜು ಸಮಾರಂಭದಲ್ಲಿ ಕೊಡವ ಸಮಾಜ ಮೈಸೂರಿನ ಅಧ್ಯಕ್ಷ ಪೊಂಜಂಡ ಗಣಪತಿ, ಉಪಾಧ್ಯಕ್ಷ ಮಾಚಿಮಾಡ ಪಿ.ನಾಣಯ್ಯ, ಖಜಾಂಚಿ ಕೊಟ್ಟಂಗಡ ಪೆಮ್ಮಯ್ಯ, ವಿಶೇಷ ಅತಿಥಿಗಳಾದ ಪಾಂಡಂಡ ಬೋಪಣ್ಣ, ಮುದ್ದಂಡ ರಶಿನ್ ಸುಬ್ಬಯ್ಯ ಸೇರಿದಂತೆ ಕೊಡವ ಸಮುದಾಯದ ಹಲವಾರು ಪದಾಧಿಕಾರಿಗಳು, ಸದಸ್ಯರು, ಆತಿಥ್ಯ ಪಾಲುದಾರರಾದ ಐಬಿಸ್ ಸ್ಟೈಲ್ಸ್ ಪ್ರತಿನಿಧಿಯಾಗಿ ವ್ಯವಸ್ಥಾಪಕ ಜೆನಿತ್ ಮತ್ತಿತರರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಚೊಚ್ಚಲ ಆವೃತ್ತಿಯ ಚಾಂಪಿಯನ್ 'ಪಳೇ ತಾಲೂಕ್' ತಂಡ ರೋಲಿಂಗ್ ಟ್ರೋಫಿಯನ್ನು ಹಸ್ತಾಂತರಿಸುವ ಮೂಲಕ ಮತ್ತೊಂದು ಸ್ಪರ್ಧಾತ್ಮಕ ಋತುವಿನ ಆರಂಭಕ್ಕೆ ಸಾಂಕೇತಿಕ ಚಾಲನೆ ನೀಡಿತು. ವಿಶ್ವದಾದ್ಯಂತ ಇರುವ ಹಾಕಿ ಕ್ರೀಡಾಭಿಮಾನಿಗಳಿಗಾಗಿ ಕೆಎಚ್‌ಪಿಎಲ್ ಸೀಸನ್ 2ರ ಎಲ್ಲಾ ಪಂದ್ಯಗಳನ್ನು ಯುಟ್ಯೂಬ್‌ನಲ್ಲಿ ನೇರ ಪ್ರಸಾರ ಮಾಡಲಾಗುವುದು ಎಂದು ಸಂಘಟಕರು ಘೋಷಿಸಿದರು. ಹೆಚ್ಚಿನ ಮಾಹಿತಿಗೆ ಕೊಡವ ಸಮಾಜ ಯುವ ವಿಭಾಗ ಮೈಸೂರು ಅಧ್ಯಕ್ಷ ವರುಣ್ ನಂಜಪ್ಪ ಹಂಚೆಟ್ಟಿರ (ಮೊ.ಸಂ.8951949351) ಅವರನ್ನು ಸಂಪರ್ಕಿಸಬಹುದು.

ತಪ್ಪಾಯಿತು ಎಂದು ಕೇಳಿಲ್ಲ; ಕ್ಷಮೆಯಾಚನೆ ಮಾತೇ ಇಲ್ಲ

ಸಾ.ರಾ.ನಂದೀಶ್ ಹೇಳಿಕೆಗೆ ಹೂಟಗಳ್ಳಿ ಸುರೇಶ್ ಸ್ಪಷ್ಟನೆ

ಮೈಸೂರು, ಜೂ.6– ನಾನು ಸಾ.ರಾ. ನಂದೀಶ್ ಅವರಿಗೆ ಕ್ಷಮೆ ಕೇಳಿದ್ದೇನೆ ಎಂಬುದು ಸುಳ್ಳು ಎಂದು ಮೈಸೂರಿನ ಜೆಡಿಎಸ್ ಮುಖಂಡ ಹೂಟಗಳ್ಳಿ ಸುರೇಶ್ ಸ್ಪಷ್ಟಪಡಿಸಿದ್ದಾರೆ.



ಹೂಟಗಳ್ಳಿ ಸುರೇಶ್

ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಸುಮಲತಾ ಗೆಲ್ಲುತ್ತಾರೆಂದು ಜಿಪಂ ಮಾಜಿ ಅಧ್ಯಕ್ಷ ಸಾ.ರಾ.ನಂದೀಶ್ 10 ಲಕ್ಷ ಬೆಟ್ಟಿಂಗ್ ಕಟ್ಟಿದ್ದರು ಎಂಬ ಆರೋಪದ ಸತ್ಯಾಸತ್ಯತೆಗಾಗಿ ಕೆ.ಆರ್.ನಗರ ತಾಲೂಕಿನ ಹೆಬ್ಬಾಳದಲ್ಲಿರುವ ಕಪ್ಪಡಿ ಕ್ಷೇತ್ರದಲ್ಲಿ ಶುಕ್ರವಾರ ಆಣೆ–ಪ್ರಮಾಣಕ್ಕೆ ಮುಂದಾಗಿದ್ದ ವೇಳೆ ದೊಡ್ಡ ಹೈಡ್ರಾಮವೇ ನಡೆಯಿತು. ಆ ವೇಳೆ ಸಾ.ರಾ.ನಂದೀಶ್, ಹೂಟಗಳ್ಳಿ ಸುರೇಶ ದೂರವಾಣಿ ಕರೆ ಮಾಡಿ ನನ್ನದು ತಪ್ಪಾಗಿದೆ ಎಂದು ಹೇಳಿದ್ದಾರೆಂದು ವರದಿಯಾಗಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ಹೂಟಗಳ್ಳಿ ಸುರೇಶ್, ನಾನು ಸಾ.ರಾ.ನಂದೀಶ್ ಅವರ ಬಳಿ ತಪ್ಪಾಯಿತು ಎಂದು ಹೇಳಿಲ್ಲ. ಮುಂದೆಯೂ ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ. ಅಷ್ಟಕ್ಕೂ ಆಣೆ–ಪ್ರಮಾಣ ಮಾಡಲು ಕಪ್ಪಡಿ ಕ್ಷೇತ್ರಕ್ಕೆ ಆಹ್ವಾನಿಸಿದ್ದು ಕೂಡ ಸಾ.ರಾ.ನಂದೀಶ್ ಅವರೇ ಹೊರತು ನಾವಲ್ಲ. ಅವರು ಆಹ್ವಾನಿಸಿದ್ದಕ್ಕೆ ನಾವು ಹೋಗಿದ್ದೆವು. ಯಾವುದೇ ಅಬ್ಬರ, ಬೆಂಬಲಿಗರ ಆರ್ಭಟ ಇಲ್ಲದೆಯೇ ಶಾಂತಚಿತ್ತತೆಯಿಂದ, ಭಕ್ತಿಪೂರ್ವಕವಾಗಿ ದೇವಸ್ಥಾನಕ್ಕೆ ಹೋಗಿ ನಮ್ಮ ಮನದಾಳದ ಸತ್ಯಸಂಗತಿಯನ್ನು ದೇವರಿಗೆ ಒಪ್ಪಿಸಿ ಬಂದಿದ್ದೇವೆ ಎಂದಿದ್ದಾರೆ.

ಮೈಸೂರು ರೈಲ್ವೆ ಮ್ಯೂಸಿಯಂನಲ್ಲಿ 1880ನೇ ಇಸವಿಯ ತೂಕದ ಯಂತ್ರ ಅನಾವರಣ



ಮೈಸೂರು ರೈಲ್ವೆ ಸಂಗ್ರಹಾಲಯದಲ್ಲಿ ಐತಿಹಾಸಿಕ ಮಹತ್ವ ಸಾರುವ ಪುನರುಜ್ಜೀವನಗೊಳಿಸಿದ ತೂಕದ ಯಂತ್ರವನ್ನು ಶನಿವಾರ ಮೈಸೂರು ರೈಲ್ವೆ ವಿಭಾಗೀಯ ವ್ಯವಸ್ಥಾಪಕ ಮುದಿತ್ ಮಿತ್ತಲ್ ಅನಾವರಣಗೊಳಿಸಿದರು.

ಮೈಸೂರು, ಜೂ.6(ಬಿಎಲ್‌ಯು)– ಮೈಸೂರು ರೈಲ್ವೆ ಸಂಗ್ರಹಾಲಯದಲ್ಲಿ ಪುನರುಜ್ಜೀವನಗೊಳಿಸಿದ 1880ರ ದಶಕದ ಅಪರೂಪದ ಐತಿಹಾಸಿಕ ಮಹತ್ವದ ತೂಕದ ಯಂತ್ರವನ್ನು ಅನಾವರಣಗೊಳಿಸಲಾಯಿತು.

ಮೈಸೂರು ರೈಲ್ವೆ ವಿಭಾಗೀಯ ವ್ಯವಸ್ಥಾಪಕ ಮುದಿತ್ ಮಿತ್ತಲ್ ತೂಕದ ಯಂತ್ರವನ್ನು ಅನಾವರಣಗೊಳಿಸಿದರು.

ಇಂಗ್ಲೆಂಡ್‌ನ ಲಿವರ್ ಪೂಲ್‌ನ ಪ್ರಸಿದ್ಧ ಸಂಸ್ಥೆಯ ಹೆನ್ರಿ ಪೂಲಿ ಅಂಡ್ ಸನ್ ಈ ತೂಕದ ಯಂತ್ರ ನಿರ್ಮಿಸಿತ್ತು. ಇದು ಮೂಲತಃ ದಕ್ಷಿಣ ಭಾರತೀಯ ರೈಲ್ವೆ ಆಸ್ತಿಯಾಗಿದೆ. ಪ್ರಯಾಣಿಕರ ಸಾಮಾನು, ಪಾರ್ಸೆಲ್ ಹಾಗೂ ಭಾರವಾದ ಸರಕುಗಳನ್ನು ತೂಕ ಮಾಡಲು ಬಳಸಲಾಗುವ ಈ ತೂಕದ ಯಂತ್ರ 2 ಸಾವಿರ ಕೆ.ಜಿ. ತೂಗುವ ಸಾಮರ್ಥ್ಯ ಹೊಂದಿದೆ. ಗಟ್ಟಿಯಾದ ಕಾಸ್ಟ್ ಐರನ್ ನಿರ್ಮಾಣ ಹಾಗೂ ನಿಖರ ಯಾಂತ್ರಿಕ ವ್ಯವಸ್ಥೆ ಹೊಂದಿರುವ ಈ ತೂಕದ ಯಂತ್ರ ಅಪರೂಪ ಹಾಗೂ ಐತಿಹಾಸಿಕ ಮಹತ್ವ ಸಾರಲಿದೆ. ಸಾರ್ವಜನಿಕರು ಈ ಐತಿಹಾಸಿಕ ವಸ್ತುಗಳನ್ನು ವೀಕ್ಷಿಸಿ ಛಾಯಾಚಿತ್ರಗಳನ್ನು ತೆಗೆದುಕೊಳ್ಳಬಹುದು. ಆದರೆ ಈ ಪರಂಪರೆಯ ತೂಕದ ಯಂತ್ರದ ಮೇಲೆ ಹತ್ತಬಾರದು ಹಾಗೂ ಮುಟ್ಟಬಾರದು ಎಂದು ರೈಲ್ವೆ ಇಲಾಖೆ ಸಲಹೆ ನೀಡಿದೆ.

ದೇವರಾಜ ಅರಸು ಸಾಧನೆ ಮೂಲಕ ಸದಾ ಜೀವಂತ

- ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಮರಣೆ
- ಅವರು ತಂದಂತಹ ಸುಧಾರಣೆ ದೇಶಕ್ಕೆ ಮಾದರಿ



ಬೆಂಗಳೂರು,ಜೂ.6(ಕೆಎಂಶಿ)– ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸು ರಾಜ್ಯದ ಪ್ರಗತಿಗೆ ಹಾಕಿರುವ ಅಡಿಪಾಯ 100 ವರ್ಷ ಕಳೆದರೂ ಸಾಧನೆಗಳ ಮೂಲಕ ಜೀವಂತವಾಗಿರುತ್ತಾರೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ದೇವರಾಜು ಅರಸು ಪುಣ್ಯಸ್ಮರಣೆ ಅಂಗವಾಗಿ ವಿಧಾನಸೌಧದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವರಾಜ ಅರಸು ನಮ್ಮನ್ನು ಅಗಲಿ 45 ವರ್ಷಗಳಾಗಿವೆ. ನಾನು ವಿದ್ಯಾರ್ಥಿ ನಾಯಕನಾಗಿದ್ದಾಗ ಅವರ ಭಾಷಣಗಳನ್ನು ಕೇಳಿದ್ದೇನೆ, ಅವರು ರಾಜಿನಾಮೆ ಕೊಟ್ಟಾಗ ಮಾಡಿದ ಕೊನೇ ಭಾಷಣ ನನ್ನ ಕಿವಿಯಲ್ಲಿ ಹಾಗೆ ಉಳಿದಿದೆ ಎಂದು ಸ್ಮರಿಸಿದರು.

ಯಾವ ಭಾವನೆಯೊಂದಿಗೆ ರಾಜಕಾರಣ, ಅಧಿಕಾರ ನಡೆಸಿದರು ಎಂಬುದನ್ನು ಅಂದು ಹೇಳಿದರು, ಅಂದಿನ ಪ್ರಧಾನಿ ಇಂದಿರಾ ಗಾಂಧಿ ಮಾರ್ಗದರ್ಶನದಲ್ಲಿ ಅರಸು ನಾಯಕತ್ವದಲ್ಲಿ ಉಳುವವನೇ ಭೂಮಿಯ ಒಡೆಯ ಎಂಬ ಭೂಸುಧಾರಣಾ ಕಾಯ್ದೆ ತರುವ ಮೂಲಕ ದೇಶಕ್ಕೇ ಮಾದರಿ ಆಗಿದ್ದರು. ಅದೊಂದು ಕ್ರಾಂತಿ, ಅರಸು ಒಬ್ಬ ಧೀಮಂತ ನಾಯಕ, ಎಲ್ಲಾ ಜನಾಂಗದವರನ್ನು ಬೆಳೆಸುವ ಮೂಲಕ ಹಿಂದುಳಿದ ವರ್ಗಗಳ ನಾಯಕರ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದರು, ಹಿಂದುಳಿದವರನ್ನು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಬೆಳೆಸಲು ಕ್ರಮ ಕೈಗೊಂಡರು. ಅಂದಿನ ಕಾಲದಲ್ಲಿ ಎಲೆಕ್ಟ್ರಾನಿಕ್ ಸಿಟಿಗೆ ಅಡಿಪಾಯ ಹಾಕಿದ ಧೀಮಂತ ನಾಯಕ ಅರಸು, ರೈತರು ಮಾತ್ರವಲ್ಲದೆ ಕ್ಷೇತ್ರದ ಅಭಿವೃದ್ಧಿಗೆ ಕಾರಣ ರಾಗಿದ್ದರು, ಅವರ ಕೊಡುಗೆಗಳನ್ನು ನಾವು ಉಳಿಸಿ, ಬೆಳೆಸಿಕೊಂಡು ಹೋಗುತ್ತಿದ್ದೇವೆ ಎಂದರು.

ಜಯಪುರದಲ್ಲಿ ವಿಶ್ವ ಪರಿಸರ ದಿನಾಚರಣೆ



ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಶಾಸಕ ಜಿ.ಟಿ.ದೇವೇಗೌಡರು ಗಿಡ ನೆಟ್ಟು ನೀರೆರೆದರು.

ಮೈಸೂರು: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಮೈಸೂರು ತಾಲೂಕಿನ ಜಯಪುರ ಗ್ರಾಮ ಪಂಚಾಯಿತಿ ವತಿಯಿಂದ ಗ್ರಾಮದ ಗುಜ್ಜಮ್ಮ ತಾಯಿ ದೇವಾಲಯ ಆವರಣದಲ್ಲಿ ವಿಶೇಷ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕ ಜಿ.ಟಿ.ದೇವೇಗೌಡರು, ಗಿಡ ನೆಟ್ಟು ನೀರೆರೆಯುವ ಮೂಲಕ ಪರಿಸರ ಸಂರಕ್ಷಣೆಯ ಮಹತ್ವವನ್ನು ಪ್ರತಿಪಾದಿಸಿದರು. ಪ್ರತಿಯೊಬ್ಬರೂ ಪರಿಸರದ ಉಳಿವಿಗಾಗಿ ಗಿಡಗಳನ್ನು ನೆಟ್ಟು ಪೋಷಿಸುವ ಜವಾಬ್ದಾರಿ ಇದೆ ಎಂದರು.

ಈ ಸಂದರ್ಭದಲ್ಲಿ ಮೈಸೂರು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣ, ಪಿಡಿಓ ಬಸವಣ್ಣ ಸೇರಿದಂತೆ ಗ್ರಾಮ ಪಂಚಾಯಿತಿ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಮುಖಂಡರಾದ ದಾರಿಪುರ ಡಿ.ಚಂದ್ರಶೇಖರ್, ಇಲವಾಲ ಗೋವಿಂದ ಸ್ವಾಮಿ, ಸುಜುಕಿ ಸಿದ್ದೇಗೌಡ, ಜವರನಾಯಕ, ಸಮಾಜ ಸೇವಕ ಎಸ್. ಶ್ರೀಕಾಂತ್, ದಾರಿಪುರ ಬಸವಣ್ಣ, ಮರಿಸಿದ್ದೇಗೌಡ, ಅಭಿಷೇಕ್, ರಾಜೇಶ್, ಅಬ್ದುಲ್ ಮುತಾಲಿಫ್, ಹಾರೋಹಳ್ಳಿ ಮಂಚಯ್ಯ, ಜಯಪುರ ರವಿ ಸೇರಿದಂತೆ ಹಲವರು ಉಪಸ್ಥಿತರಿದ್ದು, ಪರಿಸರ ಸಂರಕ್ಷಣೆಯ ಸಂಕಲ್ಪ ಕೈಗೊಂಡರು. ಪರಿಸರ ಜಾಗೃತಿ ಮೂಡಿಸುವುದರ ಜೊತೆಗೆ ಹಸಿರು ಪರಿಸರ ನಿರ್ಮಾಣಕ್ಕೆ ಜನರಲ್ಲಿ ಅರಿವು ಮೂಡಿಸುವಲ್ಲಿ ಯಶಸ್ವಿಯಾಯಿತು.

ಇಂದು ಕೆಂಪು ಚೆಲುವಾಜಮ್ಮಣ್ಣಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬೆಳ್ಳಿಹಬ್ಬ

ಮೈಸೂರು, ಜೂ.6– ಮೈಸೂರಿನ ಕೆ.ಸಿ.ನಗರದ 'ಕೆಂಪು ಚೆಲುವಾಜಮ್ಮಣ್ಣಿ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ'ದ ಬೆಳ್ಳಿಹಬ್ಬ ಸಮಾರಂಭ ಭಾನುವಾರ(ಜೂ.7) ವಿಜೃಂಭಣೆಯಿಂದ ನಡೆಯಲಿದೆ.

ಬಡಾವಣೆಯ ಜಯಚಾಮರಾಜೇಂದ್ರ ರಸ್ತೆಯಲ್ಲಿ ಬೆಳಗ್ಗೆ 10ಕ್ಕೆ ಸಾಂಸ್ಕೃತಿಕ ಕಲಾತಂಡಗಳ ಮೆರವಣಿಗೆಯೊಂದಿಗೆ ಆರಂಭಗೊಳ್ಳುವ ಬೆಳ್ಳಿಹಬ್ಬವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿ, ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ.

ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಇತಿಹಾಸಕಾರ ಹಾಗೂ ಮೈಸೂರು ಕತೆಗಳು ಖ್ಯಾತಿಯ ಧರ್ಮೇಂದ್ರ ಕುಮಾರ್ ಅರೇನಹಳ್ಳಿ, ಸಂಘದ ಅಧ್ಯಕ್ಷ ಹೆಚ್.ಆರ್.ಯೋಗೇಂದ್ರ, ಕಾರ್ಯದರ್ಶಿ ಟಿ.ಪಿ.ವಿಶ್ವನಾಥ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿರಲಿದ್ದಾರೆ.

ಸಂಜೆ 4ಕ್ಕೆ ಪೊಲೀಸ್ ಬ್ಯಾಂಡ್, ಸಂಜೆ 5ಕ್ಕೆ ಅಶೋಕ್ ಮತ್ತು ತಂಡದಿಂದ ಚಲನಚಿತ್ರ ಗೀತೆಗಳ ಗಾಯನ, ಸಂಜೆ 7ಕ್ಕೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರಿಂದ ಕೆ.ಸಿ.ನಗರ ನಿವಾಸಿಗಳ ವಿಳಾಸ ಸೂಚಿ ಪುಸ್ತಕ ಬಿಡುಗಡೆ, ಸಂಜೆ 7.15ಕ್ಕೆ ಮಹೇಂದ್ರ ಮತ್ತು ತಂಡದಿಂದ ಗೀತಗಾಯನ ವೈವಿಧ್ಯ, ಮಿಮಿಕ್ರಿ ಗೋಪಿ ಅವರಿಂದ ಹಾಸ್ಯ ರಸಮಂಜರಿ ಸೇರಿದಂತೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮದ ಬಳಿಕ ಕಾರ್ಯಕ್ರಮದ ಬಳಿಕ ರಾತ್ರಿ 9ಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಸಮಾರೋಪ ನುಡಿಗಳನ್ನಾಡಲಿದ್ದಾರೆ.

ಸರ್ಕಾರಿ ಶಾಲೆ ಗ್ರಂಥಾಲಯಕ್ಕೆ ಕನ್ನ ; ಲಕ್ಷ ಮೌಲ್ಯದ 3 ಸಾವಿರ ಪುಸ್ತಕ ಕಳ್ಳತನ

ಮೈಸೂರು,ಜೂ.6(ಪಿಎಂ)– ಗಾಂಧಿನಗರದ ಶಿವಯೋಗಿ ರಸ್ತೆಯಲ್ಲಿರುವ ಆದಿಜಾಂಬವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗ್ರಂಥಾಲಯದ ಬೀಗ ಒಡೆದು ಲಕ್ಷ ರೂ. ಮೌಲ್ಯದ 3 ಸಾವಿರ ಪುಸ್ತಕಗಳನ್ನು ಕಳ್ಳತನ ಮಾಡಲಾಗಿದೆ.

ಸದರಿ ಶಾಲೆಯ ಮುಖ್ಯಶಿಕ್ಷಕಿ ಗುಂಡಮ್ಮ ನೀಡಿದ ದೂರಿನನ್ವಯ ಎನ್‌ಆರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸರ್ಕಾರದ ವಿವಿಧ ಅನುದಾನದಡಿ ಪುಸ್ತಕಗಳನ್ನು ಖರೀದಿ ಮಾಡಿ ಶಾಲೆಯ ಗ್ರಂಥಾಲಯದಲ್ಲಿ ಇಟ್ಟಿದ್ದೆವು. ಸಾರ್ವತ್ರಿಕ ಬೇಸಿಗೆ ರಜೆ ಅವಧಿಯಲ್ಲಿ ಸಹ ಶಾಲೆಗೆ ಆಗಾಗ್ಗೆ ಶಾಲೆಗೆ ಭೇಟಿ ನೀಡುತ್ತಿದ್ದೆ. ಮೇ 21ರ ಬೆಳಗ್ಗೆ ಶಾಲೆಯ ಎಲ್ಲಾ ಕೊಠಡಿಗಳನ್ನು ಪರಿಶೀಲಿಸಿದ್ದು, ಈ ವೇಳೆ ಮೊದಲನೇ ಮಹಡಿಯ ಗ್ರಂಥಾಲಯದ ಕೊಠಡಿಯ ಬಾಗಿಲ ಬೀಗ ಒಡೆದು ಕಬ್ಬಿಣದ ರೆಕ್‌ನಲ್ಲಿ ಜೋಡಿಸಿಟ್ಟಿದ್ದ ಸುಮಾರು 3 ಸಾವಿರ ಪುಸ್ತಕಗಳನ್ನು ಕಳ್ಳತನ ಮಾಡಿರುವುದು ಗೊತ್ತಾಯಿತು. ಶಾಲೆಗೆ ರಜೆ ಇದ್ದ ಕಾರಣ ಎಷ್ಟು ಪುಸ್ತಕಗಳು ಕಳ್ಳತನವಾಗಿವೆ ಎಂದು ಪರಿಶೀಲಿಸಿ ಈ ದಿನ ತಡವಾಗಿ ಠಾಣೆಗೆ ದೂರು ನೀಡುತ್ತಿರುವುದಾಗಿ ಗುಂಡಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಸೈಬರ್ ವಂಚಕರಿಂದ ಇಂಜಿನಿಯರ್‌ವೊಬ್ಬರ ಬ್ಯಾಂಕ್ ಖಾತೆ ಹ್ಯಾಕ್ ; 13.71 ಲಕ್ಷ ವಂಚನೆ

ಮೈಸೂರು,ಜೂ.6(ಪಿಎಂ)– ಇಂಜಿನಿಯರ್‌ವೊಬ್ಬರ ಬ್ಯಾಂಕ್ ಖಾತೆ ಹ್ಯಾಕ್ ಮಾಡಿ ಅವರ ವಿವಿಧ ಬ್ಯಾಂಕ್ ಖಾತೆಗಳಿಂದ ಒಟ್ಟು 13,71,237 ರೂ. ವರ್ಗಾವಣೆ ಮಾಡಿಕೊಂಡು ವಂಚಿಸಿರುವ ಸಂಬಂಧ ಮೈಸೂರು ನಗರ ಪೊಲೀಸ್ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶ್ವೇಶ್ವರನಗರದ ಇಂಜಿನಿಯರ್‌ವೊಬ್ಬರ ಬ್ಯಾಂಕ್ ಖಾತೆಗಳನ್ನು ಹ್ಯಾಕ್ ಮಾಡಿ ಹಣ ದೋಚಲಾಗಿದೆ. ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನಲ್ಲಿ 5 ಲಕ್ಷ ಪ್ರಿ ಅಪ್ರೋವ್ಡ್ ಸಾಲ ಮಂಜೂರು ಆಗಿದೆ ಎಂದು ಲಿಂಕ್ ಬಂದಿತ್ತು. ಅದರಂತೆ ಮತ್ತೊಂದು ಬ್ಯಾಂಕಿನ ವೇತನ ಖಾತೆಗೆ ಕ್ರೆಡಿಟ್ ಮಾಡುವಂತೆ ಫಾರಂ ಭರ್ತಿ ಮಾಡಿದ್ದು, ಮೇ 23ರಂದು ಹಣ ಕ್ರೆಡಿಟ್ ಸಹ ಆಗಿದೆ. ಅಂತೆಯೇ ಮೇ 25ರಂದು ಮತ್ತೊಂದು ಬ್ಯಾಂಕಿನಿಂದ 6,40,561 ರೂ. ಸಾಲವಾಗಿ ಮಂಜೂರಾಯಿತು.

ಹೀಗಿರುವಾಗ, ಬ್ಯಾಂಕ್‌ನಿಂದ ಹಣ ವರ್ಗಾವಣೆ ಸಂಬಂಧ ಮೇ 25ರಂದು ಮೆಸೇಜ್ ಬಂದಿದ್ದು, ಸದರಿ ವರ್ಗಾವಣೆಯನ್ನು ಅವರು ಮಾಡದ ಹಿನ್ನೆಲೆಯಲ್ಲಿ ಬ್ಯಾಂಕ್ ಖಾತೆಯ ಸ್ಟೇಟ್‌ಮೆಂಟ್ ಪರಿಶೀಲಿಸಿದಾಗ, ಹಲವು ಅನಧಿಕೃತ ವರ್ಗಾವಣೆಗಳು ಮೇ 21ರಿಂದ 25ರವರೆಗೆ ನಡೆದಿರುವುದು ತಿಳಿದುಬಂದಿತು. ಬ್ಯಾಂಕ್ ಖಾತೆ ಹ್ಯಾಕ್ ಮಾಡಿ ವಿವಿಧ ಬ್ಯಾಂಕ್ ಖಾತೆಗಳಿಂದ ಒಟ್ಟು 13,71,237 ರೂ. ವರ್ಗಾವಣೆ ಮಾಡಿಕೊಂಡು ವಂಚಿಸಲಾಗಿದೆ ಎಂದು ಸದರಿ ಇಂಜಿನಿಯರ್ ನೀಡಿದ ದೂರಿನನ್ವಯ ಜೂ.5ರಂದು ಎಫ್‌ಐಆರ್ ದಾಖಲಾಗಿದೆ.

ಮನೆಯಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಮಹಿಳೆ ಬಂಧನ ; ಮೂವರು ಯುವತಿಯರ ರಕ್ಷಣೆ

ಕ್ರೈಂ ಬಾಕ್ಸ್

ಮೈಸೂರು,ಜೂ.6(ಪಿಎಂ)– ಮನೆವೊಂದರ ಮೇಲೆ ದಾಳಿ ನಡೆಸಿದ ಸಿಸಿಬಿ ಪೊಲೀಸರು, ಇಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಮಹಿಳೆ ಬಂಧಿಸಿ, ಮೂವರು ಯುವತಿಯರನ್ನು ರಕ್ಷಣೆ ಮಾಡಿದ್ದಾರೆ.

ಶುಕ್ರವಾರ ಮಧ್ಯಾಹ್ನ ಬಾತ್ಮೀದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ವಿಜಯನಗರ 4ನೇ ಹಂತದ 2ನೇ ಫೇಸ್‌ನ ಅಪಾರ್ಟ್‌ಮೆಂಟ್‌ವೊಂದರ ಹಿಂಭಾಗ ಇರುವ ಮನೆಯ ಮೇಲೆ ದಾಳಿ ನಡೆಸಿದ್ದು, ಈ ವೇಳೆ ವೇಶ್ಯಾವಾಟಿಕೆ ನಡೆಸುತ್ತಿದ್ದ ದಿವ್ಯಾ ಎಂಬ ಮಹಿಳೆಯನ್ನು ಬಂಧಿಸಲಾಗಿದೆ.

ಈಕೆ ಮನೆಯನ್ನು ಬಾಡಿಗೆಗೆ ಪಡೆದುಕೊಂಡು ಪ್ರತಿದಿನ ಹುಡುಗಿಯರು ಹಾಗೂ ಮಹಿಳೆಯರನ್ನು ಕರೆಸಿಕೊಂಡು ಅವರಿಗೆ ಹಣದ ಆಮಿಷವೊಡ್ಡಿ ಗಿರಾಕಿಗಳನ್ನು ಮನೆಗೆ ಕರೆಸಿ ವೇಶ್ಯಾವಾಟಿಕೆ ನಡೆಸುತ್ತಿದ್ದಳು. ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಕೀಲನಿಗೆ 98 ಸಾವಿರ ರೂ. ವಂಚನೆ

ಮೈಸೂರು,ಜೂ.6(ಪಿಎಂ)– ವಕೀಲರೊಬ್ಬರ ಮೊಬೈಲ್ ಫೋನ್ ಹ್ಯಾಂಗ್ ಆಗಿ ಅವರ ಬ್ಯಾಂಕ್ ಖಾತೆಯಿಂದ 98 ಸಾವಿರ ರೂ. ಖಾಸಗಿ ಕಂಪನಿವೊಂದರ ಹೆಸರಿನ ಬ್ಯಾಂಕ್ ಖಾತೆಗೆ ವರ್ಗಾವಣೆಯಾದ ಸಂಬಂಧ ಮೈಸೂರು ಜಿಲ್ಲಾ ಪೊಲೀಸ್‌ನ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇ 31ರಂದು ಮನೆಯಲ್ಲಿ ಮೊಬೈಲ್‌ನಲ್ಲಿ ಫೇಸ್‌ಬುಕ್ ನೋಡುತ್ತಿದ್ದೆ. ಆಗ ಇದ್ದಕ್ಕಿದ್ದಂತೆ ನನ್ನ ಮೊಬೈಲ್ ಹ್ಯಾಂಗ್ ಆಯಿತು. 20 ನಿಮಿಷದ ಬಳಿಕ ಮೊಬೈಲ್ ಇದ್ದಕ್ಕಿದ್ದಂತೆ ಸರಿ ಹೋಯಿತಾದರೂ ನನ್ನ ಬ್ಯಾಂಕ್ ಖಾತೆಯಿಂದ 98,000 ರೂ. ಗಳನ್ನು ಗೂಗಲ್ ಪೇ ಮೂಲಕ ವರ್ಗಾವಣೆ ಮಾಡಿಕೊಂಡು ಮೋಸ ಮಾಡಲಾಗಿದೆ ಎಂದು ಸದರಿ ವಕೀಲರು ನೀಡಿದ ದೂರಿನನ್ವಯ ಜೂ.4ರಂದು ಎಫ್‌ಐಆರ್ ದಾಖಲಾಗಿದೆ.

ಗೂಡ್ಸ್ ವಾಹನ ಡಿಕ್ಕಿ; ಬೈಕ್ ಸವಾರ ಸಾವು

ಮೈಸೂರು,ಜೂ.6(ಪಿಎಂ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಪಶ್ಚಿಮ ಭಾಗದ ಸರ್ವೀಸ್ ರಸ್ತೆಯಲ್ಲಿ ಕಳಸ್ತವಾಡಿ ಗ್ರಾಮದ ಆಂಜನೇಯಸ್ವಾಮಿ ದೇವಸ್ಥಾನ ಸಮೀಪ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ಬೈಕ್ ಸವಾರ ಮೃತಪಟ್ಟಿರುವ ಘಟನೆ ನಡೆದಿದೆ.


ಪಿರಿಯಾಪಟ್ಟಣ ತಾಲೂಕಿನ ಗುಡ್ಡೇನಹಳ್ಳಿ ಗ್ರಾಮದ ನಿವಾಸಿ ಎಂ.ಆರ್.ಕೀರ್ತಿಶ್ (24) ಮೃತಪಟ್ಟ ಬೈಕ್ ಸವಾರ. ಕೀರ್ತಿಶ್ ಜೂ.3ರಂದು ಸಂಜೆ ಬೈಕ್‌ನಲ್ಲಿ (ಕೆಎ 12, ವೈ 0694) ಮೈಸೂರಿನಿಂದ ಬೆಂಗಳೂರಿಗೆ ಹೋಗುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಎಕ್ಸ್‌ಪ್ರೆಸ್ ವೇ ಪಶ್ಚಿಮ ಭಾಗದ ಸರ್ವೀಸ್ ರಸ್ತೆಯಲ್ಲಿ ಕಳಸ್ತವಾಡಿ ಸಮೀಪ ಇರುವ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಎದುರಿನಿಂದ ಅತೀವೇಗವಾಗಿ ಬಂದ ಗೂಡ್ಸ್ ವಾಹನ (ಕೆಎ–55, 7860) ಕೀರ್ತಿಶ್ ಬೈಕ್‌ಗೆ ಡಿಕ್ಕಿ ಹೊಡೆದಿದೆ.

ಪರಿಣಾಮ ಕೀರ್ತಿಶ್ ತಲೆಗೆ ಗಂಭೀರ ಗಾಯವಾಗಿದ್ದು, ಕೂಡಲೇ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಆತ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ. ಅಪಘಾತ ನಡೆಸಿದ ಗೂಡ್ಸ್ ವಾಹನ ಚಾಲಕನ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಕೀರ್ತಿಶ್ ತಂದೆ ರತ್ನಾಕರ ನೀಡಿದ ದೂರಿನನ್ವಯ ಎನ್‌ಆರ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕಲಿ ಬೀಡಿ ಮಾರಾಟ; ವ್ಯಾಪಾರಿ ವಿರುದ್ಧ ದೂರು ದಾಖಲು

ಮೈಸೂರು,ಜೂ.6(ಪಿಎಂ)– ಪ್ರತಿಷ್ಠಿತ ಕಂಪನಿಯೊಂದರ ಹೆಸರಿನಲ್ಲಿ ನಕಲಿ ಬೀಡಿ ಮಾರಾಟ ಮಾಡುತ್ತಿದ್ದ ಆರೋಪದಡಿ ವ್ಯಾಪಾರಿಯೊಬ್ಬರ ವಿರುದ್ಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ಹಳೆ ಸಂತೆಪೇಟೆಯ ರಾಮ್‌ದೇವ್ ಜನರಲ್ ಸ್ಟೋರ್ ಮಾಲೀಕ ಅರ್ಜುನ್ ಎಂಬುವವರ ವಿರುದ್ಧ ಮಂಗಳೂರು ಗಣೇಶ ಬೀಡಿ ವರ್ಕ್ಸ್ ಕಂಪನಿ ಅಸಿಸ್ಟೆಂಟ್ ವೈಸ್ ಪ್ರೆಸಿಡೆಂಟ್ ಪುರುಷೋತ್ತಮ್ ನೀಡಿದ ದೂರಿನನ್ವಯ ಪ್ರಕರಣ ದಾಖಲಾಗಿದೆ.

ಜೂ.5ರಂದು ಮಧ್ಯಾಹ್ನ ಕಂಪನಿ ಉದ್ಯೋಗಿಯಾದ ಅಕೋಶ ಶೆಟ್ಟಿ ಅವರ ಜೊತೆಯಲ್ಲಿ ಮಾರುಕಟ್ಟೆ ಸಮೀಕ್ಷೆಗೆ ಮೈಸೂರು ದೇವರಾಜ ಮೊಹಲ್ಲಾದ ಸಂತೆಪೇಟೆಗೆ ಹೋಗಿದ್ದೆವು. ಅಲ್ಲಿ ಸದರಿ ಸ್ಟೋರ್‌ನಲ್ಲಿ ಸಮೀಕ್ಷೆಯನ್ನು ಮಾಡುತ್ತಿದಾಗ ನಮ್ಮ ಕಂಪನಿಯ ಹೆಸರನ್ನು ಬಳಸಿಕೊಂಡು ತಯಾರಿಸಲಾಗಿರುವ ನಕಲಿ ಬೀಡಿಗಳನ್ನು ಮಾರಾಟ ಮಾಡುತ್ತಿರುವುದು ಕಂಡುಬಂತು ಎಂದು ದೂರಿನಲ್ಲಿ ಪುರುಷೋತ್ತಮ್ ಆರೋಪಿಸಿದ್ದಾರೆ.



ನೂತನ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಮೈಸೂರು ಜಿಲ್ಲಾ ಉಪ್ಪಾರ ಸಮಾಜದ ಜಿಲ್ಲಾಧ್ಯಕ್ಷ ಎಸ್.ಯೋಗಿಶ್ ಉಪ್ಪಾರ, ಮೈಸೂರು ಜಿಲ್ಲಾ ಕುಂಬಾರ ಸಮಾಜದ ಜಿಲ್ಲಾಧ್ಯಕ್ಷ ಹೆಚ್.ಎಸ್.ಪ್ರಕಾಶ್, ಮೈಸೂರು ಜಿಲ್ಲಾ ಮಡಿವಾಳ ಮಾಚಿದೇವರ ಸಮಾಜದ ಜಿಲ್ಲಾಧ್ಯಕ್ಷ ಎಸ್.ರವಿನಂದನ್ ಇತರರು ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೈ ಜವಾನಿ ತೋ ಇಷ್ಕ್ ಹೋನಾ ಹೈ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಪೆದ್ದಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಮ್ಯಾಂಗೋ ಪಚ್ಚ (ಕ)	4 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಲೋ ನವೀನ (ಕ)	4 ಪ್ರದರ್ಶನಗಳು

ಹುಟ್ಟುಹಬ್ಬ ಸಂಭ್ರಮ





ಮೈಸೂರಿನ ಜೆಡಿಎಸ್ ಮುಖಂಡ, ಮಾಜಿ ಮೇಯರ್ ಎಂ.ಜೆ.ರವಿಕುಮಾರ್(ಚಿನ್ನಿ ರವಿ) ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ವೇಳೆ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ, ನಗರ ಪಾಲಿಕೆ ಮಾಜಿ ಸದಸ್ಯರಾದ ಮಹದೇಶ್, ಪ್ರೇಮಾ ಶಂಕರೇಗೌಡ, ಮೈಮುಲ್ ಮಾಜಿ ಅಧ್ಯಕ್ಷ ಪಿ.ಎಂ.ಪ್ರಸನ್ನ, ಬಂದೀಗೌಡ, ಭೈರವ ಗ್ರೂಪ್ಸ್ ಮಾಲೀಕರಾದ ಮಹದೇವ್, ಕುಮಾರ್, ರಾಜ್‌ಕುಮಾರ್, ಕೃಷ್ಣಪ್ಪ, ರಮೇಶ್, ಜೈಪ್ರಕಾಶ್, ಜಗದೀಶ್, ಕೆಜಿ ಕೊಪ್ಪಲು ಕನ್ನಡ ಸ್ನೇಹ ಬಳಗದ ಸದಸ್ಯರು, ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಗೂ ಬೆಂಬಲಿಗರು ಚಿನ್ನಿ ರವಿ ಅವರಿಗೆ ಅಭಿನಂದಿಸಿ, ಶುಭಾಶಯ ಕೋರಿದರು.



ಮೈಸೂರು ನಗರದ ಜೆಡಿಎಸ್ ಪ್ರಧಾನ ಕಾರ್ಯದರ್ಶಿಗಳು
ಹಾಗೂ ಒಕ್ಕಲಿಗರ ಸಂಘ ಜನತಾ ನಗರದ ಅಧ್ಯಕ್ಷರಾದ
ಶ್ರೀ ಸುರೇಶ್
ಅವರಿಗೆ
50ನೇ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು
ದುರ್ಗಾ ಗ್ರೂಪ್ಸ್
VISMAYA
ADVERTISERS
8050302424